ಸೂತಭಾರತ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ (ರಿ) ಬೆಂಗಳೂರು-೧೯

ಸೂತ್ರ ಭಾರತ

ಅಥವಾ ಸ್ವರ್ಗಾರೋಹಣ ಪರ್ವ

ಪ್ರಧಾನ ಸಂಪಾದಕ :
ಎಂ. ವಿ. ಸೀತಾರಾಮಯ್ಯ

ಸಂಪಾದಕರು :
ಡಾ|| ಶ್ರೀಕೃಷ್ಣಭಟ್ ಅರ್ತಿಕಜೆ
ಎಂ. ಜಿ. ಹೆಗಡೆ ಹಲಸಿಗೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
೫೪, ೩ನೇ ಅಡ್ಡಬೀದಿ, ಗವಿಪುರಂ ವಿಸ್ತರಣ
ಬೆಂಗಳೂರು–೫೬೦ ೦೧೯

SŪTA BHĀRATA, also called *Swargārōhaṇa Parva*, a narrative poem by an anonymous poet, critically edited by Dr. A. SriKrishna Bhatt Artikaje, Department of Kannada, University of Madras and Sri M. G. Hegde Halasige. Chief Editor: Prof. M. V. Seetha Ramiah, Director of Studies, B.M Sri. Smaraka Pratishthana and Published by the Pratishthana, No. 54, 3rd Cross Road, Gavipuram Extension, Bangalore - 560 019. Demy 8vo. pp. viii + ೪೬ + 152. 1982.

Price: **Rs. 15-00**

This book has been published with the generous Financial Assistance of the Government of India, Department of Education and Culture, New Delhi.

Printed by: LIPI MUDRANA
Bugle Rock Road, Basavanagudi
Bangalore-560 019

ಮುನ್ನುಡಿ

ಶಿಲಾಶಾಸನಗಳು, ನಾಣ್ಯಗಳು, ಮಾಸ್ತಿಗಲ್ಲು–ವೀರಗಲ್ಲುಗಳು ಮತ್ತು ತಾಡವೋಲೆ, ಭೂರ್ಜಪತ್ರ ಮತ್ತು ಕಾಗದದ ಮೇಲೆ ಬರೆದ ಪ್ರಾಚೀನ ಹಸ್ತಪ್ರತಿಗಳು, ಬಖೈರುಗಳು, ಕಡತಗಳು, ಮುಂತಾದವು ದೇಶದ ಅಮೂಲ್ಯವಾದ ಸಾಂಸ್ಕೃತಿಕ ಆಸ್ತಿ. ದೇಶದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಇವುಗಳ ಪಾತ್ರ ಹಿರಿದು. ಇವುಗಳ ಸಂರಕ್ಷಣೆ ಸರಕಾರದ ಮತ್ತು ಎಲ್ಲ ಜನರ ಪವಿತ್ರ ಕರ್ತವ್ಯ.

ಹಸ್ತಪ್ರತಿಗಳಲ್ಲಿ ಸಾಹಿತ್ಯಕೃತಿಗಳಲ್ಲದೆ ವೈದ್ಯ, ಜ್ಯೋತಿಷ್ಯ, ಅಶ್ವಶಾಸ್ತ್ರ, ಗಜಶಾಸ್ತ್ರ, ಪಶುವೈದ್ಯ ಮುಂತಾದ ಶಾಸ್ತ್ರವಿಚಾರಗಳೂ ಲಿಖಿತವಾಗಿರುತ್ತವೆ. ಈ ಶಾಸ್ತ್ರಗಳಲ್ಲಿ ನಿಪುಣರಾದವರು ಅನೇಕ ಸಂದರ್ಭಗಳಲ್ಲಿ ಅವುಗಳನ್ನು ಕಾವ್ಯರಚನೆಯ ಧಾಟಿಯಲ್ಲಿಯೇ ಬರೆದಿರುವುದು ಒಂದು ವೈಶಿಷ್ಟ್ಯ. ಆದ್ದರಿಂದ, ಸಾಹಿತ್ಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಎಲ್ಲ ಹಸ್ತಪ್ರತಿಗಳೂ ಸಂಗ್ರಹಣವಾಗಬೇಕಾದವು. 1911ರಷ್ಟು ಹಿಂದೆಯೇ ದಿವಂಗತ ಬಿ. ಎಂ. ಶ್ರೀ. ಅವರು ಧಾರವಾಡದಲ್ಲಿ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ತಮ್ಮ ಹೊಸಗನ್ನಡ ಯುಗಪ್ರವರ್ತಕ ಭಾಷಣದಲ್ಲಿ "ದೇಶದಲ್ಲಿ ಹುಳುತಿಂದು ಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚು ಹಾಕುವುದು ಅಗತ್ಯ" ಎಂದು ಘೋಷಿಸಿದ್ದರು. ಅದಕ್ಕೂ ಮೊದಲೇ ಬಿ. ಎಲ್. ರೈಸ್ ಸಾಹೇಬರೂ ಆರ್. ನರಸಿಂಹಾಚಾರ್ಯರೂ ಹಸ್ತಪ್ರತಿ ಸಂಗ್ರಹಣ ಕಾರ್ಯವನ್ನು ಪ್ರಾಕ್ತನವಸ್ತ್ವನ್ವೇಷಣ ಕಾರ್ಯದ ಅಂಗವಾಗಿ ನಡೆಸಿಕೊಂಡು ಬಂದರು. ಹಸ್ತಪ್ರತಿಗಳ ಸಂಗ್ರಹಣ ಕಾರ್ಯದಷ್ಟೇ ಮುಖ್ಯವಾದ ಕಾರ್ಯ ಅವುಗಳನ್ನು ಬೆಳಕಿಗೆ ತರುವುದು. ಈ ಕಾರ್ಯವನ್ನು ರೈಸ್ ಅವರು Bibliotheca Carnatica ದ (ಕರ್ನಾಟಕ ಗ್ರಂಥಾವಳಿ) ಮೂಲಕ ಮಾಡಿ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಏಳಿಗೆಗೆ ಹೆದ್ದಾರಿಯನ್ನು ನಿರ್ಮಾಣಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿದಂತೆ ಮೈಸೂರಿನ ಓರಿಯಂಟಲ್ ಲೈಬ್ರರಿ ಆ ಕಾಲದಲ್ಲಿ ಜನ್ಮತಳೆಯಿತು. ಅದರಲ್ಲಿ ಅಮೂಲ್ಯವಾದ ಕನ್ನಡ ಮತ್ತು ಸಂಸ್ಕೃತದ ಹಸ್ತಪ್ರತಿಗಳು ಶೇಖರವಾದವು. ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದ ಮೇಲೆ ಕನ್ನಡ ಭಾಷೆಯ ಹಸ್ತಪ್ರತಿಗಳೆಲ್ಲವೂ ಅಲ್ಲಿಗೆ ಸ್ಥಳಾಂತರಗೊಂಡು ಅಲ್ಲಿ ಕನ್ನಡ ಹಸ್ತಪ್ರತಿಗಳ ಭಂಡಾರವೂ ಅವುಗಳ ಪ್ರಕಟನ

ಕಾರ್ಯವೂ ನಿರಂತರವಾಗಿ ಸಾಗಿಬರುತ್ತಿರುವುದು ಸಂತೋಷದ, ಶ್ಲಾಘ್ಯವಾದ, ವಿಚಾರ. ಇತರ ವಿಶ್ವವಿದ್ಯಾಲಯಗಳೂ ಈ ಸಂಸ್ಕೃತಿ ಸಂಶೋಧನ ಕಾರ್ಯವನ್ನು ಕೈಗೊಂಡು ನಡಸುತ್ತಿವೆ. ಈ ಮಹತ್ವದ ಕಾರ್ಯವನ್ನು ಬಿ. ಎಂ. ಶ್ರೀ. ಪ್ರತಿಷ್ಠಾನ ಸದ್ಯಕ್ಕೆ ತನ್ನ ಪ್ರಧಾನ ಕರ್ತವ್ಯಕಾರ್ಯವಾಗಿ ಕೈಗೆತ್ತಿಕೊಂಡಿದೆ.

ಈ ಮಹತ್ವದ ಕಾರ್ಯವು ಒಬ್ಬಿಬ್ಬರು ಅಥವಾ ಒಂದೆರಡು ಸಂಸ್ಥೆಗಳು ಮಾಡಿ ಮುಗಿಯುವಂಥದಲ್ಲ. ಆಗಬೇಕಾದ ಕಾರ್ಯ ಅಪಾರವಾಗಿದೆ. ಸಹಸ್ರ ಸಂಖ್ಯೆಯಲ್ಲಿ ಹಸ್ತಪ್ರತಿಗಳು ಇನ್ನೂ ನಾಡಿನ ಮೂಲೆಮೂಲೆಗಳಲ್ಲಿ ಮನೆತನದ ಆಸ್ತಿಯಾಗಿ ಕತ್ತಲಲ್ಲಿ ಕೊಳೆಯುತ್ತ ಹುಳುಕು ಹೋಗುವ ಸ್ಥಿತಿಯಲ್ಲಿ ಬಿದ್ದಿವೆ. ಇವುಗಳ ಸಂಗ್ರಹಣಕಾರ್ಯ ಅತ್ಯಗತ್ಯವಾಗಿ ತ್ವರಿತವಾಗಿ ಆಗಬೇಕಾಗಿದೆ. ಈ ಕಾರ್ಯದ ಮಹತ್ವವನ್ನು ಕಂಡುಕೊಂಡು ಕೇಂದ್ರ ಸರ್ಕಾರವು ಹಸ್ತಪ್ರತಿಗಳ ಸಂಗ್ರಹಣ ಮತ್ತು ಪ್ರಕಟನ ಕಾರ್ಯಗಳ ಯೋಜನೆಯನ್ನು ರೂಪಿಸಿ, ಅದರಂತೆ ಸ್ವಯಂ ನಿಯೋಜಿತ ಸಂಸ್ಥೆಗಳಿಗೆ ಧನಸಹಾಯ ಮಾಡಲು ಮುಂದೆಬಂದಿದೆ. ಕೇಂದ್ರ ಸರ್ಕಾರವು ನೀಡಿದ ಧನಸಹಾಯದಿಂದ ಈ ವರ್ಷ ಪ್ರತಿಷ್ಠಾನ ಮೂರು ನಾಲ್ಕು ಹಸ್ತಪ್ರತಿಗಳನ್ನು ಪ್ರಕಟಿಸಲು ಸಾಧ್ಯವಾಗಿದೆ. ಈ ಉದಾರ ಸಹಾಯಕ್ಕಾಗಿ ಪ್ರತಿಷ್ಠಾನ ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯ ಅನ್ವಯ ಪ್ರಕಟವಾಗುತ್ತಿರುವ ಗ್ರಂಥಗಳಲ್ಲಿ ಈ "ಸೂತಭಾರತ"ವೂ ಸೇರಿದೆ. ದೀರ್ಘಕಾಲ ಹಿಡಿಯುವ ಹಾಗೂ ಬಹು ಶ್ರಮಸಾಧ್ಯವಾದ ಗ್ರಂಥ ಸಂಪಾದನ ಕಾರ್ಯವನ್ನೂ ಮುದ್ರಣಕಾರ್ಯವನ್ನೂ ಒಂದು ವರ್ಷದ ಕಾಲಮಿತಿಯಲ್ಲಿ ಮುಗಿಸಿಕೊಟ್ಟು ಕೃತಕೃತ್ಯರಾದ ಸಂಪಾದಕ ವರ್ಗಕ್ಕೆ ಪ್ರತಿಷ್ಠಾನದ ವಂದನೆಗಳು ಸಲ್ಲುತ್ತವೆ.

ನಿಟ್ಟೂರು ಶ್ರೀನಿವಾಸ ರಾವ್
ಅಧ್ಯಕ್ಷ

ಬಿನ್ನಹ

ಶ್ರೀಯುತರಾದ ಡಾ|| ಶ್ರೀ ಶ್ರೀಕೃಷ್ಣ ಭಟ್ ಅರ್ತಿಕಜೆ ಅವರೂ ಶ್ರೀ ಎಂ. ಜಿ. ಹೆಗಡೆ ಹಲಸಿಗಿ ಅವರೂ ಜೊತೆಗೂಡಿ 'ಸೂತಭಾರತ' ಎಂಬ ಅಪ್ರಕಟಿತ ಕೃತಿಯನ್ನು ತಮಗೆ ದೊರೆತ ಏಕೈಕ ಹಸ್ತಪ್ರತಿಯ ಆಧಾರದಿಂದ ಸಂಪಾದನೆ ಮಾಡಿ ಪ್ರಕಟನೆಗೆ ಸಿದ್ಧಪಡಿಸುತ್ತಿರುವರೆಂದು ಡಾ|| ಆರ್. ಶೇಷಶಾಸ್ತ್ರಿಗಳ ಮೂಲಕ ನಮಗೆ ತಿಳಿದು ಬಂದಿತು. ಪ್ರತಿಷ್ಠಾನವು "ಮಣಿಹ" ಸಂಪುಟವನ್ನು ಸಿದ್ಧಪಡಿಸುತ್ತಿದ್ದ ಕಾಲ ಅದು. ಆಗ ಶ್ರೀ ಎಂ. ಜಿ. ಹೆಗಡೆ ಅವರು ಕನ್ನಡ ಸಾಹಿತ್ಯ ಪರಿಷತ್ತು ಕೈಗೆತ್ತಿಕೊಂಡಿದ್ದ 'ಜಾನಪದ ವೈದ್ಯಕೋಶ'ವೆಂಬ ಗ್ರಂಥನಿರ್ಮಾಣ ಕಾರ್ಯದ ಸಂಬಂಧದಲ್ಲಿ ಕ್ಷೇತ್ರಕಾರ್ಯಕರ್ತರಾಗಿ ಕೆಲಸಮಾಡುತ್ತಿದ್ದರು. ಪ್ರತಿಷ್ಠಾನದ ಪರವಾಗಿ ನಾವು ಪ್ರಾರ್ಥಿಸಿಕೊಂಡ ಕೂಡಲೆ ತಾವು ಸಂಪಾದನೆ ಮಾಡಿ ಅಚ್ಚಿಗೆ ಸಿದ್ಧಪಡಿಸಿದ್ದ 'ಸೂತಭಾರತ'ದ ಹಸ್ತಪ್ರತಿಯನ್ನೂ ಅದರ ಮಾತೃಕೆಯಾದ ಓಲೆಗರಿ ಗ್ರಂಥವನ್ನೂ ನಮಗೆ ಹಿಂದೆ ಮುಂದೆ ನೋಡದೆ ಒಪ್ಪಿಸಿಬಿಟ್ಟರು! ಅಪ್ರಕಟಿತ ಪ್ರಾಚೀನ ಹಸ್ತಪ್ರತಿಗಳ ಪ್ರಕಟನಕಾರ್ಯಕ್ಕೆಂದು ಕೇಂದ್ರ ಸರ್ಕಾರವು ನೀಡಿರುವ ಧನಸಹಾಯ ಯೋಜನೆಗೆ ಒಳಪಟ್ಟಂತೆ ಈ ಗ್ರಂಥವನ್ನು ಪ್ರಕಟಿಸಬಹುದೆಂದು ಪ್ರತಿಷ್ಠಾನದ ಕಾರ್ಯಸಮಿತಿ ತೀರ್ಮಾನಮಾಡಿತು. ಅದರಂತೆ ಈ 'ಸೂತಭಾರತ'ವನ್ನು ಪ್ರಕಟಿಸುತ್ತಿರುವುದಾಗಿದೆ. ಈ ಕೃತಿಯ ಪ್ರಕಟನೆಯ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ಪ್ರತಿಷ್ಠಾನ ಈ ಇಬ್ಬರು ತರುಣ ವಿದ್ವಾಂಸರಿಗೆ ಕೃತಜ್ಞತೆಯುಳ್ಳದ್ದಾಗಿದೆ.

'ಸೂತಭಾರತ'ದ ಕವಿ ಯಾರೆಂಬುದು ತಿಳಿದುಬಂದಿಲ್ಲ. ಈತ ಕುಮಾರವ್ಯಾಸನಿಂದ ಪ್ರಭಾವಿತನಾಗಿರುವುದನ್ನು ಸಂಪಾದಕರು ಪೀಠಿಕೆಯಲ್ಲಿ ಸೋದಾಹರಣವಾಗಿ ಸ್ಪಷ್ಟಪಡಿಸಿದ್ದಾರೆ. ಹಾಗೂ ಅನೇಕಾಂಶಗಳಲ್ಲಿ ಸಂಸ್ಕೃತ ಮೂಲ ವ್ಯಾಸಭಾರತದಿಂದ ಭಿನ್ನವಾಗಿರುವುದನ್ನು ಸವಿವರವಾಗಿ ತೋರಿಸಿಕೊಟ್ಟಿರುತ್ತಾರೆ. ಕಾವ್ಯದ ಸ್ವೋಪಜ್ಞತೆಯನ್ನು ಮನವರಿಕೆಮಾಡಿಕೊಳ್ಳಲು ಸಂಪಾದಕರ ಶ್ಲಾಘ್ಯವಾದ ಈ ತೋಲನ ವಿಮರ್ಶೆ ಸಾರ್ಥಕವಾಗಿದೆ. ಅಂತೆಯೇ ಅವರು ಬರೆದಿರುವ, ಕಾವ್ಯ ವಿಮರ್ಶೆಯನ್ನು ಒಳಗೊಂಡ ವಿಸ್ತಾರವಾದ ಪೀಠಿಕೆ ಕಾವ್ಯಸ್ವರೂಪವನ್ನು ಗ್ರಹಿಸಲು ಸಹಕಾರಿಯಾಗಿದೆ. ಅನುಬಂಧಗಳನ್ನು ಕೂಡ ಬಹುಶ್ರಮವಹಿಸಿ ತಯಾರಿಸಿದ್ದಾರೆ. ಈ ವಿದ್ವಾಂಸರಿಂದ ಇದೇ ರೀತಿಯ ಉತ್ತಮ ಮಟ್ಟದ ಗ್ರಂಥಸಂಪಾದನ ಕಾರ್ಯ ಮುಂದುವರಿದು, ಈ ಕ್ಷೇತ್ರದಲ್ಲಿ ಕಂಡುಬರುತ್ತಿರುವ ವಿದ್ವದಭಾವದ ಕೊರತೆ ಇಲ್ಲವಾಗಲು ನೆರವಾಗಲಿ ಎಂದು ಹಾರೈಸುತ್ತೇನೆ.

"ಬೇಕಾದಲ್ಲಿ ಪಾಠಪರಿಷ್ಕರಣಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ತಿದ್ದುಪಡಿಗಳನ್ನು ಮಾಡಲು" ಸಂಪಾದಕರು ನನಗೆ ಅವಕಾಶವಿತ್ತುದು ಅವರ ವಿಶಾಲಮತಿಗೆ ನಿದರ್ಶನ. ಇಲ್ಲಿ ಸ್ವಲ್ಪ ವಿವರಣೆ ಅಗತ್ಯ ಎನ್ನಿಸುತ್ತದೆ. ಈ ಹೆಚ್ಚಿನ ತಿದ್ದುಪಡಿಗಳನ್ನು ಮಾಡಲು ಅವರೂ ಸಮರ್ಥರೇ. ಮೂಲಪಾಠಗಳನ್ನು ಸಾಧ್ಯವಿದ್ದ ಮಟ್ಟಿಗೂ ಹಾಗೆಯೇ ಉಳಿಸಿಕೊಳ್ಳಬೇಕೆಂಬುದು ಅವರ ದೃಷ್ಟಿಯಾಗಿತ್ತು. ಹಾಗೆ ಮಾಡಿದ್ದರೆ ಲಿಪಿಕಾರನಿಂದ ಉಂಟಾದ ಎಷ್ಟೋ ಅಶುದ್ಧ ಪಾಠಗಳು, ಅಧಿಕಾಕ್ಷರ ನ್ಯೂನಾಕ್ಷರಗಳ ಕಾರಣದಿಂದ ಛಂದೋಭಂಗವಾಗುವ ಸಂದರ್ಭಗಳು, ಮುಂತಾದುವು ಉಳಿದುಕೊಂಡು ಓದುಗರಿಗೆ ಸುವಾಚನೀಯವಾದ ಪಾಠವು ಲಭ್ಯವಾಗುತ್ತಿರಲಿಲ್ಲ. ಸಂಪಾದಕರು ಪರಿಷ್ಕರಿಸಿ ಒಪ್ಪಿಸಿದ ಹಸ್ತಪ್ರತಿಯನ್ನು ಅವರಿಗೇ ಹಿಂದಕ್ಕೆ ಕಳಿಸಿ, ಹೆಚ್ಚಿನ ತಿದ್ದುಪಡಿಗಳನ್ನು ಅವರಿಂದಲೇ ಮಾಡಿಸಿ ತರಿಸುವುದೆಂದರೆ ಕಾಲಹರಣವಾಗುತ್ತಿತ್ತು. ಆದ್ದರಿಂದ ಮಾತ್ರ ಆ ಹೊಣೆಗಾರಿಕೆಯನ್ನು ನಾನೇ ವಹಿಸಿಕೊಳ್ಳುವುದು ಅನಿವಾರ್ಯವಾಯಿತು. ಅವರು ಮಾಡಿದ್ದ ಪರಿಷ್ಕರಣವನ್ನೂ ನಾನು ಪುನಃ ಪರಿಶೀಲನೆ ಮಾಡಿರುವುದರಿಂದ, ಪಾಠಪರಿಷ್ಕರಣದ ಲೋಪದೋಷಗಳಿಗೆ ನಾನೇ ಪೂರ್ತಿಯಾಗಿ ಬಾಧ್ಯ ಎಂದು ಸೂಚಿಸಬಯಸುತ್ತೇನೆ. ಮೂಲಪಾಠದ ಸ್ವರೂಪವನ್ನು ಅರಿಯ ಬಯಸುವವರಿಗೆ ಅಡಿಟಿಪ್ಪಣಿಗಳು ಸಹಾಯಕವಾಗುವುವು ಎಂದು ನಂಬಲಾಗಿದೆ.

ಸಂಪಾದಕರ ಕಾವ್ಯವಿಮರ್ಶೆಗೆ ಪೂರಕವಾಗಿ ಒಂದೆರಡು ಮಾತನ್ನು ಹೇಳಬಹುದು. ಕವಿ ಕುಮಾರವ್ಯಾಸನಿಂದ ಪ್ರಭಾವಿತನಾಗಿರುವುದು ಸ್ಪಷ್ಟವಾಗಿಯೇ ಇದೆ. ಕುಮಾರವ್ಯಾಸನನ್ನು ಮೆಚ್ಚಿಕೊಂಡು, ಅವನ ಪ್ರಭಾವಕ್ಕೆ ಒಳಗಾಗಿ ಭಾಮಿನಿ ಷಟ್ಪದಿಯಲ್ಲಿ ಕಾವ್ಯರಚನೆ ಮಾಡಿ, ಅಲ್ಲಲ್ಲಿ ಗದುಗಿನ ವೀರನಾರಾಯಣನ ಅಂಕಿತವನ್ನು ಬಳಸಿರುವ ಒಬ್ಬಿಬ್ಬರು ಕವಿಗಳು ನಮ್ಮ ಗಮನಕ್ಕೆ ಬಂದಿದ್ದಾರೆ. ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿ ಕನ್ನಡ ಭಾರತದ ಆದಿಪರ್ವದ ಕಥೆಯನ್ನು ಮಾತ್ರ ಉಳ್ಳ ಒಂದು ಹಸ್ತಪ್ರತಿ ಉಂಟು. ಈ ಒಂದು ಪರ್ವವೇ ಹೆಚ್ಚು ಕಡಮೆ ಕುಮಾರವ್ಯಾಸ ಭಾರತದ ದಶಪರ್ವಗಳ ಪ್ರಮಾಣದಷ್ಟಿರುವ ಹಾಗೆ ತೋರುತ್ತದೆ. ಈ ಕೃತಿಯ ಕವಿ ಕೂಡ ಯಾರೆಂಬುದು ಸ್ಪಷ್ಟವಿಲ್ಲ. ಇವನೂ ಅಲ್ಲಲ್ಲಿ ವೀರನಾರಾಯಣನ ಅಂಕಿತವನ್ನು ಬಳಸಿದ್ದಾನೆ. ಅವನ ಪ್ರಭಾವಕ್ಕೂ ಒಳಗಾಗಿರುವಂತಿದೆ. ವಿದ್ವಾನ್ ಕೆ. ವೆಂಕಟರಾಯಾಚಾರ್ಯರು ಈಚೆಗೆ ಪ್ರಕಟಿಸಿರುವ "ಸಾಹಿತ್ಯ ತರಂಗ" (ಪ್ರಬಂಧಗಳ ಸಂಕಲನ. 1981)ದಲ್ಲಿ ಈವರೆಗೆ ಪ್ರಕಟವಾಗಿಲ್ಲದ "ದೇವೀ ಮಹಾತ್ಮ್ಯೆ" ಎಂಬ ಅಜ್ಞಾತಕವಿಯ ಕೃತಿಯಿಂದ (ಬಹುಶಃ ಕೊನೆಯ ಸಂಧಿಯ) ೧೨ ಪದ್ಯಗಳನ್ನು ಉದ್ಧರಿಸಿಕೊಟ್ಟಿದ್ದಾರೆ (ಪು. 119–120). ಕೊನೆಯ ಫಲಶ್ರುತಿಯ ಪದ್ಯ ಹೀಗಿದೆ:

ಒಂದು ಪದವನು ಕೇಳಿದರೆ ಸಾ
ಕೊಂದು ಪದವನು ಹೇಳಿದರೆ ಸಾ
ಕೊಂದರ(ರ್ಥ)ದೊಳೆರಡು ವಾಕ್ಯವ ಕೇಳಿದರೆ ಸಾಕು
ಒಂದು ವಾಕ್ಯವ ಹೇಳಿದರಿಗೆಯು
ಒಂದು ವಾಕ್ಯವ ಕೇಳಿದರಿಗೆಯು
ಕುಂದದಿಹ ಪರಮಾಯುವೀವನು ವೀರನಾರಾಯಣ ॥೧೨॥

ಸೂತಭಾರತದ 13ನೆಯ ಸಂಧಿಯ ಕೊನೆಯ ಫಲಶ್ರುತಿಯ ಪದ್ಯದಲ್ಲಿಯ ಒಂದೆರಡು ಪಾಠವ್ಯತ್ಯಾಸಗಳನ್ನು ಬಿಟ್ಟರೆ, ಅದು ಮೇಲಿನ ಪದ್ಯವನ್ನು ತದ್ವತ್ತಾಗಿ ಹೋಲುತ್ತಿರುವುದು ಗಮನಾರ್ಹ :

ಒಂದು ಪದವನು ಕೇಳಿದರೆ ಸಾ
ಕೊಂದರೊಳಗರ್ಥವನು ಸಾಕಾ
ವೊಂದು ಅರ್ಥದೊಳೆರಡು ಚರಣವ ಕೇಳಿದರೆ ಸಾಕು
ಒಂದು ವಾಕ್ಯವ ಕೇಳಿದವರಿಗೆ
ಒಂದು ಅಕ್ಷರ ಕೇಳಿದವರಿಗೆ
ಕುಂದದಿಹ ಪರಪದವನೀವನು ವೀರನಾ[ಯ]ಣ [ಸಂ.೧೪-೨೦

ಕವಿಯ ಕಾಲ ಸು. 17–18ನೆಯ ಶತಮಾನ ಎಂದು ಶ್ರೀ ವೆಂಕಟರಾಯಾಚಾರ್ಯರು ಊಹಿಸುತ್ತಾರೆ. ಸೂತಭಾರತದ ಕವಿಯ ಕಾಲವೂ ಅದೇ ಎಂದು ಸಂಪಾದಕರ ಊಹೆ. 'ದೇವೀ ಮಹಾತ್ಮೆ'ಯ ಹಸ್ತಪ್ರತಿ ದ. ಕನ್ನಡದ್ದಾದರೆ, 'ಸೂತಭಾರತ' ಉತ್ತರ ಕನ್ನಡದ್ದು. ಎರಡು ಕೃತಿಗಳೂ ಏಕಕರ್ತೃಕವಾಗಿರಬಹುದೇ ಎಂಬ ಸಂದೇಹ ಸುಳಿಯುತ್ತದೆ. ಇದು ವಿಚಾರಣೀಯ; ಎರಡೂ ಕೃತಿಗಳ ತೌಲನಿಕ ಪರಿಶೀಲನದಿಂದ ಅವುಗಳ ನಡುವಣ ಭಾಷೆಶೈಲಿಗಳ ಸಾಮ್ಯ ದೃಢಪಟ್ಟರೆ, ಏಕಕರ್ತೃಕತ್ವದ ಊಹೆಗೆ ಸಮರ್ಥನೆ ದೊರೆಯಬಹುದು.

ಮಧ್ಯಮ ದರ್ಜೆಯದೆನ್ನಬಹುದಾದ 'ಸೂತಭಾರತದ' ಕಥಾ ವಿವರಗಳೂ ವರ್ಣನೆಗಳೂ ತಿಮ್ಮಣ್ಣ ಕವಿಯ ಕೃತಿಯ ಅದೇ ಕಥಾಭಾಗಕ್ಕಿಂತ ಹೆಚ್ಚು ಸ್ವಾರಸ್ಯವಾಗಿರುವುದರಿಂದ ಪ್ರಾಚೀನ ಕನ್ನಡ ಕಾವ್ಯಪ್ರೇಮಿಗಳ ಆದರಕ್ಕೆ ಈ ಕೃತಿ ಪಾತ್ರವಾದೀತು ಎಂದು ನಂಬಬಹುದು.

ಅನೇಕ ಎಡರುತೊಡರುಗಳಿದ್ದರೂ ಪುಸ್ತಕವನ್ನು ಸಕಾಲಕ್ಕೆ ಅಂದವಾಗಿ ಅಚ್ಚುಮಾಡಿಕೊಟ್ಟ ಲಿಪಿ ಮುದ್ರಣದ ಒಡೆಯರಿಗೂ ಕೆಲಸಗಾರರಿಗೂ ಪ್ರತಿಷ್ಠಾನದ ವಂದನೆಗಳು.

೪–೧೨–೧೯೮೨
ಬೆಂಗಳೂರು

ಎಂ. ವಿ. ಸೀತಾರಾಮಯ್ಯ
ಪ್ರಧಾನ ಸಂಪಾದಕ

ಪರಿವಿಡಿ

ಪೀಠಿಕೆ

ಕಾವ್ಯದ ಹೆಸರಿನ ಔಚಿತ್ಯ: ಕವಿ ಆರಂಭದಲ್ಲಿ 'ಸ್ವರ್ಗಾರೋಹಣ ಬರೆವುದಕ್ಕೆ ಶುಭಮಸ್ತು' ಎಂದೂ ಹದಿಮೂರನೇ ಸಂಧಿಯ ಕೊನೆಯಲ್ಲಿ 'ಸ್ವರ್ಗಾರೋಹಣ ಸಮಾಪ್ತ' ಎಂದು ಹೇಳಿಕೊಂಡಿದ್ದರೂ ಕೃತಿಯ ಕೊನೆಯಲ್ಲಿ 'ಸೂತ ಭಾರತ ಸಮಾಪ್ತ' ಎಂದು ಹೇಳಿದ್ದಾನೆ. ಈ ಕಾವ್ಯದ ಕಥಾಂಶವು ಹೆಚ್ಚಿನಂಶ ವ್ಯಾಸಭಾರತದ ಮಹಾಪ್ರಸ್ಥಾನ ಪರ್ವ ಹಾಗೂ ಸ್ವರ್ಗಾರೋಹಣ ಪರ್ವಗಳಲ್ಲಿರುವ ಕಥಾಂಶವೇ ಆಗಿದೆ. ಹದಿಮೂರನೆಯ ಸಂಧಿಯ ಹದಿನೇಳನೆಯ ಪದ್ಯದಲ್ಲಿ ಕವಿ ತಾನು ಈ ಕೃತಿಯಲ್ಲಿ ಸ್ವರ್ಗಾರೋಹಣದ ಕಥೆಯನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಆದರೆ ಅದೇ ಸಂಧಿಯ ಹದಿನೆಂಟನೆಯ ಪದ್ಯದಲ್ಲಿ—

> ವರ ಮಹಾದಿವ್ಯಾಸ ದೇವೋ
> ತ್ತಮನ ಪದವಿಡಿದನುಪಮದ ಕೃತಿ
> ಯಿದನು ಕೇಳ್ದರೆ [ನಿರುತ ದೊರೆವುದು] ಸಕಲ ಸಿದ್ಧಿಯದು

ಎಂದು ಹೇಳಿ ತನ್ನದು ವ್ಯಾಸಭಾರತವನ್ನೇ ಅನುಸರಿಸಿ ಬರೆದ ಉತ್ತಮ ಕೃತಿಯೆಂದು ಹೇಳಿದ್ದಾನೆ. ಅದೇ ಸಂಧಿಯ ಹತ್ತೊಂಬತ್ತನೆಯ ಪದ್ಯದ ಆರಂಭದಲ್ಲಿ 'ಈ ಮಹಾಭಾರತದ ಕಥೆಯನು' ಎಂಬ ಉಲ್ಲೇಖಿಸಿರುವುದರಿಂದ ಕವಿ ತನ್ನ ಕಾವ್ಯವನ್ನು ಮಹಾಭಾರತವೆಂದು ಕರೆದಿರುವುದು ಸ್ಪಷ್ಟ. ಈ ಕಾವ್ಯದ ವಸ್ತು ಪಾಂಡವರ ಸ್ವರ್ಗಾರೋಹಣದ ವಿಚಾರವಾದರೂ ಕವಿ ಹದಿನಾಲ್ಕನೆಯ ಸಂಧಿಯಲ್ಲಿ ಮಹಾಭಾರತದ ಹದಿನೆಂಟು ಪರ್ವಗಳ ಕಥೆಯನ್ನು ಹದಿನೆಂಟು ಪದ್ಯಗಳಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾನೆ. ಆದುದರಿಂದ ಒಂದು ರೀತಿಯಲ್ಲಿ ಭಾರತದ ಒಟ್ಟು ಕಥೆ ಇಲ್ಲಿರುವುದರಿಂದ ಕವಿ ತನ್ನ ಕಾವ್ಯವನ್ನು ಸೂತಭಾರತವೆಂದು ಕೊನೆಯಲ್ಲಿ ಕರೆದಿರಲು ಸಾಧ್ಯವಿದೆ. ಕವಿ ಭಾರತದ ಕಥೆಯನ್ನು ಪೂರ್ತಿಯಾಗಿ ಭಾಮಿನೀ ಷಟ್ಪದಿಯಲ್ಲಿ ಬರೆದಿದ್ದು, ಈ ಸ್ವರ್ಗಾರೋಹಣವು ಅದರ ಒಂದು ಭಾಗವಾಗಿರಬಹುದೇ ಎಂದು ಊಹಿಸಲೆಡೆಯಿದೆ. ಆದರೆ ಆ ಊಹೆಗೆ ತಕ್ಕ ಆಧಾರವಿಲ್ಲ. ಏಕೆಂದರೆ, ಹಾಗಾಗಿದ್ದಲ್ಲಿ ಈ ಕಾವ್ಯದ ಆರಂಭದಲ್ಲಿ ಯಾವುದೇ ಕಾವ್ಯಾರಂಭದಲ್ಲಿರುವಂತೆ ದೇವತಾಸ್ತುತಿಯ ಪದ್ಯಗಳು ಇರುತ್ತಿರಲಿಲ್ಲ. ಅಲ್ಲದೆ ಕಾವ್ಯದ ಕೊನೆಯಲ್ಲಿ 'ಸೂತ ಭಾರತ ಸಮಾಪ್ತ' ಎಂಬಲ್ಲಿರುವ ಪದ್ಯಗಳ ಸಂಖ್ಯೆಯೂ ಹೆಚ್ಚಾಗಿರುತಿತ್ತು. ಈ ಎಲ್ಲಾ ಕಾರಣಗಳಿಂದ ಇದು ಒಂದು ಸ್ವಯಂಪೂರ್ಣ ಸ್ವತಂತ್ರವಾದ ಕಾವ್ಯ ಹೊರತಾಗಿ ಬೇರೆಯ ಕಾವ್ಯದ ಭಾಗವಲ್ಲವೆಂದು ಹೇಳಬಹುದು.

ಕವಿ ಇದನ್ನು 'ಸೂತ ಭಾರತ'ವೆಂದು ಕರೆಯಲು ಕಾರಣವೇನು? ಎಂಬುದಕ್ಕೆ ಸರಿಯಾದ ಆಧಾರಗಳೇನೂ ದೊರೆಯುವುದಿಲ್ಲ. ಸೂತ ಎಂಬ ಪದಕ್ಕೆ ಕಿಟೆಲ್ ಕೋಶದಲ್ಲಿ (Vol. 4, ಪು. 1658, 1971) "a man of a mixed caste, the son of a Kshatriya-father and Brahmana mother ಎಂದೂ a teacher of the Puranas–ಪುರಾಣಿಕ"–ಎಂದೂ ಅರ್ಥಗಳನ್ನು ಕೊಡಲಾಗಿದೆ.

ಪಂಡಿತ ಯಜ್ಞನಾರಾಯಣ ಉಡುಪರ 'ಪುರಾಣ ಭಾರತ ಕೋಶ'ದಲ್ಲಿ (ಪುಟ 681, 1975) ಸೂತ ಎಂಬುದಕ್ಕೆ (1) ನೈಮಿಷಾರಣ್ಯವಾಸಿಗಳಾದ ಋಷಿಗಳಿಗೆ ಇತಿಹಾಸ ಪುರಾಣಗಳನ್ನು ಹೇಳಿದ ಮಹರ್ಷಿ. ಈತನಿಗೆ ರೋಮಹರ್ಷಣನೆಂಬ ಹೆಸರಿದೆ. (2) ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷತ್ರಿಯ ಬೀಜದಿಂದ ಹುಟ್ಟಿದ ಸಂತತಿ; ಪೃಥು ಚಕ್ರವರ್ತಿಯು ಯಾಗ ಮಾಡುವಾಗ ಇಂದ್ರನಿಗಾಗಿ ಕೊಟ್ಟ ಹವಿಸ್ಸು ಸೇರಿ ಹೋಮ ಮಾಡಲ್ಪಟ್ಟಿರುವುದರಿಂದ ಸೂತಕುಲ ಉಂಟಾಯಿತು, ಎಂದೂ ಹೇಳಲಾಗಿದೆ.

ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರ ಶಾಸ್ತ್ರಿಗಳು ಸಂಪಾದಿಸಿದ 'ಪುರಾಣನಾಮ ಚೂಡಾಮಣಿ'ಯಲ್ಲಿ (ಪುಟ 662, 1941) ಸೂತ ಎಂಬುದಕ್ಕೆ, ಒಬ್ಬ ಮಹರ್ಷಿ, ನೈಮಿಷಾರಣ್ಯವಾಸಿಗಳಾದ ಮಹರ್ಷಿಗಳಿಗೆ ಅನೇಕ ಪುರಾಣಗಳನ್ನೂ ಇತಿಹಾಸಗಳನ್ನೂ ತಿಳಿಸಿದ. ಇವನಿಗೆ ರೋಮಹರ್ಷಣನೆಂಬ ನಾಮಾಂತರ —ಎಂದು ಹೇಳಿದೆ.

'ಯುಗಯಾತ್ರೀ ಭಾರತೀಯ ಸಂಸ್ಕೃತಿ'ಯಲ್ಲಿ (ಭಾಗ 2, ಪುಟ 178–79, 1971) "ಹಾಲಿ ಇರುವ ಎಲ್ಲ ಪುರಾಣಗಳಲ್ಲೂ ರೋಮಹರ್ಷಣನೇ ಕಥೆ ಹೇಳುವವನು. ಪುರಾಣಗಳು, ಮಹಾಭಾರತ ಮತ್ತು ಸ್ಮೃತಿಗಳು ಹೇಳುವಂತೆ ಇವನೇ ಸೂತ. ರಾಜಾಸ್ಥಾನಗಳಲ್ಲಿ ಹಾಡುಕವಿತೆಯ ವೃತ್ತಿಯನ್ನು ಅನುಸರಿಸುವವನು. ಕ್ಷತ್ರಿಯ ತಂದೆ ಮತ್ತು ಬ್ರಾಹ್ಮಣ ತಾಯಿಗೆ ಹುಟ್ಟಿದವನು" ಎಂಬುದಾಗಿ ತಿಳಿಸಲಾಗಿದೆ.

ಈ ಮೇಲಿನ ವಿಚಾರಗಳಿಂದ ರೋಮಹರ್ಷಣನೆಂಬ ಮಹರ್ಷಿಗೆ 'ಸೂತ'ನೆಂಬ ಹೆಸರು ಪ್ರಸಿದ್ಧವಾಗಿತ್ತೆಂದೂ ಆತನು ಇತಿಹಾಸ–ಪುರಾಣಗಳನ್ನು ಹೇಳುತ್ತಿದ್ದನೆಂದೂ ವ್ಯಕ್ತವಾಗುತ್ತದೆ. ಇವನು ಮಹಾಭಾರತದ ಕಥೆಯನ್ನು ಹೇಳುತ್ತಿದ್ದಿರಬೇಕು. ಆದುದರಿಂದ ಮಹಾಭಾರತಕ್ಕೆ ಮುಂದೆ 'ಸೂತ ಭಾರತ'ವೆಂಬ ಹೆಸರು ಬಂದಿದ್ದರೂ ಇರಬಹುದು. ಹಾಗಾಗಿ ಭಾರತದ ಕಥೆಯ ಒಂದಂಶವಾದ ಸ್ವರ್ಗಾರೋಹಣದ ಕಥೆಯನ್ನೊಳಗೊಂಡ ಈ ಕಾವ್ಯಕ್ಕೆ 'ಸೂತ ಭಾರತ'ವೆಂಬ ಹೆಸರನ್ನು ಕವಿ ಕೊಟ್ಟಿರಬಹುದೇನೋ? ಆದರೆ ಇವೆಲ್ಲಾ ಕೇವಲ ಊಹೆ ಮಾತ್ರ.

'ಸೂತ ಭಾರತ'ವೆಂಬ ಹೆಸರು ಈ ಕಾವ್ಯಕ್ಕೆ ಬರುವುದಕ್ಕೆ ಇನ್ನೊಂದು ಮುಖ್ಯ ಕಾರಣವನ್ನು ಕಂಡುಕೊಳ್ಳಬಹುದಾಗಿದೆ. ಕಿಟೆಲ್ ಕೋಶದಲ್ಲಿ (ಭಾಗ 4, ಪುಟ 1658–1971) 'ಸೂತ' ಎಂಬ ಪದಕ್ಕೆ impelled, sent, despatched,

gone, departed ಎಂಬ ಅರ್ಥಗಳನ್ನೂ ಕೊಡಲಾಗಿದೆ. ಇಲ್ಲಿ despatched ಮತ್ತು departed ಎಂಬ ಎರಡು ಅರ್ಥಗಳನ್ನೂ ಮುಖ್ಯವಾಗಿಟ್ಟುಕೊಂಡು 'ಸೂತ' ಎಂಬುದರ ಅರ್ಥವನ್ನು ವಿವೇಚಿಸಬಹುದು. despatch ಎಂದರೆ ಕಳುಹಿಸಿಕೊಡು, ಕವಾನಿಸು, ಯಮಲೋಕಕ್ಕೆ ಕಳುಹಿಸು ಎಂಬುದಾಗಿಯೂ depart ಎಂಬುದಕ್ಕೆ ಹೊರಟುಹೋಗು, ಹೊರಡು, ಬೀಳ್ಕೊಳ್ಳು, ತೆರಳು, ಮರಣಹೊಂದು ಎಂಬುದಾಗಿಯೂ ಅರ್ಥಗಳಿವೆ. ಸೂತ ಭಾರತದಲ್ಲಿರುವ ಸ್ವರ್ಗಾರೋಹಣದ ಕಥೆಯಲ್ಲಿ ಭೀಮಾರ್ಜುನರು, ನಕುಲ ಸಹದೇವರು, ಕುಂತಿ ಮತ್ತು ದ್ರೌಪದಿಯರೆಲ್ಲರೂ ಒಬ್ಬೊಬ್ಬರಾಗಿ ಬಿದ್ದು ಮರಣಹೊಂದುವ ಹಾಗೂ ಯುಧಿಷ್ಠಿರನು ಅವರೆಲ್ಲರನ್ನೂ ಬಿಟ್ಟು ಸಶರೀರಿಯಾಗಿ ಸ್ವರ್ಗಕ್ಕೆ ಹೋಗುವ ಹಾಗೂ ಕೊನೆಯಲ್ಲಿ ಕೃಷ್ಣನ ಅನುಗ್ರಹದಿಂದ ಪಾಂಡವರೆಲ್ಲರೂ ಕೈವಲ್ಯಪದವನ್ನು ಹೊಂದುವ ಕಥೆಯಿದೆ. ಈ ಬಗ್ಗೆ ಕವಿಯು ಕಾವ್ಯದ ಕೊನೆಯಲ್ಲಿ—

ನಡೆದರೈ ಪಾಂಡವರು ಯೆಲ್ಲರು
ಗಡಣದಲಿ ಹಿಮಗಿರಿಯ ಹೊಯಿಲಲಿ
ನಡುಗಿ ಬಸವಳಿದಲ್ಲಿ ಕೈಕಾಲ್ಮುರುಟಿ ನೆರೆಬಿದ್ದು
ಮಡಿದರೆಲ್ಲರು ಧರ್ಮರಾಯಗೆ
ಕಡೆಯಲರಿವಾಯ್ತಾಗ ಹರಿಹರ
ಬಿಡದೆ ಮುಕ್ತಿಯನಿತ್ತ ಸ್ವರ್ಗಾರೋಹ ಪರ್ವದಲಿ (14–18)

ಎಂದು ಹೇಳಿದ್ದಾನೆ. ಈ ರೀತಿ ಅಗಲುವ ಹಾಗೂ ಮರಣ ಹೊಂದಿ ಸ್ವರ್ಗವನ್ನು ಸೇರುವ ಕಥೆಯಿರುವುದರಿಂದಲೇ ಕವಿ ಈ ಕಾವ್ಯವನ್ನು 'ಸೂತ ಭಾರತ' ಎಂಬುದಾಗಿ ಕರೆದಿರಬೇಕೆಂಬುದು ಹೆಚ್ಚು ಸಮಂಜಸವಾಗುತ್ತದೆ.

ಕವಿಯ ಕಾಲವಿಚಾರ: ಸೂತ ಭಾರತವನ್ನು ಬರೆದ ಕವಿಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಕಾವ್ಯದಲ್ಲಾಗಲೀ ಇತರ ಕಡೆಯಲ್ಲಾಗಲೀ ದೊರೆಯುವುದಿಲ್ಲ. ಕವಿಯು ತನ್ನ ವಿಚಾರವಾಗಿ ಕಾವ್ಯದಲ್ಲಿ ಏನನ್ನೂ ಹೇಳಿಕೊಂಡಿಲ್ಲ. ಇವನು ಕುಮಾರವ್ಯಾಸನನ್ನು ಮಾತ್ರವೇ ಸ್ಮರಿಸಿದ್ದಾನೆ:

ವರ ಮಹಾಭಾರತವ ರಚಿಸಿದ
ಸಿರಿಕುಮಾರವ್ಯಾಸ ದೇವರ
ಚರಣವನು ನೆನೆಯುತ್ತ ಸ್ವರ್ಗಾರೋಹಣದ ಕಥೆಯ (13–17)

ಈ ಕಾರಣದಿಂದ ಸೂತ ಭಾರತವನ್ನು ಬರೆದ ಕವಿ ಕುಮಾರವ್ಯಾಸನಿಗಿಂತ ಅನಂತರದವನು ಎಂಬುದು ಸ್ಪಷ್ಟವಾಗುತ್ತದೆ. ಕೆಲವು ಪದ್ಯಗಳ ಅಂತ್ಯದಲ್ಲಿ "ಗದುಗಿನ ವೀರನಾರಾಯಣ" ಎಂಬ ಅಂಕಿತವೂ ಬರುವುದರಿಂದ ಈ ಕಾವ್ಯವನ್ನು ಕುಮಾರವ್ಯಾಸನೇ ರಚಿಸಿರಬಹುದೇ ಎಂಬ ಸಂಶಯವುಂಟಾಗಬಹುದು. ಆದರೆ

ಕವಿಯು ಮೇಲಿನ ಪದ್ಯದಲ್ಲಿ ಕುಮಾರವ್ಯಾಸನನ್ನು ಸ್ಮರಿಸಿರುವುದರಿಂದ ಈ ಕಾವ್ಯವನ್ನು ಬರೆದವನು ಕುಮಾರವ್ಯಾಸನಲ್ಲವೆಂಬುದು ದೃಢವಾಗುತ್ತದೆ. ಕಾವ್ಯದ ಆರಂಭದಲ್ಲಿ ಕವಿ ವ್ಯಾಸಮುನಿಯನ್ನು ವಂದಿಸಿದ್ದಾನೆ. ಅಲ್ಲದೆ ತನ್ನ ಕೃತಿ "ವರಮಹಾದಿ ವ್ಯಾಸದೇವೋಕ್ತಮನಪದವಿಡಿದನುಪಮದ ಕೃತಿ" ಎಂದು ಹೇಳುವಲ್ಲಿ ವ್ಯಾಸನ ಹೆಸರಿನ ಉಲ್ಲೇಖವಿದೆ. ಕನ್ನಡದ ಹಾಗೂ ಸಂಸ್ಕೃತದ ಇತರ ಯಾವ ಕವಿಗಳ ಉಲ್ಲೇಖವೂ ಈ ಕಾವ್ಯದಲ್ಲಿಲ್ಲ. ಕುಮಾರವ್ಯಾಸ, ರಾಘವಾಂಕ ಹಾಗೂ ಲಕ್ಷ್ಮೀಶರ ಪ್ರಭಾವ ಸೂತ ಭಾರತದ ಮೇಲೆ ಸ್ವಲ್ಪಮಟ್ಟಿಗೆ ಆಗಿರುವುದು ಕಂಡು ಬರುವುದರಿಂದ ಸೂತ ಭಾರತದ ಕವಿ ಲಕ್ಷ್ಮೀಶನಿಗಿಂತಲೂ ತೀರ ಈಚೆಯವನಿರ ಬೇಕೆಂಬ ಸಂದೇಹ ಬಲವಾಗುತ್ತದೆ.

ಕುಮಾರವ್ಯಾಸನು ಮಹಾಭಾರತದ ಹತ್ತು ಪರ್ವಗಳನ್ನು ಮಾತ್ರವೇ ಕನ್ನಡದಲ್ಲಿ ಬರೆದಿದ್ದಾನೆ. ಕೃಷ್ಣದೇವರಾಯನ (1509–1529) ಆಸ್ಥಾನದಲ್ಲಿದ್ದ ತಿಮ್ಮಣ್ಣ ಕವಿ ಕುಮಾರವ್ಯಾಸನಿಂದ ಸ್ಫೂರ್ತಿ ಪಡೆದು ಉಳಿದ ಪರ್ವಗಳನ್ನು ಭಾಮಿನೀ ಷಟ್ಪದಿಯಲ್ಲಿ ಬರೆದು ಕನ್ನಡ ಮಹಾಭಾರತವನ್ನು ಪೂರ್ತಿಗೊಳಿಸಿದ. ಕೃಷ್ಣದೇವರಾಯನ ಆಜ್ಞೆಯಂತೆ ಬರೆದ ತನ್ನ ಕೃತಿಗೆ ತಿಮ್ಮಣ್ಣನು 'ಕೃಷ್ಣರಾಯ ಭಾರತ' ಎಂಬ ಹೆಸರನ್ನಿಟ್ಟಿದ್ದಾನೆ. ವ್ಯಾಸ ಭಾರತವನ್ನೇ ಅನುಸರಿಸಿ ಬರೆದರೂ ತಿಮ್ಮಣ್ಣನ ಮೇಲೆ ತೆಲುಗಿನ ಕವಿ 'ತಿಕ್ಕಣ್ಣ'ನ ಪ್ರಭಾವವಾಗಿದೆಯೆಂದು ವಿಮರ್ಶಕರು ಹೇಳುತ್ತಾರೆ. ತಿಮ್ಮಣ್ಣನು ಬರೆದ ಭಾರತದಲ್ಲಿರುವ ಪಾಂಡವರ ಮಹಾಪ್ರಸ್ಥಾನದ ಮತ್ತು ಸ್ವರ್ಗಾರೋಹಣದ ಕಥೆ ಮೂಲ ಮಹಾಭಾರತದ ಕಥೆಗಿಂತ ಭಿನ್ನವಾಗಿಲ್ಲ. 'ಸೂತ ಭಾರತ'ಕ್ಕೆ 'ಸ್ವರ್ಗಾರೋಹಣ' ಎಂಬ ನಾಮಾಂತರವಿದ್ದರೂ ಅದರಲ್ಲಿ ಮಹಾ ಪ್ರಸ್ಥಾನಪರ್ವದ ಕಥೆಯೂ ಅಡಕವಾಗಿದೆ. ತಿಮ್ಮಣ್ಣನ ಭಾರತಕ್ಕೂ ಸೂತ ಭಾರತಕ್ಕೂ ಯಾವುದೇ ರೀತಿಯ ಸಂಬಂಧ ಕಂಡುಬರುವುದಿಲ್ಲ. ಸೂತ ಭಾರತದ ಕವಿಯು ತಿಮ್ಮಣ್ಣನಿಗಿಂತಲೂ ಈಚೆಗೆ ಸುಮಾರು ಹದಿನೇಳನೆಯ ಅಥವಾ ಹದಿನೆಂಟನೆಯ ಶತಕದ ಕಾಲದಲ್ಲಿದ್ದಿರಬೇಕು. ಏನಿದ್ದರೂ ಕವಿಯ ಕಾಲದ ಬಗ್ಗೆ ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಕವಿಯ ಕಾಲವಾಗಲಿ ಹೆಸರಾಗಲಿ ಕಾವ್ಯದಲ್ಲೆಲ್ಲೂ ಉಲ್ಲೇಖವಾಗಿಲ್ಲ.

ಕುಮಾರವ್ಯಾಸನಂತೆ ಕವಿ ಗದುಗಿನ ವೀರನಾರಾಯಣನ ಭಕ್ತನೆಂದು ತಿಳಿಯುತ್ತದೆ. ಸೂತ ಭಾರತದ ಏಳನೆಯ ಸಂಧಿ, ಹನ್ನೆರಡನೆಯ ಸಂಧಿಗಳ ಕೊನೆಯ ಪದ್ಯಗಳಲ್ಲಿಯೂ ಹದಿಮೂರನೆಯ ಸಂಧಿಯ ಹದಿನಾರನೆಯ ಪದ್ಯದ ಕೊನೆಯಲ್ಲಿಯೂ 'ಗದುಗಿನ ವೀರನಾರಯಣ' ಎಂದೂ, ಹದಿಮೂರನೆಯ ಸಂಧಿಯ ಕೊನೆಯ ಪದ್ಯದಲ್ಲಿ 'ವೀರನಾರಯಣ' ಎಂದೂ ಕವಿ ಹೇಳಿದ್ದಾನೆ. ಐದನೆಯ ಸಂಧಿಯಲ್ಲಿ ದ್ರೌಪದಿ ಬೇಡರ ಪಡೆಯಲ್ಲಿ ಸಿಕ್ಕಿದಾಗ ಕೃಷ್ಣನನ್ನು ಧ್ಯಾನಿಸುತ್ತಾ ತನ್ನನ್ನು ರಕ್ಷಿಸೆಂದು ಗೋಳಿಡುವ ಸನ್ನಿವೇಶವಿದೆ. ಕೃಷ್ಣನ ಮಹಿಮೆಯಿಂದ ಇಲ್ಲಿಯೂ ಅವಳ

ರಕ್ಷಣೆಯಾಗುತ್ತದೆಂದು ಕವಿ ನಿರೂಪಿಸಿದ್ದಾನೆ. ಹನ್ನೊಂದನೆಯ ಸಂಧಿಯಲ್ಲಿ ಕೃಷ್ಣನ ಸ್ತೋತ್ರ ಮಾಡುತ್ತಾ ಕೃಷ್ಣನ ಲೀಲೆ, ಮಹಿಮೆ ಹಾಗೂ ಹತ್ತವತಾರಗಳ ವಿಚಾರಗಳನ್ನು ಕವಿ ಸಂಕ್ಷಿಪ್ತವಾಗಿ ವರ್ಣಿಸಿದ್ದಾನೆ :

ಹರಿಯು ಲೀಲಾ ಮಾತ್ರವೆಲ್ಲವು
ಹರಿಸುತಿಹ ಜಗದೊಳಗೆ ಯಾ
ಹರಿಯೊಳಗೆ ಜಗವಿಹುದು ಸರ್ವಂ ವಿಷ್ಣುಮಯ ಜಗವು (13-13)

ಎಂದು ಹೇಳಿ ಇಡೀ ವಿಶ್ವವೇ ವಿಷ್ಣುಮಯವೆಂಬ ತತ್ತ್ವವನ್ನು ಸಾರಿದ್ದಾನೆ. ಇದಲ್ಲದೆ ಸಂದರ್ಭಕ್ಕೆ ತಕ್ಕಂತೆ ಅಲ್ಲಲ್ಲಿ ಪಾಂಡವರು ಕೃಷ್ಣನನ್ನು ನೆನೆಯುವ, ಧ್ಯಾನಿಸುವ ಸನ್ನಿವೇಶಗಳಿವೆ. ಇದರಿಂದ ಕವಿಗೆ ಕುಮಾರವ್ಯಾಸನಂತೆಯೆ ಕೃಷ್ಣನಲ್ಲಿದ್ದ ಅಪಾರ ಭಕ್ತಿಯು ಅರಿವಾಗುವುದು. ಕವಿ ತನ್ನ ಕೃತಿಯಲ್ಲಿ ಶಿವನಿಗೂ ಕೃಷ್ಣನಷ್ಟೇ ಮಹತ್ವವನ್ನೂ ಪ್ರಾಧಾನ್ಯವನ್ನೂ ಕೊಟ್ಟು ಹರಿಹರರಲ್ಲಿ ಭೇದವಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾನೆ :

ಎಲ್ಲಿ ಶಿವಮಯವಲ್ಲಿ ವಿಷ್ಣುವೆ
ಯೆಲ್ಲಿ ಹರಿಮಯವಲ್ಲಿ ಶಿವನಿಹ
ನಲ್ಲಿಯೂ ಹರಿಮಯವದಲ್ಲದೆ ಬೇರೆ ತಾವಿಲ್ಲ
ಬಲ್ಲ ಶಾಸ್ತ್ರಸ್ಮೃತಿ ನಿಕರ ತಾ
ವೆಲ್ಲಿ ಸಾರುತ್ತಿಹವು ಭೇದವ
ನಲ್ಲಿ ಕಾಂಬವರ್ಗಹುದು ದುರ್ಗತಿಯೆಂದನಾ ಮುನಿಪ (12-4)

ಧರ್ಮರಾಯನು ಪುರದ ಜನರಿಗೆ—" ಸ್ವರ್ಗದ ಭೋಗ ಸುಖವನನುಭವಿಪ ಕಾರಣದಿ ಮುರಹರನ ಸಾರುವದು ಮತ್ತೀಶ್ವರನ ಭಜಿಸುತ್ತಮಳ ಸುಖದೊಳು ಹರುಷದಿಂದೋಲಗಿಸಬೇಹುದು ಹರಿಯ ಚರಣವನು" (3-15) ಎನ್ನುತ್ತಾನೆ.

ದ್ರೌಪದಿ ಬೇಡರ ಪಡೆಯಲ್ಲಿ ಸಿಲುಕಿ ಕಷ್ಟಕ್ಕೆ ಗುರಿಯಾದಾಗ ಕೃಷ್ಣನನ್ನು ಧ್ಯಾನಿಸುವಂತೆ—

ಪತಿಗಳವರಂಜಿದರು ನೀನೇ
ಗತಿ ಕಣಾ ಕಾರುಣ್ಯನಿಧಿ ಪಶು
ಪತಿ ಅನಾಥೆಗೆ ನಾಥ ನೀನಯ್ ಕರುಣಿ ಶಶಿಮೌಳಿ (5-14)

ಎಂದು ಶಿವನನ್ನು ಬೇಡುತ್ತಾಳೆ.

ಪಾಂಡವರು ಪದ್ಮಶೈಲವನ್ನೇರುವಾಗ 'ಶೂಲಪಾಣಿಯ ನೆನೆಯುತವೆ' ಹಾಗೂ 'ಮುಕುಂದನನು ನೆನೆಯುತ' ಮುಂದುವರಿದರೆಂದೂ, ಇನ್ನೊಂದೆಡೆ

ಮುಂದೆ ನಡೆದರು ಹಿಮಕೆ ನಡುಗುತ
ವೃಂದದೊಳು ಶಿವಶಿವ ಯೆನುತ್ತ ಮು
ಕುಂದನನು ನೆನೆವುತ್ತ ಯೋಜನ ಹಲವ ಬರುತಿರಲು (8-18)

ಎಂದೂ ಕವಿ ಹೇಳುತ್ತಾನೆ. ಹನ್ನೆರಡನೆಯ ಸಂಧಿಯಲ್ಲಿ ಶಿವನ ಆಸ್ಥಾನದ ವರ್ಣನೆ ಹಾಗೂ ಕೃಷ್ಣನು ಶಿವನ ಮೂಲಕ ಪಾಂಡವರಿಗೆ ಅಮರತ್ವವನ್ನು ಕೊಡುವ ವಿಚಾರವಿದೆ. ಇನ್ನೂ ಕೆಲವು ಕಡೆಗಳಲ್ಲಿ ಪಾಂಡವರು ಶಿವನನ್ನು ಸ್ತುತಿಸುವ ಸನ್ನಿವೇಶಗಳಿವೆ. ಆದುದರಿಂದ ಹರಿಹರರಲ್ಲಿ ಭೇದವನ್ನೆಣಿಸದೆ ಇಬ್ಬರನ್ನೂ ಸಮಾನವಾಗಿ ಪರಿಗಣಿಸಿ ಸ್ತುತಿಸಿರುವುದರಿಂದ ಈ ಕವಿ ಸ್ಮಾರ್ತ ಭಾಗವತ ಸಂಪ್ರದಾಯದವನೆಂದು ಹೇಳಬಹುದು. ಹರಿಹರರನ್ನು ಮಾತ್ರವಲ್ಲದೆ ಕಾವ್ಯಾರಂಭದಲ್ಲಿ ಕವಿಯು ಗಣಪತಿ, ಬ್ರಹ್ಮ, ಪಾರ್ವತಿ, ಶಾರದೆ ಮೊದಲಾದ ದೇವದೇವಿಯರಿಗೂ ನಾರದ, ವ್ಯಾಸ, ಶುಕ ಮೊದಲಾದ ಮುನಿಮುಖ್ಯರಿಗೂ ನರ, ಉರಗ, ಗರುಡ, ಪ್ರಕೃತಿ, ಪುರುಷ, ಸಕಲ ಚರಾಚರರಿಗೂ ವಂದಿಸಿದ್ದಾನೆ.

ಕಾವ್ಯ ವಿಚಾರ : ಸೂತಭಾರತವು ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಪಾಂಡವರು ರಾಜ್ಯವನ್ನು ತೊರೆದು ಹೊರಟು ಸಕಲ ಕಷ್ಟಗಳನ್ನನುಭವಿಸಿ ಕೊನೆಗೆ ಸ್ವರ್ಗಾರೋಹಣ ಮಾಡುವ ಸನ್ನಿವೇಶವೇ ಈ ಕಾವ್ಯದ ವಸ್ತು. ಹದಿನಾಲ್ಕು ಸಂಧಿಗಳಿರುವ ಇದರ ಓಲೆಪ್ರತಿಯಲ್ಲಿ ಒಟ್ಟು 610 ಪದ್ಯಗಳಿವೆಯೆಂದು ಉಕ್ತವಾಗಿದ್ದರೂ ಇದರಲ್ಲಿರುವ ಒಟ್ಟು ಪದ್ಯಗಳು 468 ಮಾತ್ರ. ಮೂಲಪ್ರತಿಯಲ್ಲಿ ಪದ್ಯಗಳ ಸಂಖ್ಯೆ ಸರಿಯಾಗಿಲ್ಲ. ಹೆಚ್ಚಿನ ಪದ್ಯಗಳು ಪೂರ್ಣವೂ, ಸ್ಪಷ್ಟವೂ ಆಗಿವೆ. ಕೇವಲ ಕೆಲವು ಪದ್ಯಗಳು ಅಪೂರ್ಣವಾಗಿವೆ. ಅಂತಹ ಅಪೂರ್ಣ ಪದ್ಯಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಕಥಾವಸ್ತುವಿನ ಮೂಲ : 'ಸೂತಭಾರತ'ವೆಂಬ ತನ್ನ ಕಾವ್ಯಕ್ಕೆ ಮಹಾಭಾರತದ ಮಹಾಪ್ರಸ್ಥಾನ ಪರ್ವ ಹಾಗೂ ಸ್ವರ್ಗಾರೋಹಣ ಪರ್ವಗಳಿಂದ ಕಥಾವಸ್ತುವನ್ನು ಆಯ್ದುಕೊಂಡಿದ್ದಾನೆ. ಮಹಾಭಾರತದಲ್ಲಿರುವ ಪಾಂಡವರ ಸ್ವರ್ಗಾರೋಹಣ ಪರ್ವದ ಕಥೆ ಹಾಗೂ ಸೂತಭಾರತದ ಕಥೆ ಒಂದೇ ಆಗಿದೆ. ಆದರೂ ಕವಿ ಕೆಲವೆಡೆಗಳಲ್ಲಿ ತನಗೆ ತೋಚಿದಂತೆ ಪರಿವರ್ತನೆಗಳನ್ನು ಮಾಡಿಕೊಂಡಿದ್ದಾನೆ.

ಮಹಾಭಾರತದಲ್ಲಿ ಬರುವ ಕಥೆಯ ಸಾರ : ಯಾದವರ ಮರಣದ ವೃತ್ತಾಂತವನ್ನು ಅರ್ಜುನನ ಮೂಲಕ ಯುಧಿಷ್ಠಿರನು ತಿಳಿಯುತ್ತಾನೆ. ಅಷ್ಟರಲ್ಲಿ ಕಲಿಯುಗ ಪ್ರಾಪ್ತವಾಯಿತೆಂಬುನೂ ತಿಳಿಯುತ್ತದೆ. ಧರ್ಮಸಾಧನೆಗಾಗಿ ಎಲ್ಲವನ್ನೂ ತೊರೆದು ಸ್ವರ್ಗಕ್ಕೆ ಹೋಗಬೇಕೆಂದು ಧರ್ಮರಾಯನು ನಿರ್ಧರಿಸುತ್ತಾನೆ. ಆಗ ತಮ್ಮಂದಿರೂ ಮಡದಿಯಾದ ದ್ರೌಪದಿಯೂ ಯುಧಿಷ್ಠಿರನೊಂದಿಗೆ ಹೊರಡಲು ನಿಶ್ಚೈಸುತ್ತಾರೆ. ಯುಧಿಷ್ಠಿರನು ಯುಯುತ್ಸುವನ್ನು ಕರೆಯಿಸಿ ಅವನಿಗೆ ಕೌರವರ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡುತ್ತಾನೆ. ಅಭಿಮನ್ಯುವಿನ ಮಗ ಪರೀಕ್ಷಿತನಿಗೆ ತನ್ನ ರಾಜ್ಯದ ಪಟ್ಟವನ್ನು ಕಟ್ಟುತ್ತಾನೆ. ಬಳಿಕ ಸುಭದ್ರೆಯನ್ನು ಕರೆದು, "ಇನ್ನು ಮೇಲೆ ನಿನ್ನ ಮಗನೇ ದೊರೆ. ಅವನನ್ನು ಯಾದವ ರಾಜನಾದ ವಜ್ರನನ್ನೂ

ಚೆನ್ನಾಗಿ ಕಾಪಾಡುತ್ತಿರು. ಧರ್ಮವಲ್ಲದ್ದಕ್ಕೆ ಮನಸ್ಸು ಮಾಡಬೇಡ” ಎಂದು ಹೇಳುತ್ತಾನೆ.

ಯುಧಿಷ್ಠಿರನು ಸ್ವರ್ಗಸ್ಥರಾದ ಯಾದವರಿಗೆ ಜಲತರ್ಪಣ ಕೊಟ್ಟು ಶ್ರಾದ್ಧ ಸಂತರ್ಪಣೆ ನೆರವೇರಿಸಿ ಯಥೇಷ್ಟವಾಗಿ ದಾನಧರ್ಮಗಳನ್ನು ಮಾಡುತ್ತಾನೆ. ಬಳಿಕ ಒಡವೆಗಳನ್ನೆಲ್ಲ ಕಳಚಿಟ್ಟು ನಾರುಬಟ್ಟೆಯನ್ನುಡುತ್ತಾನೆ. ತಮ್ಮಂದಿರೂ ದ್ರೌಪದಿಯೂ ಹಾಗೆಯೇ ಮಾಡುತ್ತಾರೆ. ಎಲ್ಲರೂ ಮಹಾಯಾತ್ರೆಗೆ ತೆರಳುತ್ತಿದ್ದಾಗ ಒಂದು ನಾಯಿ ಅವರನ್ನು ಎಡೆಬಿಡದೆ ಹಿಂಬಾಲಿಸುತ್ತದೆ.

ಪಾಂಡವರೂ ದ್ರೌಪದಿಯೂ ಉಪವಾಸದಿಂದಿದ್ದು ಯೋಗಿಗಳಂತೆ ಸಂನ್ಯಾಸ ಧರ್ಮವನ್ನವಲಂಬಿಸಿ ಪೂರ್ವಾಭಿಮುಖವಾಗಿ ಹೊರಟು ನಾನಾ ದೇಶಗಳನ್ನು ದಾಟಿ ಹೋಗುತ್ತಿರುತ್ತಾರೆ. ಎಲ್ಲರಿಗಿಂತ ಮುಂದೆ ಯುಧಿಷ್ಠಿರ; ಅವನ ಹಿಂದೆ ಕ್ರಮವಾಗಿ ಭೀಮ, ಅರ್ಜುನ, ನಕುಲ, ಸಹದೇವರು; ಎಲ್ಲರಿಗಿಂತ ಹಿಂದೆ ದ್ರೌಪದಿ. ಆ ನಾಯಿಯೂ ಅವರ ಬೆನ್ನು ಬಿಡದೆ ಸಾಗುತ್ತದೆ. ಮುಂದೆ ಹೋಗುತ್ತಿರಲು, ಎದುರಾದ ಅಗ್ನಿಯ ಮಾತಿನಂತೆ ಅರ್ಜುನನು ತನ್ನ ಗಾಂಡೀವವನ್ನೂ ಅಕ್ಷಯ ತೂಣೀರವನ್ನೂ ಸಮುದ್ರಕ್ಕೆ ಎಸೆಯುತ್ತಾನೆ. ಮುಂದಕ್ಕೆ ಹೋಗುತ್ತ ಸಮುದ್ರದಲ್ಲಿ ಮುಳುಗಿ ಹೋಗಿದ್ದ ದ್ವಾರಕೆಯನ್ನು ನೋಡಿ ಅದಕ್ಕೆ ಪ್ರದಕ್ಷಿಣವಾಗುವಂತೆ ಉತ್ತರಕ್ಕೆ ತಿರುಗಿ, ಮುಂದೆ ಸಾಗಿ ಹಿಮವತ್ಪರ್ವತವನ್ನು ದಾಟಿ, ಪಾಂಡವರು ಮೇರು ಪರ್ವತವನ್ನು ತಲುಪುತ್ತಾರೆ. ಅದನ್ನು ಏರುತ್ತಿದ್ದಾಗ ದ್ರೌಪದಿ ನಡೆಯಲಾರದೆ ಸೋತು ಕುಸಿದುಬೀಳುತ್ತಾಳೆ. ಆಗ ಏನೂ ಅಧರ್ಮವನ್ನು ಮಾಡದ ದ್ರೌಪದಿ ಹಾಗೆ ಕುಸಿದು ಬೀಳುವುದಕ್ಕೆ ಕಾರಣವೇನೆಂದು ಭೀಮನು ಅಣ್ಣನನ್ನು ಕೇಳಲು, ಯುಧಿಷ್ಠಿರನು—“ಅವಳಿಗೆ ಅರ್ಜುನನ ಮೇಲೆ ತುಂಬಾ ಪಕ್ಷಪಾತವಿತ್ತು. ಅದಕ್ಕಾಗಿ ಅವಳಿಗೆ ಈ ಶಿಕ್ಷೆ” ಎಂದು ಉತ್ತರಿಸುತ್ತಾನೆ. ಅವಳನ್ನು ತೊರೆದು ಮುಂದೆ ಹೋಗುತ್ತಿರಲು ಕ್ರಮವಾಗಿ ಸಹದೇವ, ನಕುಲ, ಅರ್ಜುನ ಹಾಗೂ ಕೊನೆಗೆ ಭೀಮ ಕುಸಿದು ಬೀಳುತ್ತಾರೆ. ಅವರೆಲ್ಲರೂ ಹೀಗೆ ಬೀಳುವುದಕ್ಕೆ ಕಾರಣವೇನೆಂದು ಭೀಮನು ಅಣ್ಣನನ್ನು ಕೇಳಲು ಧರ್ಮರಾಯನು—“ತನಗೆ ಸಮಾನನಾದ ಪಂಡಿತನೇ ಇಲ್ಲವೆಂಬ ಗರ್ವವಿದ್ದುದರಿಂದ ಸಹದೇವನೂ, ಸೌಂದರ್ಯದಲ್ಲಿ ತನಗೆ ಸಮಾನರಾರೂ ಇಲ್ಲವೆಂಬ ಗರ್ವವಿದ್ದುದರಿಂದ ನಕುಲನೂ, ತಾನೇ ಲೋಕದಲ್ಲಿ ಎಲ್ಲರಿಗಿಂತ ಮಿಗಿಲಾದ ಮಹಾಶೂರನೆಂಬ ಹೆಮ್ಮೆಯಿದ್ದುದರಿಂದ ಅರ್ಜುನನೂ, ಅಮಿತಭೋಜಿಯಾಗಿ ತಿಂದು ತಿಂದು ದೇಹದಾರ್ಢ್ಯ ಬಲಗಳಿಂದಾಗಿ ಬೇರೆಯವರನ್ನು ಲಕ್ಷಿಸದೆ ಆತ್ಮಸ್ತುತಿ ಮಾಡುತ್ತಿದ್ದುದರಿಂದ ಭೀಮನೂ ಬೀಳುವುದಕ್ಕೆ ಕಾರಣ” ಎಂದು ತಿಳಿಸುತ್ತಾನೆ. ಬಳಿಕ ಅವರೆಲ್ಲರನ್ನೂ ತೊರೆದು ಏಕಾಕಿಯಾಗಿ ಹೋಗುತ್ತಿದ್ದ ಧರ್ಮರಾಯನನ್ನು ನಾಯಿ ಹಿಂಬಾಲಿಸುತ್ತದೆ. ಅಷ್ಟರಲ್ಲಿ ದೇವೇಂದ್ರನು ಪ್ರತ್ಯಕ್ಷನಾಗಿ ತನ್ನ ರಥವನ್ನೇರಿ ಬರುವಂತೆ ಧರ್ಮರಾಯನಿಗೆ

ಹೇಳುತ್ತಾನೆ. ಆಗ ಧರ್ಮರಾಯನು ಕಣ್ಣೀರು ಸುರಿಸುತ್ತ, "ನನ್ನ ತಮ್ಮಂದಿರೂ ಮಡದಿ ದ್ರೌಪದಿಯೂ ದಾರಿಯಲ್ಲಿ ಬಿದ್ದು ಬಿಟ್ಟಿದ್ದಾರೆ. ಅವರೂ ನನ್ನೊಡನೆ ಬರುವುದಾದರೆ ಬರುತ್ತೇನೆ" ಎನ್ನುತ್ತಾನೆ. ಅದಕ್ಕೆ ದೇವೇಂದ್ರನು—"ಅವರೆಲ್ಲರೂ ಮನುಷ್ಯ ದೇಹವನ್ನು ಬಿಟ್ಟು ದಿವ್ಯ ದೇಹದಿಂದ ಸ್ವರ್ಗ ಸೇರಿದ್ದಾರೆ. ನೀನೂ ಅಲ್ಲಿಗೆ ಬಂದು ಅವರನ್ನು ನೋಡುವೆಯಂತೆ" ಎನ್ನುತ್ತಾನೆ. "ಹಾಗಾದರೆ ವಿಶ್ವಾಸದಿಂದ ನನ್ನನ್ನು ಹಿಂಬಾಲಿಸುತ್ತಿರುವ ಈ ನಾಯಿಯೂ ನನ್ನೊಂದಿಗೆ ಬರಬೇಕು" ಎಂದು ಧರ್ಮರಾಯನು ಹೇಳಲು, ಇಂದ್ರನು "ನಾಯಿಗೆ ಅಲ್ಲಿ ಸ್ಥಾನವಿಲ್ಲ. ನಾಯಿ ನೋಡಿದ್ದು ನಷ್ಟ" ಎಂದೆಲ್ಲಾ ಹೇಳುತ್ತಾನೆ. ಇಂದ್ರನ ಮಾತಿಗೆ ಯುಧಿಷ್ಠಿರನು ಸಮ್ಮತಿಸದೆ, "ಸತ್ತವರೊಡನೆ ಸ್ನೇಹವಿಲ್ಲ; ಜಗಳವಿಲ್ಲ. ಅವರನ್ನು ನಾನು ಬದುಕಿಸುವ ಹಾಗೂ ಇಲ್ಲ. ಅವರನ್ನೆಲ್ಲ ನಾನು ತೊರೆದುದಾಯಿತು. ಬದುಕಿರುವ ನಾಯಿಯನ್ನೇಕೆ ತೊರೆಯಬೇಕು?" ಎನ್ನುತ್ತಾನೆ. ಧರ್ಮರಾಯನ ಗುಣಕ್ಕೆ ಮೆಚ್ಚಿದ ನಾಯಿಯ ರೂಪದಲ್ಲಿದ್ದ ಯಮಧರ್ಮರಾಯನು ಪ್ರತ್ಯಕ್ಷನಾಗಿ, "ಸ್ವರ್ಗದಲ್ಲಿ ನಿನಗೆ ಸಮಾನನಾದ ರಾಜನು ಒಬ್ಬನಾದರೂ ಇಲ್ಲ. ನಿನಗೆ ಈ ನಿನ್ನ ಮಾನವ ಶರೀರದೊಡನೆಯೇ ಅಕ್ಷಯ ಲೋಕಗಳು ಲಭಿಸಲಿ. ಇಲ್ಲಿಯ ವರೆಗೆ ನಾನು ಮಾಡಿದ ಪರೀಕ್ಷೆಯಲ್ಲಿ ನೀನು ಜಯ ಗಳಿಸಿರುವೆ" ಎಂದು ಅನುಗ್ರಹಿಸುತ್ತಾನೆ. ಅನಂತರ ದೇವರ್ಷಿಗಳು ಅವನನ್ನು ರಥವಲ್ಲಿ ಕುಳ್ಳಿರಿಸಿಕೊಂಡು ದೇವಲೋಕಕ್ಕೆ ಒಯ್ಯುತ್ತಾರೆ. ಅಲ್ಲಿಗೆ ತಲುಪಿದಾಗ ಯುಧಿಷ್ಠಿರನು ತನ್ನ ತಮ್ಮಂದಿರನ್ನು ನೋಡಬೇಕೆಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಇಂದ್ರನು, "ನೀನು ಮಾಡಿದ ಪುಣ್ಯದಿಂದ ಇದನ್ನು ಸಂಪಾದಿಸಿಕೊಂಡಿರುವೆ. ಮತ್ತೇಕೆ ಮನುಷ್ಯಲೋಕದ ಸ್ನೇಹಕ್ಕೇ ಅಂಟಿಕೊಳ್ಳುತ್ತಿರುವೆ?" ಎಂದು ಕೇಳುತ್ತಾನೆ. ಯುಧಿಷ್ಠಿರನು ಒಪ್ಪದೆ ತನ್ನ ಮಕ್ಕಳನ್ನೂ ಮಡದಿ ಕೃಷ್ಣೆಯನ್ನೂ ತಮ್ಮಂದಿರನ್ನೂ ಬಿಟ್ಟಿರಲಾರೆನೆಂದೂ ಅವರಿರುವಲ್ಲಿಗೆ ಹೋಗಬೇಕೆಂಬುದು ತನ್ನ ಅಭಿಲಾಷೆಯೆಂದೂ ತಿಳಿಸುತ್ತಾನೆ. ಸ್ವರ್ಗದಲ್ಲಿ ತಮ್ಮಂದಿರನ್ನು ಕಾಣದೆ ಯುಧಿಷ್ಠಿರನು ಅವರಿರುವ ಸ್ಥಳಕ್ಕೆ ಹೋಗಬಯಸುತ್ತಾನೆ. ಯುಧಿಷ್ಠಿರನು ಸ್ವರ್ಗದಲ್ಲಿ ಮೊದಲು ಕಂಡುದು ವೈಭವದಿಂದ ಮೆರೆಯುವ ದುರ್ಯೋಧನನನ್ನು. ಆತನನ್ನು ನೋಡಿ ಸಹಿಸಲಾರದೆ "ದುರ್ಯೋಧನನಿರುವ ಲೋಕ ನನಗೆ ಬೇಡ. ಇವನಿಂದಾಗಿಯೇ ನಾವು ಸರ್ವಸ್ವವನ್ನೂ ಕಳೆದುಕೊಂಡುದು. ನನಗೆ ಅವನನ್ನು ನೋಡಲೂ ಅವನೊಂದಿಗೆ ಇರಲೂ ಇಷ್ಟವಿಲ್ಲ. ನನ್ನ ತಮ್ಮಂದಿರೆಲ್ಲಿದ್ದಾರೋ ಅಲ್ಲಿಗೆ ಹೋಗಬೇಕು" ಎಂದು ಹೇಳಲು ನಾರದನು ನಗುತ್ತ—"ಇಲ್ಲಿ ಸುಯೋಧನನು ದೇವತೆಗಳಿಗೆ ಸಮಾನವಾದ ಗೌರವ ಪಡೆಯುತ್ತಿದ್ದಾನೆ. ಕ್ಷತ್ರಿಯನಾದ ಅವನು ನಿರ್ಭಯನಾಗಿ ಯುದ್ಧಮಾಡಿ ವೀರಸ್ವರ್ಗವನ್ನು ಪಡೆದಿದ್ದಾನೆ. ಯುದ್ಧಮಾಡಿ ಸತ್ತವರೆಲ್ಲರೂ ಇಲ್ಲಿ ಸಮಾನರು. ಹಿಂದಿನ ಜನ್ಮವನ್ನು ಇಲ್ಲಿ ನೆನೆಸಿಕೊಳ್ಳಬಾರದು" ಎನ್ನುತ್ತಾನೆ. ಅದಕ್ಕೆ ಯುಧಿಷ್ಠಿರನು, "ಮಹಾಪಾಪಿಯೂ ಅಧರ್ಮಿಯೂ ಆದ

ಸುಯೋಧನನಿಗೆ ವೀರಸ್ವರ್ಗ ಸಿಕ್ಕಿರುವಾಗ ವೀರರೂ, ಮಹಾತ್ಮರೂ, ಮಹಾವ್ರತರೂ, ಸತ್ಯಪ್ರತಿಜ್ಞರೂ ಆದ ನನ್ನ ತಮ್ಮಂದಿರು ಯಾವ ಲೋಕವನ್ನು ಪಡೆದಿದ್ದಾರೆ ಎಂಬುದನ್ನು ನೋಡಬೇಕು. ಕರ್ಣ, ಧೃಷ್ಟದ್ಯುಮ್ನ, ಸಾತ್ಯಕಿ, ವಿರಾಟ, ದ್ರುಪದ, ಧೃಷ್ಟಕೇತು, ಶಿಖಂಡಿ, ಅಭಿಮನ್ಯು ಮೊದಲಾದವರು ಕ್ಷತ್ರಿಯ ಧರ್ಮದಿಂದಲೇ ಯುದ್ಧ ಮಾಡಿ ಮಡಿದವರು. ಅವರೆಲ್ಲಾ ಎಲ್ಲಿ? ಅವರಿಗೆ ಪುಣ್ಯ ಲೋಕ ಸಿಕ್ಕದಿದ್ದರೆ ನನಗೂ ಈ ಲೋಕ ಬೇಡ. ಅವರಿರುವ ಸ್ಥಳವೇ ನನಗೆ ಸ್ವರ್ಗ, ಇದು ಸ್ವರ್ಗವಲ್ಲ" ಎನ್ನುವನು. ದೇವೇಂದ್ರನ ಆಜ್ಞೆಯಂತೆ ದೇವದೂತನೊಬ್ಬನು ಯುಧಿಷ್ಠಿರನಿಗೆ ಅವನ ಬಳಗದವರನ್ನು ತೋರಿಸಲು ಕರೆದುಕೊಂಡು ಹೋಗುತ್ತಾನೆ. ಹೋಗುತ್ತಿದ್ದ ದಾರಿಯಲ್ಲಿ ಕತ್ತಲೆ ಕವಿದಿತ್ತು. ಕಾಲಿಟ್ಟ ಕಡೆಯೆಲ್ಲಾ ಪಾಚಿ ತುಂಬಿತ್ತು. ಅಲ್ಲಲ್ಲಿದ್ದ ಹುಳಹುಪ್ಪಟೆಗಳು, ಉಕ್ಕಿನ ಕೊಕ್ಕುಳ್ಳ ಹದ್ದು ಕಾಗೆಗಳು, ಸೂಜಿ ಮುಖವುಳ್ಳ ಪ್ರೇತಗಳೇ ಮೊದಲಾದುವು, ಉರಿಯುತ್ತಿದ್ದ ಬೆಂಕಿಯಲ್ಲಿ ಕೆಂಪಗೆ ಕಾಣುತ್ತಿದ್ದುವು. ದಾರಿಯಲ್ಲಿ ಕುದಿನೀರಿನ ಹೊಳೆಯಿತ್ತು. ಕತ್ತಿಯೆಲೆಯ ಕಾಡಿತ್ತು. ಪಾಪಕರ್ಮಿಗಳು ಬಗೆಬಗೆಯ ಯಾತನೆಯನ್ನನುಭವಿಸುತ್ತಿದ್ದರು. ಇವುಗಳನ್ನು ನೋಡಿ ನೊಂದ ಧರ್ಮರಾಯನು, "ನನ್ನ ತಮ್ಮಂದಿರೆಲ್ಲಿ? ಇನ್ನೆಷ್ಟು ದೂರ ಹೋಗಬೇಕು?" ಎಂದು ಕೇಳಲು, ದೇವದೂತನು—"ಇಲ್ಲಿಯವರೆಗೆ ಮಾತ್ರ ನೀನು ಬರಬೇಕು. ಇಲ್ಲಿಂದ ನೀನು ಇನ್ನು ಹಿಂತಿರುಗಬೇಕು. ಇದು ದೇವತೆಗಳ ಆಜ್ಞೆ" ಎನ್ನುತ್ತಾನೆ. ಯುಧಿಷ್ಠಿರನು ಹಿಂದಕ್ಕೆ ಹೊರಟ ಕೂಡಲೆ ಸುತ್ತಮುತ್ತಲಿಂದ, "ಧರ್ಮಪುತ್ರಾ, ಇಲ್ಲಿಯೇ ಸ್ವಲ್ಪ ಹೊತ್ತು ಇದ್ದು ನಮ್ಮ ಮೇಲೆ ಅನುಗ್ರಹ ತೋರು" ಎನ್ನುವ ಆರ್ತಧ್ವನಿ ಕೇಳಿಬರುತ್ತದೆ. ಹಿಂದೆ ಎಷ್ಟೋ ಬಾರಿ ಆ ಧ್ವನಿಯನ್ನು ತಾನು ಕೇಳಿದ್ದರೂ ಆಗ ಅವನಿಗೆ ಆ ಧ್ವನಿಯ ಗುರುತು ಹಿಡಿಯಲಾಗಲಿಲ್ಲ. "ನೀವು ಯಾರು?" ಎಂದು ಧರ್ಮರಾಯನು ಕೇಳಲು, ಸುತ್ತಮುತ್ತಲಿಂದ—"ನಾನು ಕರ್ಣ, ನಾನು ಭೀಮ, ನಾನು ಅರ್ಜುನ, ನಾನು ನಕುಲ, ನಾನು ಸಹದೇವ, ನಾನು ಧೃಷ್ಟದ್ಯುಮ್ನ, ನಾನು ದ್ರೌಪದಿ" ಎಂದು ಅರಚುವುದು ಕೇಳಿಸಿತು. ಧರ್ಮರಾಯನಿಗೆ ಆಶ್ಚರ್ಯ, ಬೇಸರ ಉಂಟಾದುವು. ದುರ್ಯೋಧನನಂತಹ ಪಾಪಿ ಸ್ವರ್ಗದಲ್ಲಿ ಮೆರೆಯುತ್ತಿದ್ದಾನೆ. "ಧರ್ಮಶೀಲರೂ, ಶೂರರೂ ಸತ್ಯವಂತರೂ ಆದ ಪಾಂಡವರೇಕೆ ಇಲ್ಲಿ ನರಳುತ್ತಿದ್ದಾರೆ? ಇದೇನು? ನನಗೇನಾದರೂ ಬುದ್ಧಿಭ್ರಮೆಯಾಗಿದೆಯೇ" ಎಂದು ಬಗೆಬಗೆಯಾಗಿ ಯೋಚಿಸಿ ಸಂಕಟ ಪಡುತ್ತಾ ಮುಂದೆ ಹೋಗದೆ ಅಲ್ಲೇ ಕುಳಿತುಬಿಡುತ್ತಾನೆ. ತನ್ನವರು ಇರುವಲ್ಲಿಯೇ ತಾನೂ ಇರುವುದಾಗಿ ಹೇಳಲು ದೂತನು ಅದನ್ನು ಇಂದ್ರನಿಗೆ ತಿಳಿಸುತ್ತಾನೆ. ಯುಧಿಷ್ಠಿರನ ಅಭಿಪ್ರಾಯವನ್ನರಿತ ಇಂದ್ರಾದಿ ದೇವತೆಗಳೂ, ಧರ್ಮಪುರುಷರೂ ಅಲ್ಲಿಗೆ ಬರುತ್ತಾರೆ. ಆ ಪುಣ್ಯದೇಹಿಗಳು ಬರುವಾಗ ಅಲ್ಲಿ ಯಾತನೆ ಅನುಭವಿಸುತ್ತಿದ್ದ ಪಾಪಿಗಳು ಯಾರೂ ಇರಲಿಲ್ಲ. ಅಲ್ಲಿನ ನೆಲ ಪಾವನವಾಗಿತ್ತು. ಇಂದ್ರನು ಯುಧಿಷ್ಠಿರನನ್ನು ಸಂತೈಸುತ್ತಾ "ನಿನ್ನ

ತಮ್ಮಂದಿರಿಗೂ ಬಂಧುಬಳಗಕ್ಕೂ ಅಕ್ಷಯವಾದ ಸದ್ಗತಿ ದೊರೆತಿದೆ. ರಾಜರೆಲ್ಲರೂ ನರಕವನ್ನು ನೋಡಲೇ ಬೇಕಾಗುತ್ತದೆ. ಪ್ರತಿಯೊಬ್ಬ ಮನುಷ್ಯನಿಗೂ ಪುಣ್ಯದ ರಾಶಿಯೊಂದೂ ಪಾಪದ ರಾಶಿಯೊಂದೂ ಇದ್ದೇ ಇರುತ್ತದೆ. ಮೊದಲು ಪುಣ್ಯ ಅನುಭವಿಸಿದರೆ ಆಮೇಲೆ ನರಕಕ್ಕೆ ಹೋಗಬೇಕು. ಮೊದಲು ನರಕವನ್ನು ಅನುಭವಿಸಿದರೆ ಆಮೇಲೆ ಸ್ವರ್ಗಕ್ಕೆ ಹೋಗಬೇಕು. ಆದ್ದರಿಂದ ನಿನ್ನ ಒಳ್ಳೆಯದಕ್ಕಾಗಿಯೆ ಈ ಏರ್ಪಾಟು ಮಾಡಿದೆ. ನೀನು ಒಂದು ನೆಪವಿಟ್ಟುಕೊಂಡು ದ್ರೋಣನಿಗೆ ಸುಳ್ಳು ಹೇಳಿದೆ. ಅದಕ್ಕೆ ತಕ್ಕಂತೆ ನಿನಗೆ ಮತ್ತೊಬ್ಬರ ನೆಪದಿಂದ ನರಕ ದರ್ಶನವಾಯ್ತು. ಹೀಗೆ ಭೀಮ ಮೊದಲಾದವರಿಗೂ ಒಂದೊಂದು ಕಾರಣದಿಂದ ನರಕ ದರ್ಶನವಾಯ್ತು. ಈಗ ಅವರೆಲ್ಲ ಮುಕ್ತರಾಗಿದ್ದಾರೆ. ನೀನು ಇನ್ನು ನನ್ನೊಡನೆ ಸುಖವಾಗಿರು. ದೇವ ಗಂಧರ್ವರು ನಿನಗೆ ಉಪಚಾರ ಮಾಡುತ್ತಾರೆ. ನೀನು ರಾಜಸೂಯ ಹಾಗೂ ಅಶ್ವಮೇಧ ಯಾಗಗಳ ಫಲವನ್ನು ಪಡೆ. ನೀನು ಹರಿಶ್ಚಂದ್ರ, ಭಗೀರಥ, ಮಾಂಧಾತ, ಭರತ ಮೊದಲಾದವರಿಗೆ ಸಮಾನನಾಗಿರುವೆ. ತ್ರಿಲೋಕ ಪಾವನೆಯಾದ ಗಂಗೆಯಲ್ಲಿ ಸ್ನಾನಮಾಡಿದರೆ ನಿನ್ನ ಶೋಕ, ಆಯಾಸ, ವೈರತ್ವ ಎಲ್ಲಾ ದೂರವಾಗಿಬಿಡುತ್ತವೆ. ನಾನು ಒಡ್ಡಿದ ಎಲ್ಲಾ ಪರೀಕ್ಷೆಗಳಲ್ಲೂ ನೀನು ಗೆದ್ದು ಬಂದಿರುವೆ, ಅದೆಲ್ಲಾ ಇಂದ್ರನದೇ ಮಾಯೆ" ಎಂದು ಹೇಳುತ್ತಾನೆ.

ಆ ಬಳಿಕ ಧರ್ಮರಾಯ ಗಂಗೆಯಲ್ಲಿ ಸ್ನಾನ ಮಾಡುತ್ತಾನೆ. ಕೂಡಲೆ ಆತನಿಗೆ ಮನುಷ್ಯದೇಹ ಹೋಗಿ ದಿವ್ಯದೇಹ ಬರುತ್ತದೆ. ಅವನಲ್ಲಿದ್ದ ವೈರತ್ವ ತೊಲಗಿ ಸಂತಾಪವೆಲ್ಲಾ ಮಾಯವಾಗುತ್ತದೆ. ಅನಂತರ ದೇವತೆಗಳು ಅವನಿಗೆ ದಿವ್ಯ ದೇಹಧಾರಿಗಳಾಗಿದ್ದ ಕೃಷ್ಣ, ಅರ್ಜುನ, ಭೀಮ, ನಕುಲ, ಸಹದೇವ, ಪಾಂಚಾಲಿ, ದ್ರೋಣ, ಭೀಷ್ಮ, ಪಾಂಡು, ಕುಂತಿ, ಅಭಿಮನ್ಯು ಮೊದಲಾದವರನ್ನು ತೋರಿಸುವರು.

ಹೀಗೆ ಕೌರವ ಪಾಂಡವರು ತಮ್ಮ ತಮ್ಮ ಪಾಲಿಗೆ ಬಂದ ಸ್ವರ್ಗ ನರಕಗಳನ್ನು ಅನುಭವಿಸಿದ ಬಳಿಕ ತಾವು ಯಾರ ಯಾರ ಅಂಶಗಳಿಂದ ಹುಟ್ಟಿ ಬಂದಿದ್ದರೋ, ಎಲ್ಲೆಲ್ಲಿಂದ ಬಂದಿದ್ದರೋ, ಅಲ್ಲಲ್ಲಿ ಐಕ್ಯ ಹೊಂದಿದರು. ಇಲ್ಲಿಗೆ ಕೌರವ ಪಾಂಡವರ ಕಥೆ ಮುಗಿಯಿತು.

ಯಜ್ಞಮಧ್ಯದಲ್ಲಿ ಜನಮೇಜಯನು ವೈಶಂಪಾಯನನಿಂದ ಈ ಕಥೆಯನ್ನು ಕೇಳಿ ತುಂಬ ವಿಸ್ಮಿತನಾದನು. ಯಜ್ಞ ಮುಗಿದು ಹಾವುಗಳಿಗೆ ಬಿಡುಗಡೆಯಾಯಿತು. ಆಸ್ತೀಕನು ಪ್ರಾಣಾಪಾಯದಿಂದ ಹಾವುಗಳನ್ನು ತಪ್ಪಿಸಿ ಸಂತೋಷಪಟ್ಟನು. ಎಲ್ಲರನ್ನೂ ಸಂತುಷ್ಟರನ್ನಾಗಿಸಿ ಕಳುಹಿಸಿಕೊಟ್ಟಮೇಲೆ ಜನಮೇಜಯನು ತಕ್ಷಶಿಲೆಯನ್ನು ಬಿಟ್ಟು ಹಸ್ತಿನಾವತಿಗೆ ಹಿಂತಿರುಗಿ ಬಂದು ಅಲ್ಲಿ ಸುಖದಿಂದ ರಾಜ್ಯವನ್ನಾಳಿಕೊಂಡಿದ್ದನು.

ಸೂತಭಾರತದ ಕಥಾಸಾರ

ಮೊದಲ ಸಂಧಿ: ಕಾವ್ಯದ ಆರಂಭದಲ್ಲಿ ದೈವಸ್ತುತಿಯಾದ ಬಳಿಕ ಕಲಿಯ ಆಗಮನದಿಂದ ಉಂಟಾದ ದುಷ್ಪರಿಣಾಮಗಳನ್ನು ಬೇಹುಗಾರರು ಬಂದು ಧರ್ಮರಾಯನಿಗೆ ತಿಳಿಸುತ್ತಾರೆ. ಶ್ರೀ ಕೃಷ್ಣನ ಅವಸಾನ ಹಾಗೂ ಕಲಿಯ ಆಗಮನದಿಂದ ನೊಂದ ಧರ್ಮರಾಯನು ಚಿತ್ತಗ್ಲಾನಿಯಲ್ಲಿದ್ದಾಗ ಅಲ್ಲಿಗೆ ವೇದವ್ಯಾಸರು ಬರುತ್ತಾರೆ. ಧರ್ಮರಾಯನು ಅವರಿಗೆ ಕೃಷ್ಣಾವಸಾನದಿಂದ ತಮ್ಮ ಬಲ ಕುಂದಿಹೋದುದರಿಂದ ರಾಜ್ಯವಾಳಲು ಸಾಧ್ಯವಿಲ್ಲವೆಂದೂ ಇದೀಗ ಕಲಿಯ ಪ್ರವೇಶವೂ ಆಗಿರುವುದರಿಂದ ತಾನು ಕೃಷ್ಣನಿದ್ದಲ್ಲಿಗೇ ಹೋಗುತ್ತೇನೆಂದು ಹೇಳುತ್ತಾನೆ. ಅಭಿಮನ್ಯುವಿನ ಮಗನಾದ ಪರೀಕ್ಷಿತನೇ ಚಂದ್ರವಂಶಕ್ಕೆ ಒಡೆಯನೆಂದು ನಿಶ್ಚಯಿಸಿ ಅವನಿಗೆ ಪಟ್ಟಕಟ್ಟಲು ಧರ್ಮರಾಜನು ನಿಶ್ಚಯಿಸುತ್ತಾನೆ. ಪಟ್ಟಾಭಿಷೇಕೋತ್ಸವಕ್ಕೆ ಮಹಾಭಾರತದಲ್ಲಿ ಅಳಿದುಳಿದ ರಾಜಸಂತತಿಯವರೆಲ್ಲ ಬರುತ್ತಾರೆ. ರಾಜಪ್ರಮುಖರು ಮುನಿಮುಖ್ಯರು ಹಸ್ತಿನಾವತಿಗೆ ಬರಲು ಧರ್ಮರಾಯನು ಅವರನ್ನು ಯಥೋಚಿತವಾಗಿ ಉಪಚರಿಸುತ್ತಾನೆ. ಸಕಲ ರೀತಿಗಳಿಂದ ಶೃಂಗರಿಸಿದ ಅಭಿಷೇಕ ಮಂಟಪವು ಸುಂದರವಾಗಿ ಕಂಗೊಳಿಸುತ್ತಿರುತ್ತದೆ. ಗಾರ್ಗ್ಯರು ಸೂಚಿಸಿದ ಉಚಿತವಾದ ಶುಭ ಮುಹೂರ್ತದಲ್ಲಿ ಮಂತ್ರಘೋಷ, ವಾದ್ಯಘೋಷಗಳು ಮೊಳಗುತ್ತಿರುವಾಗ ವೇದವ್ಯಾಸ ಧೌಮ್ಯರು ಪರೀಕ್ಷಿತನಿಗೆ ಪಟ್ಟಾಭಿಷೇಕವನ್ನು ನೆರವೇರಿಸುತ್ತಾರೆ. ಸಕಲ ಮುನಿಗಳು ಹರಸುತ್ತಾರೆ. ನಾರಿಯರು ಉಪ್ಪಾರತಿಯನ್ನು ಬೆಳಗಿ ವೀರಸೇಸೆಯನ್ನು ಇಕ್ಕುತ್ತಾರೆ. ರಾಜರುಗಳೆಲ್ಲ ಕಾಣಿಕೆ ಸಲ್ಲಿಸುವರು. ಪರಿವಾರದವರು ಕಾಣಿಕೆಯಿತ್ತು ರಾಜದರ್ಶನ ಮಾಡುತ್ತಾರೆ. ಧರ್ಮರಾಯನು ದಾನಸನ್ಮಾನಗಳಿಂದ ಎಲ್ಲರನ್ನೂ ಸಂತೋಷಗೊಳಿಸುತ್ತಾನೆ. ಪಾಂಡವರು ಶ್ರೀಕೃಷ್ಣನನ್ನು ಸೇರುವುದಕ್ಕಾಗಿ ಹಿಮಗಿರಿಯ ಕಡೆಗೆ ಪ್ರಯಾಣ ಮಾಡಲು ನಿಶ್ಚಯಿಸುತ್ತಾರೆ.

ಎರಡನೆಯ ಸಂಧಿ: ಧರ್ಮರಾಯನು ಪರೀಕ್ಷಿತ ರಾಜನನ್ನು ಮಂತ್ರಿಗಳ ವಶಕ್ಕೆ ಒಪ್ಪಿಸಿ "ಕಲಿಯುಗದ ದುಷ್ಪರಿಣಾಮಗಳಿಂದ ಬಾಳಲು ಅಸಾಧ್ಯವಾಗಿರುವುದರಿಂದ ತಮ್ಮಂದಿರೊಡನೆ ನಾನು ಸ್ವರ್ಗಕ್ಕೆ ಹೋಗುತ್ತೇನೆ. ನೀವು ಹಿಂದೆ ನಮ್ಮ ಸೇವೆ ಮಾಡಿದಂತೆ ಮುಂದೆ ಪರೀಕ್ಷಿತನ ಸೇವೆ ಮಾಡಬೇಕು" ಎಂದು ಹೇಳುತ್ತಾನೆ. ಆ ಮಾತುಗಳನ್ನು ಕೇಳಿ ಆಬಾಲವೃದ್ಧರೆಲ್ಲರೂ ದುಃಖಿಸುತ್ತಾ ತಾವು ಧರ್ಮರಾಯನೊಂದಿಗೆ ಸ್ವರ್ಗಕ್ಕೆ ಬರುವುದಾಗಿ ಹೇಳುತ್ತಾರೆ. ಧರ್ಮರಾಯನು ಅವರಿಗೆ ತನ್ನೊಂದಿಗೆ ಬರಬಾರದೆಂದೂ ಪರೀಕ್ಷಿತನನ್ನು ಕೂಡಿಕೊಂಡಿರಬೇಕೆಂದೂ ವಿನಂತಿಸಲು ಸಮಸ್ತ ಜನಸಮೂಹವು "ನಮ್ಮ ಸಂತೋಷವಿಂದು ದೂರವಾಯಿತು. ನಾವಿಂದು ತಾಯನ್ನಗಲಿದ ಕರುವಿನಂತಾದೆವು" ಎಂದು ಗೋಳಿಡುತ್ತಾರೆ. ಧರ್ಮರಾಯನು ಪ್ರಜೆಗಳು, ಮಂತ್ರಿಗಳು ಹಾಗೂ ಅಲ್ಲಿಗೆ ಬಂದ ಮುನಿಗಳಲ್ಲಿ ಪರೀಕ್ಷಿತನನ್ನು ಸಲಹು

ವಂತೆ ಬಿನ್ನವಿಸುತ್ತಾನೆ. ಆಗ ಮುನಿಗಳು "ಕೃತ, ತ್ರೇತ್ರ ದ್ವಾಪುರಯುಗಗಳಲ್ಲಿ ಧರ್ಮಸ್ಥಿತಿಗೇನೂ ಭಯವುಂಟಾಗಿಲ್ಲ. ಕಲಿಯುಗದಲ್ಲಿ ಅಧರ್ಮವು ಹೆಚ್ಚುವುದ ರಿಂದ ಧರ್ಮಪಾಲಕರಾದ ನೀವೇ ಹೊರಟುಹೋದರೆ ಧರ್ಮದ ರಕ್ಷಣೆ ಮಾಡುವ ರಾರು" ಎಂದು ಮರುಗುತ್ತಾರೆ. ಅದಕ್ಕೆ ಧರ್ಮರಾಯನು "ತನ್ನ ಮೊಮ್ಮಗನಾದ ಪರೀಕ್ಷಿತನು ನಿಮಗೇನೂ ತೊಂದರೆಯಾಗದಂತೆ ಧರ್ಮರಕ್ಷಣೆ ಮಾಡುವನು" ಎಂದು ಹೇಳುತ್ತಾನೆ. ಊರ ಜನರು, ಪರಿವಾರದವರು, ಮುನಿಜನರು ಗೋಳಿಟ್ಟು ವಿನಂತಿಸಿ ಕೊಂಡರೂ ವಿಚಲಿತರಾಗದೆ ಪಾಂಡವರು ಅವರನ್ನು ಬೀಳ್ಕೊಂಡು ಸ್ವರ್ಗಾರೋಹಣ ಕ್ಕಾಗಿ ಪ್ರಯಾಣ ಹೋಗುತ್ತಾರೆ. ಆಗ ದ್ರೌಪದಿ ತಾನೂ ಬರುವುದಾಗಿ ಹೇಳುತ್ತಾಳೆ. ಅದಕ್ಕೆ ಪಾಂಡವರು, "ನೀನು ಹಸ್ತಿನಾವತಿಯಲ್ಲಿದ್ದು ಮೊಮ್ಮಗನ ರಕ್ಷಣೆ ಮಾಡು ತ್ತಲೂ ರಾಜ್ಯವನ್ನಾಳುತ್ತಲೂ ಸಂತೋಷದಿಂದಿರು" ಎನ್ನುತ್ತಾರೆ. ನೊಂದ ದ್ರೌಪದಿ, "ನಿಮ್ಮನ್ನಗಲಿ ನಾನು ಜೀವಿಸಿರಲಾರೆ. ನಾನು ಜೀವದಾಸೆಯಿಂದ ಬದುಕಿರಲಾರೆ, ನನ್ನನ್ನೂ ಕರೆದೊಯ್ಯಿರಿ" ಎಂದು ಯಾಚಿಸಲು, ತಾವು ಹೋಗುವ ದಾರಿ ಭಯಾನಕವಾದುದೆಂದು ಸಹದೇವನು ತಿಳಿಸುತ್ತಾನೆ. ಆಗ ದ್ರೌಪದಿ ಯಾವ ಕಷ್ಟವೊದಗಿದರೂ ನೀವೈವರುಗಳೇ ನನ್ನ ಜೀವವಲ್ಲದೆ ಬೇರೆ ಗತಿಯಿಲ್ಲ. ಎಷ್ಟು ಕಷ್ಟ ಬಂದರೂ ನಾನು ನಿಮ್ಮೊಂದಿಗೆ ಬರುವೆನೇ ಹೊರತು ನಿಮ್ಮನ್ನುಳಿದು ಬದುಕಿರಲಾರೆ" ಎನ್ನುತ್ತಾಳೆ. ಧರ್ಮರಾಯನು ಕೊನೆಗೆ ಆಕೆಯನ್ನು ತನ್ನೊಂದಿಗೆ ಬರುವಂತೆ ಹೇಳಿ ಸುಭದ್ರೆಯನ್ನು ಕರೆಯಿಸಿ, "ಮೊಮ್ಮಗನ ರಕ್ಷಣೆಯನ್ನು ಮಾಡುತ್ತಾ ರಾಜ್ಯದಲ್ಲಿರು" ಎಂದು ಹೇಳುತ್ತಾನೆ.

ಮೂರನೆಯ ಸಂಧಿ: ಧರ್ಮರಾಯನ ಮಾತಿಗೆ ಸುಭದ್ರೆ, "ಧರೆಯ ಸಂಪತ್ತನ್ನು ತೊರೆದು ನೀವು ಸ್ವರ್ಗಕ್ಕೆ ಹೋಗುತ್ತಿರುವಿರಿ. ಆದರೆ ಬಾಲಕನಾದ ಪರೀಕ್ಷಿತನಿಗೆ ರಾಜ್ಯವಾಳಲು ಸಾಧ್ಯವಾಗದು. ನಾನೇನು ಮಾಡಲಿ" ಎಂದು ಮರುಗು ತ್ತಾಳೆ. ಅವಳ ದುಗುಡವನ್ನರಿತ ಧರ್ಮರಾಯನು "ನೀನು ನಿನ್ನ ಸಂತಾನವನ್ನು ಸಲಹಬೇಕಾದ್ದು ನಿನ್ನ ಕರ್ತವ್ಯ. ಚಿಂತಿಸದೆ ಅವನ ರಕ್ಷಣೆಯನ್ನು ಮಾಡು," ಎಂದು ಸಂತೈಸಿ ನಿಲ್ಲುವಂತೆ ಒಪ್ಪಿಸುತ್ತಾನೆ. ಪಾಂಡವರು ಅಲ್ಲಿಂದ ತಾಯಿಯಾದ ಕುಂತಿಯಬಳಿಗೆ ಹೋಗಿ ವಿಚಾರವನ್ನು ತಿಳಿಸಿ ಶ್ರೀಕೃಷ್ಣನಿರುವಲ್ಲಿಗೆ ಹೋಗಲು ಅನು ಮತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಾರೆ. ಅದಕ್ಕೆ ಕುಂತಿ, ಬಂಧುಗಳ ವಧೆ ಮಾಡಿ ಪಡೆದ ರಾಜ್ಯವನ್ನು ಭೋಗಿಸದೆ ತೊರೆಯುವುದು ಉಚಿತವಲ್ಲ. ಹಾಗೆ ಹೋಗುವುದಾದರೆ ತನ್ನನ್ನೂ ಒಂದಿಗೇ ಕರೆದೊಯ್ಯಬೇಕೆಂದು ತಿಳಿಸುತ್ತಾಳೆ. ಬಳಿಕ ಪಾಂಡವರು, ಕುಂತಿ ಹಾಗೂ ದ್ರೌಪದಿಯೊಂದಿಗೆ ಹೊರಟು ರಾಜಬೀದಿಗೆ ಬರುತ್ತಾರೆ. ವಾದ್ಯಘೋಷ ಹಾಗೂ ಸ್ತುತಿಪಾಠಕರ ಘೋಷ ಮೊಳಗುತ್ತವೆ. ಎಲ್ಲರನ್ನೂ ಬೀಳ್ಕೊಂಡು ಹೊರಡುವಾಗ ಮಂತ್ರಿಗಳು, ಆಪ್ತರು, ಪುರಜನರು, ಪರಿಜನರು- ಎಲ್ಲರೂ ಮರುಗುತ್ತಾರೆ. ಧರ್ಮರಾಯನು ಅವರನ್ನು ಸಂತೈಸುತ್ತಾನೆ. ಅಳು

ತ್ತಿರುವ ಹಸ್ತಿನಾಪುರದ ಜನರನ್ನೂ, ತಮ್ಮೊಂದಿಗೆ ಬರುತ್ತಿದ್ದ ಅರಮನೆಯ ಪ್ರಮುಖರನ್ನೂ ಭೀಮಾರ್ಜುನರು ತಡೆದು ನಿಲ್ಲಿಸುತ್ತಾರೆ. ಬಳಿಕ ಧರ್ಮರಾಯನು ಜನಮೇಜಯನ ತಂದೆಯಾದ ಪರೀಕ್ಷಿತನಿಗೆ ರಾಜನೀತಿಯನ್ನು ಬೋಧಿಸುತ್ತಾನೆ. "ದೇಶವನ್ನು ಸುಗಮದಲಿ ರಕ್ಷಿಸಬೇಕು. ಅನ್ಯಾಯ ಮಾಡದೆ ಜಗತ್ತನ್ನು ಪಾಲಿಸಬೇಕು. ಸತ್ಯಮಾರ್ಗದಲ್ಲಿ ನಡೆದು ದುಷ್ಟರನ್ನು ಶಿಕ್ಷಿಸಬೇಕು. ದುರ್ಜನರ, ಖೂಳರ ಭಂಡರ ಗೆಳೆತನ ಮಾಡಬಾರದು. ಎಂದಿಗೂ ಸೋಲಬಾರದು. ಸುಜನರನ್ನು ನಿಂದಿಸಬಾರದು. ಕಾಳಗದಲ್ಲಿ ಇದಿರಾದವರನ್ನು ಹಿಮ್ಮೆಟ್ಟಿಸಬೇಕು. ಅನ್ಯ ವಧುಗಳ ಸಂಗ ಮಾಡಬಾರದು. ಸದಾ ನಗುತ್ತಾ ಸರಸವಿನೋದಿಯಾಗಿರಬೇಕು. ಮಂತ್ರಶಕ್ತಿಯನ್ನು ಅವಹೇಳನ ಮಾಡಲಾಗದು. ಸನ್ಮಾರ್ಗಿಗಳ ಬುದ್ಧಿಯನ್ನು ಅನುಸರಿಸಬೇಕು. ಅಧರ್ಮಕ್ಕೆ ಅಸತ್ಯಕ್ಕೆ ಎಡೆಗೊಡಬಾರದು. ಖಳರಿಗೆ ಕಪಟಿಗಳಿಗೆ ಎಡೆಗೊಡಬಾರದು. ಸಜ್ಜನರನ್ನು ಮನ್ನಿಸಬೇಕು. ದ್ವಿಜನರನ್ನೂ, ಪ್ರಜೆಗಳನ್ನೂ, ಮಿತ್ರಜನರನ್ನೂ ಆದರಿಸಬೇಕು. ಭೇದಕರನ್ನೂ ಜಾತಿಸಂಕರವಾದವರನ್ನೂ ದುರಾತ್ಮರನ್ನೂ ಸ್ವಾಮಿದ್ರೋಹಿಗಳನ್ನೂ ದೂರ ಮಾಡಬೇಕು. ನಂಬಿಗಸ್ತರನ್ನೂ, ಹಿರಿಯರನ್ನೂ, ಹಿತಜನರನ್ನೂ ಗೌರವಿಸಬೇಕು. ವೈರಿರಾಜರಿಂದ ಘಾಸಿಗೊಂಡರೂ ಹೆದರದೆ ಮುನ್ನಡೆಯಬೇಕು. ಇಷ್ಟು ವಿಚಾರಗಳನ್ನು ತಿಳಿದು ನಡೆಯುತ್ತಾ ಕೆಟ್ಟ ಮನಸ್ಸನ್ನು ಮಾಡದೆ, ನಿರ್ಮಲವಾದ ಮನಸ್ಸಿನಿಂದ, ವಿವೇಕ ಶೂನ್ಯನಾಗದೆ ಜಾಗರೂಕತೆಯಿಂದ ರಾಜ್ಯಭಾರ ಮಾಡು" ಎಂದು ಧರ್ಮರಾಯನು ಬೋಧಿಸಿದ ಮೇಲೆ ಭೀಮ ಅರ್ಜುನ ನಕುಲ ಸಹದೇವರೂ ನೀತಿತತ್ವಗಳನ್ನು ಬೋಧಿಸುತ್ತಾರೆ. ಪರೀಕ್ಷಿತನು ಶೋಕಭರಿತನಾಗಲು ಎಲ್ಲರೂ ಅವನನ್ನು ಸಂತೈಸತೊಡಗುತ್ತಾರೆ. ದ್ರೌಪದಿ ಅವನನ್ನು ಆಲಿಂಗಿಸಿಕೊಂಡು ಸಮಾಧಾನ ಪಡಿಸುತ್ತಾಳೆ. "ಹಿಮಗಿರಿಯನ್ನು ನಾವು ದಾಟಿದೆವೆಂಬ ಸುದ್ದಿ ಕೇಳಿದ ಬಳಿಕ ನಮಗೆ ಪ್ರೇತದ ತಿಲೋದಕವನ್ನು ಕೊಟ್ಟು ಪಿಂಡವನ್ನಿಡು" ಎಂದು ಧರ್ಮರಾಯನು ಹೇಳಲು ಪರೀಕ್ಷಿತನಿಗೆ ದುಗುಡ, ದುಮ್ಮಾನ ಹೆಚ್ಚಾಗುತ್ತದೆ. ಪ್ರಜ್ಞೆ ತಪ್ಪಿದ ಅವನನ್ನು ಎಬ್ಬಿಸಿ ಬಿಗಿದಪ್ಪಿ ಮುಂಡಾಡಿ ಸಂತೈಸಿ ಹಸ್ತಿನಾವತಿಗೆ ಹೋಗೆಂದು ಹೇಳಿ ಪರೀಕ್ಷಿತನನ್ನು ಪಾಂಡವರು ಬೀಳ್ಕೊಡುವರು. ದುಃಖಿಸುತ್ತಾ ಪಾಂಡವರ ಹಾಗೂ ದ್ರೌಪದಿಯ ಚರಣಗಳಿಗೆ ವಂದಿಸಿ ಪರೀಕ್ಷಿತನು ಅವರನ್ನು ಬೀಳ್ಕೊಂಡು ಹಿಂತಿರುಗುವನು. ಪಾಂಡವರು ಶ್ರೀಕೃಷ್ಣನನ್ನು ಕಾಣುವ, ಸ್ವರ್ಗವನ್ನು ಹೊಂದುವ ತವಕದಿಂದ ಉತ್ತರಾಭಿಮುಖವಾಗಿ ನಡೆಯುವರು.

ನಾಲ್ಕನೆಯ ಸಂಧಿ : ಪಾಂಡವರನ್ನಗಲಿದ ಪರೀಕ್ಷಿತನು ಕಣ್ಣೀರು ಸುರಿಸುತ್ತಾ ದುಗುಡದಿಂದ ಅರಮನೆಗೆ ಬರುತ್ತಿರುವಾಗ ಇಕ್ಕೆಲದಲ್ಲಿ ಬರುವ ರಾಜರ, ಮಾಂಡಲಿಕರ, ಯೋಧರ ದುಗುಡವನ್ನು ಹೇಳತೀರದು. ಪಾಂಡವರ ಅಗಲಿಕೆಯಿಂದ ಆನೆ ಹಾಗೂ ಕುದುರೆಗಳೂ ಕಣ್ಣೀರು ಸುರಿಸಿದುವಂತೆ. ಪರೀಕ್ಷಿತನು ಶೋಕಭಾರ

ದಿಂದ ಅರಮನೆಯನ್ನು ಪ್ರವೇಶಿಸುತ್ತಾನೆ. ಚಿಂತೆಯೆಂಬ ಅಗ್ನಿ ತನುವನ್ನಾವರಿಸಿ ಒಳಗೊಳಗೇ ಹೊಗೆಯಿಡುತ್ತಿರುತ್ತದೆ. ಕಣ್ಣುಗಳಲ್ಲಿ ಶೋಕಜಲ ಸುರಿಯುತ್ತಿರುತ್ತದೆ. ಪುರಜನರು ಕೊಡುತ್ತಿದ್ದ ಕಾಣಿಕೆ, ದಾರಿಯಲ್ಲಿ ಶೋಭಿಸುತ್ತಿದ್ದ ಗುಡಿತೋರಣ ಸುಮಂಗಲೆಯರು ಬೆಳಗುತ್ತಿದ್ದ ರತುನಾರತಿ ಇವು ಯಾವುವನ್ನೂ ಲೆಕ್ಕಿಸದೆ ಬಂದ ರಾಜನು ಅರಮನೆಯ ಮುಂದೆ ರಥದಿಂದಿಳಿದು ಎಲ್ಲರನ್ನೂ ಅವರವರ ಮನೆಗಳಿಗೆ, ಬಿಡಾರಗಳಿಗೆ ಹೋಗಲು ಹೇಳುತ್ತಾನೆ. ಅರಮನೆಯ-ನ್ನು ಪ್ರವೇಶಿಸಿ ಭೀಮ, ಪಾರ್ಥ, ಧರ್ಮರಾಯ ಹಾಗೂ ನಕುಲ ಸಹದೇವರ ಮಂದಿರಗಳನ್ನು ನೋಡಿ ಮರುಗಿ ವಿಧಿಯನ್ನು ಬೈಯುತ್ತಾ ಧರೆಗೊರಗುತ್ತಾನೆ. ಅರಮನೆಯೊಳಗೆ ಸುಭದ್ರೆ, ಸುಗಂಧಿ, ಹಿಡಂಬಿ, ಗಂಧಿ ಮೊದಲಾದವರು ಮುಖ, ಹಣೆ, ಶಿರಗಳನ್ನು ಕೈಯ್ಯಿಂದ ಹೊಡೆದುಕೊಳ್ಳುತ್ತಾ ರೋದಿಸುತ್ತಾರೆ. ಅವರ ಹಾಹಾಕ್ರಂದನ ದಿಕ್ಕುದಿಕ್ಕಿಗೂ ಹಬ್ಬಿತು. ಕಣ್ಣೀರಧಾರೆ ಧಾರಾಕಾರವಾಗಿ ಸುರಿಯಿತು. ಪುರದ ನಾರಿಯರೆಲ್ಲರೂ ಗೋಳಿಡುತ್ತಾ ಬಂದು "ರಾಜರೆಲ್ಲ, ಎಲ್ಲಿ ಹೋದರು? ನಾವು ಯಾರ ವ್ರತವನ್ನು ಕೆಡಿಸಿದ್ದೇವೋ, ಯಾರ ಓಲೆಯನ್ನು ಎಳೆದಿದ್ದೇವೋ, ಯಾರ ಗಂಡಂದಿರನ್ನು ಅಗಲಿಸಿದ್ದೇವೋ, ಯಾರ ಸಿರಿಯನ್ನು, ಯಾರ ಭೋಜನವನ್ನು ಎಳೆದಿದ್ದೇವೋ ವೀರ ಪಾಂಡವರೇಕೆ ನಮ್ಮನ್ನು ಅಗಲಿದರು" ಎಂದು ಪರಿತಪಿಸುತ್ತಾರೆ. ಪರೀಕ್ಷಿತನು ಬಸವಳಿದು ಮೂರ್ಛಾಗತನಾಗಿ ಭೂಮಿಗೆ ಬೀಳಲು ಖಳರು ಪಟ್ಟಣವನ್ನು ಸೂರೆ ಮಾಡತೊಡಗುತ್ತಾರೆ. ಅತ್ಯುತ್ತಮ ಗುಣ-ಚಾರಿತ್ರ್ಯ ಹೊಂದಿದ ಪಾಂಡವರು ಅಗಲಲು ವಿಕಳನಾದ ಪರೀಕ್ಷಿತ ರಾಜನು ಯೋಗ್ಯನೇ ಎಂದು ಹಸ್ತಿನಾವತಿಯ ಜನರು ಕಳವಳಿಸುತ್ತಾರೆ. ಆಗ ವೇದವ್ಯಾಸರು ಬಂದು ಪರೀಕ್ಷಿತನ ದುಗುಡವನ್ನು ದೂರಮಾಡಿ, "ದುಃಖಿಸಿದರೆ ಪಾಂಡವರು ಮರಳಿ ಬರುತ್ತಾರೆಯೇ? ಅವರು ಪುಣ್ಯಾತ್ಮರು. ನೀನಿನ್ನು ಅವರ ಹಂಬಲ ಬಿಡು. ಸೂರೆಹೋಗುತ್ತಿರುವ ಪಟ್ಟಣವನ್ನು ರಕ್ಷಿಸು" ಎಂದು ಹೇಳುತ್ತಾರೆ. ಕೂಡಲೇ ಡಂಗುರ ಹೊಡೆಯಿಸಿ ಪಟ್ಟಣವನ್ನು ಸೂರೆಮಾಡುತ್ತಿದ್ದ ಖಳರಿಗೆ, ಮನ್ನೆಯರಿಗೆ ಪರೀಕ್ಷಿತನು ಶಿಕ್ಷೆ ವಿಧಿಸುತ್ತಾನೆ. ಪಾಂಡವರನ್ನೇ ನೆನೆನೆನೆದು ಚಿಂತಿಸುತ್ತಿದ್ದ ಪರೀಕ್ಷಿತನಿಗೆ ಮುನಿ ಪಂಚಪಾಂಡವರ ಪೂರ್ವದ ಕಥೆಯನ್ನು ಹೇಳುತ್ತಾನೆ.

ಪಾಂಡವರು ಹಿಂದೆ ಐದು ಜನ ಇಂದ್ರರಾಗಿದ್ದರು. ಶಿವನ ಕೈಲಾಸವನ್ನು ಪಡೆಯುವುದಕ್ಕಾಗಿ ಮನಸ್ಸಿನಲ್ಲಿ ತವಕಪಡುತ್ತಿರಲು ಅದನ್ನು ತಿಳಿದು ಕೋಪಗೊಂಡ ಶಿವನು ಅವರನ್ನು ರಜತಾದ್ರಿಯಲ್ಲಿ ಸೆರೆಹಿಡಿದಿಟ್ಟನು. ಹಲವು ಯುಗ ಕಳೆಯಲು ಗಿರಿಜೆಯಿಂದಾಗಿ ಅವರಿಗೆ ಬಿಡುಗಡೆಯಾಯಿತು. ಆಗ ಶಿವನು "ನೀವು ರಾಜರಾಗಿ ಭೂಮಿಯಲ್ಲಿ ಹುಟ್ಟಬೇಕು. ಹೆಣ್ಣೊಬ್ಬಳೇ ನಿಮಗೈವರಿಗೂ ಮಡದಿಯಾಗುತ್ತಾಳೆ. ಇದು ಸತ್ಯ" ಎಂದು ಆಜ್ಞೆ ಮಾಡಿದನು. ಆ ಇಂದ್ರರೈವರೂ ಬೇಡವೆಂದು ಎಷ್ಟು ಯಾಚಿಸಿದರೂ 'ಇದು ತಪ್ಪಲಾರದೆಂದು' ಹೇಳಿ ಶಿವನು ಅವರನ್ನು ಕಳುಹಿದನು. ಮುಂದೆ ಅವರು ಪಾಂಡುವಿಗೆ ಮಕ್ಕಳಾಗಿ ಹುಟ್ಟುವರು. ಇಂದ್ರನು ಇತ್ತ ವರದಿಂದ

ದ್ರುಪದನಂದನೆ ಸತ್ಯತಪವಧುವಾಗಿ ಭೂಮಿಯಲ್ಲಿ ಹುಟ್ಟುತ್ತಾಳೆ. ರಾಜನೊಬ್ಬ ಕುಷ್ಠರೋಗದ ಮುನಿಯಾಗಿ ಹುಟ್ಟುತ್ತಾನೆ. ಮನಸ್ಸಿನಲ್ಲಿ ಯಾವ ಅಂಜಿಕೆಯೂ ಇಲ್ಲದೆ ತರುಣಿಯು ಮುನಿಯನ್ನು ಭಜಿಸುತ್ತಿರಲು ಅವಳನ್ನು ಪರೀಕ್ಷಿಸುವುದಕ್ಕಾಗಿ ಮುನಿ ತಾನುಂಡು ಮಿಕ್ಕ ಅನ್ನದಲ್ಲಿ ಕೊಳೆತ ಬೆರಳೊಂದನ್ನು ಹಾಕುತ್ತಾನೆ. ಅದನ್ನು ನೋಡಿದ ಆಕೆ ಗಂಧ ಲೇಪಿಸಿ ವಸ್ತ್ರದಲ್ಲಿ ಬೆರಳನ್ನು ಮುಚ್ಚಿಟ್ಟು ಭುಕ್ತಾನ್ನ ಶೇಷವನ್ನು ಯಾವ ಸಂಕೋಚವೂ ಇಲ್ಲದೆ ಉಣ್ಣುತ್ತಾಳೆ. ಅವಳ ಭಕ್ತಿಗೆ ಮೆಚ್ಚಿದ ಮುನಿ ನಿನಗೆ ಬೇಕಾದ್ದನ್ನು ಬೇಡೆಂದು ಹೇಳಲು, ಆಕೆ "ದಿವ್ಯರೂಪದಲ್ಲಿ ನನ್ನೊಡನೆ ಕಾಮಕ್ರೀಡೆ ಮಾಡಬೇಕು" ಎಂದು ಕೇಳಿಕೊಳ್ಳುತ್ತಾಳೆ. ಅಂತೆಯೇ ದಿವ್ಯ ಶರೀರಿಯಾಗಿ ಆಕೆಯನ್ನು ಕೂಡಿ ತಪಸ್ಸಿಗಾಗಿ ಹೊರಟು ಹೋಗುವಮುನಿಯನ್ನು ಅವಳು ತಡೆಯಲು ಮುನಿ ಅವಳಿಗೆ, "ನೀನು ಮನುಷ್ಯ ಜನ್ಮದಲ್ಲಿ ಹುಟ್ಟಿ ರಾಜರ ಮಡದಿಯಾಗು" ಎಂದು ಶಾಪವನ್ನಿತ್ತು ಹೊರಟುಹೋಗುತ್ತಾನೆ. ಬಳಿಕ ಅರಣ್ಯ ದಲ್ಲಿದ್ದ ಆಕೆ ಶಿವನನ್ನು ಭಜಿಸಲು ಅವಳ ತಪಸ್ಸಿಗೆ ಮೆಚ್ಚಿ ಶಿವನು ಪ್ರತ್ಯಕ್ಷನಾಗಿ ನಿನಗೆ ಬೇಕಾದ್ದನ್ನು ಕೇಳೆನ್ನುತ್ತಾನೆ. ಅದಕ್ಕೆ ಅವಳು ಪಂಚವಾಕ್ಯವನ್ನು ಕೇಳು ತ್ತಾಳೆ. ಈ ಕಾರಣದಿಂದ ಐದು ಜನ ಇಂದ್ರರು ನರಜನ್ಮದಲ್ಲಿ ಜನಿಸಿದರು. ಆದುದರಿಂದ ಅವರು ಪುನಃ ದೇವತೆಗಳನ್ನೇ ಸೇರಬೇಕಲ್ಲದೆ ಬೇರೆ ದಾರಿಯಿಲ್ಲ. ನೀನು ರಾಜ್ಯವನ್ನು ಹೊಂದಿ ದುಃಖವನ್ನು ತೊರೆದು ಪುರಜನರನ್ನು ಸಂತೈಸು" ಎಂದು ಮುನಿಯು ಹೇಳಿ, ಸುಭದ್ರೆ ಹಿಡಂಬಿ, ಗಂಧಿ, ಸುಗಂಧಿಯರನ್ನು ಕರೆಸಿ, ಅವರ ದುಗುಡವನ್ನು ದೂರಮಾಡಿ, "ಪರೀಕ್ಷಿತನನ್ನು ಆದರಿಸಿಕೊಂಡಿರಬೇಕು. ಪಾಂಡವರಿ ಗಾಗಿ ದುಃಖಿಸಿ ಪ್ರಯೋಜನವಿಲ್ಲ." ಎಂದು ತನ್ನ ಆಶ್ರಮಕ್ಕೆ ಹಿಂತಿರುಗುತ್ತಾನೆ.

ವೇದವ್ಯಾಸರು ಧೌಮ್ಯರನ್ನು ಸಂಧಿಸಿ ಪರೀಕ್ಷಿತನಿಗೆ ನೀತಿಬೋಧೆ ಮಾಡ ಬೇಕೆಂದೂ ಉಪಾಯದಲ್ಲಿ ಎಲ್ಲವನ್ನೂ ಸಾಮದ ಬುದ್ಧಿಯಲ್ಲಿ ತಿಳಿಸಬೇಕೆಂದೂ ಹೇಳು ತ್ತಾರೆ. ಅಂತೆಯೇ ಧೌಮ್ಯರು ನೀಡಿದ ನೀತಿವಚನಗಳಿಂದ ಪರೀಕ್ಷಿತ ಹಾಗೂ ಸುಭದ್ರೆ ಮೊದಲಾದವರ ದುಗುಡ ದೂರವಾಗುತ್ತದೆ. ಪರೀಕ್ಷಿತನು ಹರುಷದಿಂದ ಸಿಂಹಾಸನದಲ್ಲಿ ಕುಳಿತು ಓಲಗವನ್ನಿತ್ತು, ಸಜ್ಜನರಿಗೂ, ಪ್ರಜೆಗಳಿಗೂ ಸುಭಟರಿಗೂ, ಸನ್ಮಾನ ಮಾಡಿ ದುಷ್ಟರನ್ನೂ, ಕಪಟಿಗಳನ್ನೂ, ಕಳ್ಳರನ್ನೂ ಶಿಕ್ಷಿಸಿ ಬ್ರಾಹ್ಮಣ, ಗುರು, ದೇವರನ್ನು ಭಜಿಸುತ್ತ ದಾನ ಧರ್ಮ ಮಾಡುತ್ತಾ, ಯೋಗ್ಯರೀತಿಯಿಂದ ರಾಜ್ಯವಾಳುತ್ತಾನೆ. ಸಾಹಸಗುಣಶೀಲಗಳಲ್ಲಿ ಧರ್ಮನಿಷ್ಠೆಯಲ್ಲಿ ಉಪಪಾಂಡವ ರಿಗಿಂತಲೂ ಏಳು ಪಟ್ಟು ಮಿಗಿಲಾಗಿ ಪರೀಕ್ಷಿತನು ಸಕಲ ಭೂಮಂಡಲವನ್ನಾಳುತ್ತಾನೆ.

ಐದನೆಯ ಸಂಧಿ : ಗಂಗಾ ನದಿಯನ್ನು ದಾಟಿ ಪಾಂಡವರು ಉತ್ತರಾಭಿಮುಖ ವಾಗಿ ನಡೆದು ಗಯೆ, ಕೇದಾರಗಳನ್ನು ಸಂದರ್ಶಿಸಿದರು. ಅವರೆಲ್ಲರೂ ಮೋಕ್ಷವನ್ನು ಪಡೆಯುವ ಸಲುವಾಗಿ ಶ್ರೀಹರಿಯನ್ನು ನೆನೆಯುತ್ತಾ ಸರ್ವಸ್ವವನ್ನೂ ತ್ಯಜಿಸಿ ಸನ್ಯಾಸಿ ವೇಷವನ್ನು ಧರಿಸಿ ಮುಂದೆ ಹೋಗುತ್ತಿದ್ದರು. ಕಾಡಿನ ಮಧ್ಯೆ ಹೋಗುತ್ತಾ

ಇದ್ದಾಗ ಬೇಡಪಡೆಯೊಂದರ ಮಧ್ಯೆ ಸಿಕ್ಕಿಹಾಕಿಕೊಂಡರು. ಅವರನ್ನಿದಿರಿಸಲು ಭೀಮ ಮುಂದಾದಾಗ ಧರ್ಮರಾಯ ತಡೆದನು. ಆ ಕಿರಾತರು ದ್ರೌಪದಿಯ ಸೆರಗನ್ನು ಹಿಡಿದೆಳೆಯುತ್ತಿದ್ದರೂ ಪಾಂಡವರು ಸುಮ್ಮನಿರಲು ಆಕೆ ಅವರನ್ನು ದೂಷಿಸುತ್ತಾ ಕಾಪಾಡಿರೆಂದು ಮೊರೆಯಿಟ್ಟಳು. ಪತಿಗಳು ತನ್ನ ರಕ್ಷಣೆಗೆ ಬಾರದಿರುವುದನ್ನು ಕಂಡು ಆಕೆ ಶಿವನನ್ನು ಧ್ಯಾನಿಸುತ್ತ ದಯೆತೋರಿಸೆಂದು ಪ್ರಾರ್ಥಿಸಿದಳು. ಹಿಂದೆ ರಾಜಸಭೆಯಲ್ಲಿ ದುಶ್ಯಾಸನನು ತನ್ನನ್ನು ಅವಮಾನ ಮಾಡುತ್ತಿದ್ದಾಗ ಮಾನ ಕಾಯ್ದ ಕೃಷ್ಣನಿಗೆ ಮೊರೆಯಿಟ್ಟು ಖಳರ ಬಾಧೆಯನ್ನು ದೂರ ಮಾಡೆಂದು ನಾನಾ ವಿಧವಾಗಿ ಹಲುಬಿದಳು. ದ್ರೌಪದಿಯ ಮೊರೆಯನ್ನು ಕೇಳಿದ ಕೃಷ್ಣನು ಅವಳ ಮಾನವನ್ನು ಕಾಪಾಡುವುದಕ್ಕೆ ಮುಂದಾದನು. ಕಿರಾತರು ದ್ರೌಪದಿಯನ್ನು ತಮ್ಮೊಡೆಯನಾದ ವೃಷಸನಲ್ಲಿಗೆ ಎಳೆದುತಂದು "ಈಕೆಯನ್ನು ನಿಮ್ಮ ಹೆಂಡತಿಯನ್ನಾಗಿ ಮಾಡಿಕೊಳ್ಳಿರಿ" ಎಂದು ಬಿನ್ನವಿಸಿದರು. ಅವಕ್ಕೆ ಆತನು "ಈಕೆ ಲೋಕಪಾವನೆ, ಮಹಾಸತಿ, ನನ್ನ ತಾಯಿ" ಎಂದು ಹೇಳಿ ದ್ರೌಪದಿಯನ್ನು ಊರ ಹೊರಗೆ ಬಿಟ್ಟುಬರುವಂತೆ ಆಜ್ಞೆ ಮಾಡಿದನು. ಕೃಷ್ಣನ ಅನುಗ್ರಹದಿಂದಾಗಿ ಕಷ್ಟದಿಂದ ಪಾರಾದ ದ್ರೌಪದಿ ಪಾಂಡವರ ಜೊತೆ ಸೇರಿಕೊಂಡಳು.

ಆರನೆಯ ಸಂಧಿ : ಬೆಳುದಿಂಗಳಲ್ಲೇ ನಡೆದು ಮುಂದೆ ಹೋದ ಪಾಂಡವರು ಒಂದು ಕೊಳವಲ್ಲಿ ಕೈಕಾಲು ಮುಖ ತೊಳೆದು ಸಂಧ್ಯಾವಂದನೆ ಮುಗಿಸಿ, ವಟವೃಕ್ಷದಡಿಯ ತಳಿರಿನ ಹಾಸಿನಲ್ಲಿ ಮಲಗಿ ಆ ರಾತ್ರಿಯನ್ನು ಕಳೆಯುತ್ತಾರೆ. ಮರುದಿನ ಅವರು ಅಲ್ಲಿಂದ ಮುಂದಕ್ಕೆ ನಡೆಯುತ್ತಾ ಕಾಡಿನಲ್ಲಿರುವ ವಿವಿಧ ಮರಗಳನ್ನು ಪ್ರಾಣಿಪಕ್ಷಿಗಳನ್ನು ನೋಡುತ್ತಾ ಮುನ್ನಡೆಯುತ್ತಾರೆ. ಆಗ ಕಾಳ್ಗಿಚ್ಚೊಂದು ಅವರನ್ನು ಆವರಿಸಿಕೊಂಡಿತು. ಕಾಳ್ಗಿಚ್ಚು ಭೀಕರವಾಗಿ ಉರಿಯಲು ದ್ರೌಪದಿ ಹೆದರಿಕೊಂಡಳು. ಪಾಂಡವರಲ್ಲಿ ಪ್ರತಿಯೊಬ್ಬರೂ ಆ ಬೆಂಕಿಗೆ ನಾನು ಆಹುತಿಯಾಗುತ್ತೇನೆ, ತಾನು ಆಹುತಿಯಾಗುತ್ತೇನೆಂದು ಹೇಳಿಕೊಳ್ಳುತ್ತಾರೆ. ದ್ರೌಪದಿಯು ತಾನೇ ಎಲ್ಲರಿಗಿಂತ ಮೊದಲು ಅಗ್ನಿಗಾಹುತಿಯಾಗುತ್ತೇನೆಂದು ಹೇಳಲು ಧರ್ಮರಾಯನು ಅದಕ್ಕೆ ಒಪ್ಪುತ್ತಾನೆ. ಅಗ್ನಿಪುತ್ರಿಯಾದ ದ್ರೌಪದಿ ಪತಿಗಳಿಗೆ ವಂದಿಸಿ, ತ್ರಿಮೂರ್ತಿಗಳನ್ನು ಮನವಲ್ಲೇ ಧ್ಯಾನಿಸುತ್ತ ಬೆಂಕಿಯನ್ನು ಪ್ರವೇಶಿಸಲು ಆ ಕೃತಕಾಗ್ನಿ ಮಾಯವಾಗುತ್ತದೆ. ಈ ರೀತಿ ದಾರಿಯಲ್ಲಿ ತಮಗೊದಗಿದ ಕಷ್ಟವನ್ನೆದುರಿಸುತ್ತ ಪಾಂಡವರು ಬಳಲಿದ ದ್ರೌಪದಿಯನ್ನು ಕೂಡಿಕೊಂಡು ಗಿರಿಯನ್ನೇರಿ ಎದುರಾದ ಸುರನದಿಯನ್ನು ದಾಟಿ ಬೆಟ್ಟವನ್ನಿಳಿದು ಮುಂದಿನ ಕಾಡನ್ನು ಸೇರುತ್ತಾರೆ.

ಕಾಡಿನಲ್ಲಿ ಒಬ್ಬ ದಾನವನು ಎರಡು ಯೋಜನದಷ್ಟು ಉದ್ದಕ್ಕೆ ಭೂಮಿಯಲ್ಲಿ ಮಲಗಿದ್ದನು. ಬ್ರಹ್ಮನ ಶಾಪ ಪಡೆದ ಆತನು ಶಾಪ ವಿಮೋಚನೆ ಪಡೆಯಲು ಭೀಮನ ಬರುವಿಕೆಗಾಗಿ ಹಾತೊರೆಯುತ್ತಿದ್ದ. ಭೀಮನು ಹರಿಯನ್ನು ನೆನೆಯುತ್ತಾ ಆ ಅಸುರನೆಡೆಗೆ ಬಂದನು. ಆಗ ಧರ್ಮಜನು ಅವನಿಂದಾಗಿ ಸತ್ತರೆ ತಮಗೆ ನರಕ

ಪ್ರಾಪ್ತಿಯಾಗಬಹುದಾದ್ದರಿಂದ ಸಾಮೋಪಾಯದಿಂದ ಆತನನ್ನು ಎಬ್ಬಿಸೆಂದು ತಿಳಿಸಿದನು. ಭೀಮನು ಆ ರೀತಿ ಎಬ್ಬಿಸಲು ಆ ದಾನವನು ಆರ್ಭಟಿಸುತ್ತಾ ಭೀಮನೊಡನೆ ಹೋರಾಡಿ ಸೋತು ಹಿಂದಿರುಗಿದನು. ಪಾಂಡವರು ಮುಂದೆ ಹೋಗುತ್ತಾ ಪದ್ಮ ಪರ್ವತವನ್ನು ಕಂಡರು. ಶ್ರಮಪಟ್ಟು ಆ ಗಿರಿಯನ್ನು ಹತ್ತಿ ಬಸವಳಿದು ಒಂದು ಮರದಡಿಯಲ್ಲಿ ಮಲಗಿದರು. ನೀರಿಗಾಗಿ ಹುಡುಕಾಡಿದಾಗ ಎಲ್ಲಿಯೂ ನೀರು ದೊರೆಯುವುದಿಲ್ಲ. ಇದರಿಂದ ದ್ರೌಪದಿ ಬಹಳ ಕಂಗೆಡುತ್ತಾಳೆ. ಅವರು ಗಿರಿಯ ಮೇಲೇರಿ ಹೋದಾಗ ಸುರನದಿಯೊಂದು ಕಾಣಿಸುತ್ತದೆ. ಆ ನದಿಯ ನೀರನ್ನು ಕುಡಿದು ಪಾಂಡವರು ತಮ್ಮ ಮಾರ್ಗಾಯಾಸವನ್ನು ಪರಿಹರಿಸಿಕೊಳ್ಳುತ್ತಾರೆ.

ಏಳನೆಯ ಸಂಧಿ: ಪಾಂಡವರು ಪದ್ಮಪರ್ವತವನ್ನಿಳಿದು ಶಿವನನ್ನು ನೆನೆಯುತ್ತಾ ಹಲವು ಯೋಜನ ದೂರ ಸಾಗುತ್ತಾರೆ. ಮುಂದಿರುವ ಅಜೇಯ ಪರ್ವತವನ್ನು ನೋಡಿ ಕೃಷ್ಣನನ್ನು ನೆನೆಯುತ್ತಾ ಮುಂದುವರಿಯುತ್ತಿರಲು ದ್ರೌಪದಿ ಬೆಟ್ಟವನ್ನೇರಲಾರದೆ ಬಸವಳಿಯುವಳು. ಆದರೂ ಬಹಳ ಕಷ್ಟದಿಂದ ಅವರು ಅದನ್ನೇರುತ್ತಾರೆ. ಅಲ್ಲಿದ್ದ ನದಿಯಲ್ಲಿ ಕೈಕಾಲು ತೊಳೆದು ದಾಹವಡಗಿಸಿಕೊಳ್ಳುತ್ತಾರೆ. ಆ ಗಿರಿಯನ್ನಿಳಿದು ಬಂದಾಗ ಮತ್ತೆ ಬೇಗೆಯಿಂದ ಬೆಂದುಹೋದರು. ನೀರನ್ನು ಹುಡುಕುತ್ತಾ ಆಯಾಸದಿಂದ ಕಾಡೊಂದನ್ನು ಹೊಕ್ಕರು. ಕಲ್ಲು ಮುಳ್ಳುಗಳಲ್ಲಿ ನಡೆದು ಕಾಲಲ್ಲಿ ರಕ್ತ ಸುರಿಯತೊಡಗಿದರೂ ಸ್ವರ್ಗಾರೋಹಣದ ಆಸೆಯಿಂದ ಪಾಂಡವರು ಮುಂದಕ್ಕೆ ಅಡಿಯಿಡುತ್ತಿದ್ದರು. ಶಕ್ತಿಗುಂದಿದ ಮನಗುಂದಿದ ತನ್ನ ಮಡದಿ ದ್ರೌಪದಿ ಹಾಗೂ ತಮ್ಮಂದಿರನ್ನು ಆದರಿಸುತ್ತಾ ಧರ್ಮಜನು ಮುನ್ನಡೆಯುತ್ತಾನೆ. ಶೀತವಾತಕ್ಕೊಳಗಾಗಿ ಶರೀರವು ನಡುಗುತ್ತಿದ್ದರೂ ಧರ್ಮರಾಜನ ಆಜ್ಞೆಯನ್ನು ಮೀರಲಾರದೆ ಉಳಿದವರು ನಡೆಯುತ್ತಿದ್ದರು.

ಎಂಟನೆಯ ಸಂಧಿ: ಎಲ್ಲೆಡೆಯೂ ಹಿಮವು ದಟ್ಟವಾಗಿ ಹಬ್ಬಿಕೊಂಡಿತ್ತು. ಕೃಷ್ಣನನ್ನು ನೆನೆಯುತ್ತಾ ಪಾಂಡವರು ಆ ಹಿಮದ ಮಾರ್ಗವಾಗಿ ನಡೆದು ಬಂದರು. ಹಿಮದ ತೀಕ್ಷ್ಣತೆಯನ್ನು ಸಹಿಸಲಾರದೆ ದ್ರೌಪದಿ ಬಸವಳಿದು ಮಲಗಿದಳು. ಅಂಗಾಂಗವೆಲ್ಲಾ ಹಿಮದ ಪ್ರಭಾವಕ್ಕೊಳಗಾಯಿತು. ಕೈಕಾಲು ಮುರುಟಿ ಹೋಯಿತು. ಆಕೆ ಪ್ರಾಣವನ್ನು ತೊರೆಯುವ ಸ್ಥಿತಿಯಲ್ಲಿದ್ದಳು. ಭೀಮಾರ್ಜುನ ನಕುಲ ಸಹದೇವರು ಅವಳ ಅಗಲುವಿಕೆಗಾಗಿ ದುಃಖಿಸತೊಡಗಿದರು. ಅವಳ ಗುಣವನ್ನು ಕೊಂಡಾಡಿ ಅತ್ತರು. ವಿಧಿಯನ್ನು ಬೈದರು. ಆಗ ಧರ್ಮರಾಯನು ಅವರನ್ನು ಜರೆದು "ದ್ರೌಪದಿಯಿಂದಾಗಿ ನಮಗಾದ ವಿಪತ್ತನ್ನು ಮರೆತಿರೇ? ಅವಳು ಪರಿಶುದ್ಧಳಲ್ಲ. ನಮ್ಮ ಮಡದಿಯಾಗಿದ್ದ ಈಕೆಗೆ ಕರ್ಣನಲ್ಲಿ ಮನಸ್ಸಿತ್ತು. ಆದುದರಿಂದ ಇವಳಿಗೆ ಸ್ವರ್ಗದಲ್ಲಿ ಸ್ಥಾನವಿಲ್ಲ. ನಾವು ಇವಳನ್ನು ಬಿಟ್ಟುಹೋಗೋಣ" ಎಂದು ಹೇಳಲು, ಅವನ ಮಾತಿನಂತೆ ಎಲ್ಲರೂ ದ್ರೌಪದಿಯನ್ನು ತೊರೆದು ಹಿಮ ತುಂಬಿದ ದಾರಿಯಲ್ಲಿ ಉತ್ತರ ದಿಕ್ಕಿಗೆ ನಡೆದರು. ಮುಂದೆ ಹೋಗುವಾಗ ಶಕ್ತಿ

ಕುಂದಿಹೋದ ಕುಂತಿ ನೆಲದಲ್ಲೊರಗಿದಳು. ಯಮನ ದೂತರು ಆಕೆಯನ್ನೊಯ್ಯಲು ಬಂದಾಗ ವಿಷ್ಣುವಿನ ಭಟರು ಅಡ್ಡಗಟ್ಟಿ ಆವಳನ್ನು ವೈಕುಂಠಕ್ಕೆ ಕರೆದೊಯ್ಯುವರು. ತನ್ನ ತಮ್ಮಂದಿರು ಬಂದು ದುಃಖಿಸಲು ಧರ್ಮಜನು "ತಾಯಿಯಾದ ಕುಂತಿ ಸದ್ಗತಿಯನ್ನು ಪಡೆದಿದ್ದಾಳೆ. ಕನ್ನಿಕೆಯಾಗಿದ್ದಾಗ ಸೂರ್ಯಮಂತ್ರದಿಂದ ಪಡೆದ ಕರ್ಣನನ್ನು ಗಂಗೆಗೆ ಎಸೆದುದರಿಂದ ಅವಳು ಪರಲೋಕಕ್ಕೆ ಸಲ್ಲಲಾರಳು" ಎಂದು ಸಂತೈಸಿದನು. ಬಳಿಕ ಅವರು ಮುಂದಕ್ಕೆ ನಡೆದರು. ಸ್ವಲ್ಪ ಹೊತ್ತಿನಲ್ಲೇ ಹಿಮದಿಂದಾವೃತನಾದ ನಕುಲನು ಶಕ್ತಿಗುಂದಿ ಮರಣಹೊಂದಿದನು. ಉಳಿದವರು ಅವನಿಗಾಗಿ ಅಳಲಾರಂಭಿಸಿದರು. ಅವನ ದೇಹದ ಮೇಲೆ ಬಿದ್ದು ಹೊರಳಾಡಿದರು. ಬಳಿಕ ನಕುಲನನ್ನು ಬಿಟ್ಟು ನಾಲ್ವರೂ ಮುಂದುವರಿದು ಕೋಟಿ ಪರ್ವತಕ್ಕೆ ಬಂದರು. ಅಲ್ಲಿ ಸಹದೇವನು ಹಿಮದ ಪ್ರಭಾವಕ್ಕೊಳಗಾಗಿ ಅಸುನೀಗಲು ಭೀಮಾರ್ಜುನರು ನಾನಾ ಪರಿಯಾಗಿ ಸಹದೇವನನ್ನು ಕೊಂಡಾಡಿ ಅತ್ತರು. ಆಗ ಧರ್ಮರಾಯನು ಅವರನ್ನು ಬೈದು "ಈತನು ಮಹಾಪಾತಕಿ. ಬಂಧುಗಳ ವಧೆ ಮಹಾಪಾತಕವೆಂದು ಮೊದಲೇ ತಿಳಿಸದ ಇವನು ಗೋತ್ರಘಾತಕನೂ ಗುರುಘಾತಕನೂ ಆಗಿದ್ದಾನೆ. ಇವನನ್ನು ಮರೆತುಬಿಡಿ" ಎಂದನು. ಸಹದೇವನನ್ನೂ ತೊರೆದು ಮೂವರೂ ಹಾದಿಯಲ್ಲಿ ಮುಂದೆ ಬರುತ್ತಿರಲು ಅರ್ಜುನನನ್ನು ಹಿಮವು ಮುತ್ತಿಕೊಂಡಿತು. ಒಂದು ಯೋಜನದವರೆಗೆ ಭೀಮನು ಅರ್ಜುನನನ್ನು ಹೊತ್ತುತಂದು ಕೆಳಗಿಳಿಸಲು ಅವನು ಪ್ರಾಣವನ್ನು ನೀಗಿದನು. ಭೀಮನು ಅರ್ಜುನನ ಅಗಲುವಿಕೆಯಿಂದ ಉಂಟಾದ ದುಃಖದಲ್ಲಿ ಮುಳುಗಿ ಅವನ ಶೌರ್ಯ ಸಾಹಸಗಳನ್ನು ನೆನೆದು ಮರುಗಿದನು. ಆಗ ಧರ್ಮರಾಯನು "ಅರ್ಜುನನು ದುರಾತ್ಮಕ, ಗೋತ್ರಘಾತಕ, ಬಂಧುಗಳನ್ನೂ ಹಿರಿಯರನ್ನೂ ಕೊಂದವನು. ಇವನು ಪರಲೋಕವನ್ನು ಹೊಂದಲು ಅರ್ಹನಲ್ಲ. ನಾವು ಮುಂದಕ್ಕೆ ಹೋಗೋಣ" ಎಂದನು. ಅರ್ಜುನನನ್ನು ಬಿಟ್ಟು ಧರ್ಮರಾಯನೂ ಭೀಮನೂ ಮುಂದುವರಿಯಲು, ಹಿಮವು ಭೀಮನನ್ನು ಆವರಿಸಿತು. ಶಕ್ತಿಗುಂದಿ ಅಂಗೋಪಾಂಗಗಳು ಹಿಮದ ಪ್ರಭಾವಕ್ಕೊಳಗಾಗಿ ಭೀಮನೂ ಧರೆಗೊರಗಿದನು. ಭೀಮನ ಸ್ಥಿತಿಯನ್ನು ಕಂಡು ಧರ್ಮರಾಯನು ದುಃಖಿಸುತ್ತಾ ಅವನ ಮೇಲೆ ಬಿದ್ದು ಹೊರಳಾಡಿದನು.

ಒಂಬತ್ತನೆಯ ಸಂಧಿ : "ಎಂದಿಗೂ ನನ್ನ ಮಾತನ್ನು ಮೀರಿ ನಡೆಯದ ನೀನು ನನ್ನೊಬ್ಬನನ್ನೇ ಬಿಟ್ಟು ಹೋದೆಯಾ? ಆನೆಯ ಬಲವುಳ್ಳ ನಿನಗೆ ಈ ವಿಧಿಯೇ? ಕೌರವರೆಲ್ಲರನ್ನೂ ಕೊಂದು ವೀರಾಗ್ರೇಸರನಾದ ನೀನು ಹಿಮದಲ್ಲಿ ಒರಗುವುದೇ" ಎಂದು ಧರ್ಮರಾಯನು ಭೀಮನ ಗುಣಗಾನ ಮಾಡಿ, ಬಳಿಕ ಹಿಂದೆ ಬಿಟ್ಟು ಬಂದ ಕುಂತಿ, ಹಾಗೂ ಮಡದಿ ದ್ರೌಪದಿ ಮತ್ತು ತಮ್ಮಂದಿರ ಗುಣಗಳನ್ನು ನಾನಾ ರೀತಿಯಲ್ಲಿ ಕೊಂಡಾಡಿ ಅವರ ಅಗಲುವಿಕೆಗಾಗಿ ನೊಂದು ಗೋಳಿಡುತ್ತಾನೆ. ಧರ್ಮರಾಯನ ಅವಸ್ಥೆಯನ್ನು ತಿಳಿದ ಕೃಷ್ಣನು ವೇಷ ಮರೆಸಿಕೊಂಡು ಬಂದು, ಆಕಾಶದಲ್ಲಿ ನಿಂತು, ಅಶರೀರವಾಣಿಯಲ್ಲಿ "ಸುಮ್ಮನೇ ಒದರುವುದರಿಂದ ಫಲವೇನು" ಎಂದು ಹೇಳಿ,

ತತ್ವಜ್ಞಾನ, ನೀತಿಗಳನ್ನು ಬೋಧಿಸುತ್ತಾನೆ. ಆ ಅಶರೀರವಾಣಿ, "ಸತ್ಯವೇ ತಾಯಿ, ಜ್ಞಾನವೇ ತಂದೆ, ಧರ್ಮವೇ ಸೋದರ, ದಯೆಯೇ ಸಖೀ ಜನ, ಮತಿಯೇ ಸತಿ, ರಾಗ ದ್ವೇಷ ರಹಿತವೇ ಸುತನು. ಎಲ್ಲರಲ್ಲೂ ಕ್ಷಮೆ ತೋರಿಸಬೇಕು. ನಿರ್ಮಲತೆಯಿಂದ ಉತ್ತಮ ಬಾಂಧವ್ಯವನ್ನು ಮಾಡಬೇಕು. ತನ್ನನ್ನು ತಾನು ತಿಳಿದುಕೊಳ್ಳಬೇಕು. ತನ್ನ ಮನ, ಮನೆವಾರ್ತೆ, ಸೋದರರು, ಸತಿಸುತ, ತಾಯಿ ತಂದೆ ಎನ್ನುವ ಮಾಯಾಪಾಶದಲ್ಲಿ ಸಿಲುಕಬಾರದು" ಎಂದು ಹೇಳಲು ಧರ್ಮರಾಯನು ಭೀಮನ ಹೆಣವನ್ನು ಬಿಸುಟು ಮುಂದೆ ನಡೆಯುತ್ತಾನೆ. ಸಹಿಸಲಾರದೆ ಪುನಃ ಹಿಂದೆಬಂದು ಭೀಮನ ಹೆಣವನ್ನು ಹೆಗಲಿಗೇರಿಸಿ ನಡೆಯಲು ಕೃಷ್ಣನು ವೃದ್ಧರೂಪದ ವಿಪ್ರನಾಗಿ ಒಂದು ಬಿದ್ದುಹೋದ ಅರಳಿ ಮರವನ್ನು ತಂದು ನಿಲ್ಲಿಸಿ ಅದಕ್ಕೆ ಸುತ್ತಲೂ ಕಟ್ಟೆಕಟ್ಟಿ ಸಾವಿರ ತೂತಿರುವ ಕೊಡದಲ್ಲಿ ನೀರನ್ನು ಹೊತ್ತು ತಂದು ಸುರಿಯುತ್ತಾನೆ. ಅದನ್ನು ಧರ್ಮರಾಯನು ನೋಡಿ, "ಹಳೆಯ ಮರಕ್ಕೆ ನೀರೆರೆದರೆ ಮುಂದೆ ಅದು ಚಿಗುರಿ ಬೆಳೆಯಲು ಸಾಧ್ಯವೇ? ಆದುದರಿಂದ ನಿನ್ನ ಕಾರ್ಯ ನಿಷ್ಪ್ರಯೋಜಕ" ಎಂದು ಹೇಳಲು ಆ ಬ್ರಾಹ್ಮಣನು "ನೀನು ಹೆಣವನ್ನು ಹೊರುವುದೇಕೆ? ಅದಕ್ಕೆ ಮುಂದೆ ಜೀವ ಬರುತ್ತದೆಯೇ? ಬದುಕಿ ಅದು ನಿನ್ನನ್ನು ರಕ್ಷಿಸುತ್ತದೆಯೇ? ಇದರ ಕಾರಣ ನಿನಗೆ ನರಕವೇ ಹೊರತು ಬೇರೆ ಗತಿಯಿಲ್ಲ" ಎಂದು ಹೇಳಲು ಧರ್ಮಜನು ಆ ಹೆಣವನ್ನು ಬಿಟ್ಟುಬಿಡುತ್ತಾನೆ. "ನಿನಗೆ ಸ್ವರ್ಗದ ಸೌಖ್ಯ ಪದವಿ ದೊರೆಯಲಿ" ಎಂದು ಹೇಳಿ ಬ್ರಾಹ್ಮಣನು ಅದೃಶ್ಯನಾಗುತ್ತಾನೆ. ಧರ್ಮರಾಯನು ಮುಂದೆ ಹೋಗುತ್ತಿರಲು ಯಮಧರ್ಮರಾಯನು ನಾಯಿಯ ವೇಷವನ್ನು ಧರಿಸಿ ಆತನನ್ನೇ ಹಿಂಬಾಲಿಸುತ್ತಾನೆ. ಮುಂದೆ ಹೋಗಲು ವೈತರಣಿ ಎದುರಾಗುತ್ತದೆ. ರಕ್ತದ ಕೀವಿನಿಂದ ತುಂಬಿದ ಭೀಕರವಾದ ಆ ಮಡುವನ್ನು ಕಂಡು ಬೆದರಿ ಧರ್ಮರಾಯನು ಅದನ್ನು ದಾಟುವುದು ಹೇಗೆಂದು ಚಿಂತಿಸುತ್ತಾನೆ. ಅದನ್ನು ತಿಳಿದ ಕೃಷ್ಣನು ಭೂಮಿಯಿಂದ ಧರ್ಮರಾಯನನ್ನು ಕರೆದೊಯ್ಯಲು ಪುಷ್ಪಕವನ್ನು ಕಳುಹಿಸುತ್ತಾನೆ. ಸಾವಿರ ಕುದುರೆಗಳಿಂದ ಕೂಡಿದ ರಥ ದೇವದುಂದುಭಿಯೊಂದಿಗೆ ಬರುತ್ತದೆ. ಧರ್ಮರಾಯನ ಸುಕೃತಕ್ಕೆ ಅಳವಿಲ್ಲದಾಗುತ್ತದೆ.

ಹತ್ತನೆಯ ಸಂಧಿ: ಮಾತಲಿ ಪುಷ್ಪಕವನ್ನು ತಂದು ಧರ್ಮರಾಯನ ಬಳಿಯಲ್ಲಿ ನಿಲ್ಲಿಸಲು ದೇವೇಂದ್ರನು, "ನಿನ್ನನ್ನು ಕರೆತರಲು ಮುರಾರಿ ನನ್ನನ್ನು ಕಳುಹಿಸಿದ್ದಾನೆ. ಪುಷ್ಪಕವನ್ನೇರು" ಎನ್ನುತ್ತಾನೆ. ಅವನ ಮಾತಿಗೆ ಸಂತಸಗೊಂಡ ಧರ್ಮಜನು ಪುಳಕಿತನಾಗಿ ಪುಷ್ಪಕಕ್ಕೆ ವಂದಿಸಿ "ನಿಮ್ಮ ದರ್ಶನವಾದುದು ನನ್ನ ಭಾಗ್ಯ" ಎಂದು ದೇವೇಂದ್ರನಿಗೆ ಹೇಳಲು, ಆತನು "ವೈತರಣೀ ನದಿಯನ್ನು ದಾಟಿ ಮಾನವ ಜನ್ಮದಲ್ಲಿ ಮಾಡಿದ ಪಾಪವನ್ನು ನೀಗಿ ನೀನು ದೇವ ಸಮೂಹದಲ್ಲಿ ಮುಖ್ಯವಾದ ಪದವಿಯನ್ನು ಹೊಂದುವಿ. ನದಿಯನ್ನು ದಾಟಿ ಬಾ" ಎಂದು ಹೇಳಲು ಧರ್ಮರಾಯನು ನದಿಗಿಳಿಯುತ್ತಾನೆ. ಅದರಲ್ಲಿ ಮುಳುಗಿದಾಗ ಧರ್ಮರಾಯನ

ಮೈ ಚರ್ಮ ಸುಲಿದುಹೋಗಲು ಅದನ್ನು ಕಂಡ ದೇವೇಂದ್ರನು ಬೆರಗಾಗಿಬಿಡುತ್ತಾನೆ. ಮಹಾಭಾರತ ಯುದ್ಧದಲ್ಲಿ ಧರ್ಮರಾಯನು ದ್ರೋಣನಿಗೆ 'ಅಶ್ವತ್ಥಾಮವೆಂಬ ಆನೆ ಬಿದ್ದಿತು' ಎಂದು ಹೇಳಿದುದೇ ಇದಕ್ಕೆ ಕಾರಣ. ಕೃಷ್ಣನ ಮಾಯೆಯಿಂದಾಗಿ ಧರ್ಮರಾಯನ ನಿಜವಾದ ಸತ್ಯವ್ರತಕ್ಕೆ ಭಂಗಬಂದಿರುತ್ತದೆ. ಚರ್ಮ ಸುಲಿದು ಹೋದ ಧರ್ಮಜನು ನದಿಯಲ್ಲಿ ಮುಳುಗಿ ತಳ ಸೇರಲು ದೇವೇಂದ್ರನು ಅಮೃತದ ಮಳೆಗರೆದು ಅವನ ತನುವನ್ನು ದಿವ್ಯತನುವನ್ನಾಗಿ ಮಾಡುತ್ತಾನೆ. ಕಾಂತಿಯಿಂದ ಕೂಡಿದ ಶರೀರ ಹಾಗೂ ಮಂಗಳಕರವಾದ ಮಾತಿನಿಂದ ಕೂಡಿದ ಧರ್ಮಜನು ಇಂದ್ರನ ಕಾಲಿಗೆರಗಲು ಅವನನ್ನು ಹಿಡಿದೆತ್ತಿ "ನೀನು ದಂದುಮಾರ, ಭಗೀರಥ, ನಳ, ನಹುಷ, ಪುರುಕುತ್ಸ, ಸಗರ, ಪುರೂರವ, ಹರಿಶ್ಚಂದ್ರ ಮೊದಲಾದ ರಾಜರಂತೆ ಶ್ರೇಷ್ಠನು. ನೀನು ಬಹಳ ಅದೃಷ್ಟಶಾಲಿ, ಸೂರ್ಯವಂಶ ಚಂದ್ರವಂಶಗಳಲ್ಲಿ ನಿನ್ನಂತಹ ಪುಣ್ಯವಂತರು ಬೇರೆ ಯಾರೂ ಇಲ್ಲ, ರಥವನ್ನೇರು, ಮುಕುಂದನಿದ್ದಲ್ಲಿಗೆ ಹೋಗೋಣ" ಎಂದಾಗ ಧರ್ಮಜನು ತನ್ನೊಂದಿಗೆ ಬಂದ ನಾಯನ್ನು ಬಿಟ್ಟು ಬರೆನು ಎನ್ನುತ್ತಾನೆ. "ನಾಯಿಯನ್ನು ಪುಷ್ಪಕದಲ್ಲಿ ಕೊಂಡು ಹೋಗಬೇಕೆನ್ನುವುದು ಮಹಾಪಾಪ. ನಾಯನ್ನು ನೋಡಿದರೆ ಪುಣ್ಯ ನಾಶವಾಗುತ್ತದೆ. ಪಾಪಕ್ಕೆ ದಾರಿ. ಅದನ್ನೊಯ್ಯುವುದರಿಂದ ಪರಲೋಕಪ್ರಾಪ್ತಿಯಾಗದು. ಅದನ್ನು ಬಿಡುವುದು ಉಚಿತ" ಎಂದು ಇಂದ್ರನು ಹೇಳುತ್ತಾನೆ. ನಾಯನ್ನು ಬಿಡುವುದಕ್ಕೆ ಧರ್ಮಜನು ಸಿದ್ಧನಾಗಲಿಲ್ಲ. ಆಗ ನಾಯಿ ರೂಪದ ಯಮನು ಪ್ರತ್ಯಕ್ಷನಾಗಿ, ಅವನ ನಡೆವಳಿಕೆಯನ್ನು ಮೆಚ್ಚಿಕೊಂಡು ನಿಜರೂಪ ತೋರಿಸಿ, ಅವನನ್ನು ಆಲಿಂಗಿಸಿ ಮುದ್ದಾಡುತ್ತಾನೆ. ಬಳಿಕ ಧರ್ಮರಾಯನು ಪುಷ್ಪಕವನ್ನೇರುತ್ತಾನೆ. ಪುಷ್ಪಕದಲ್ಲಿ ಆಕಾಶಮಾರ್ಗವಾಗಿ ಬರುತ್ತಿರಲು ಇಂದ್ರನು ಅವನಿಗೆ ಕೈಲಾಸ, ವೈಕುಂಠ, ಬ್ರಹ್ಮಲೋಕ, ಅಮರಾವತಿ, ಸಪ್ತ ಮುನಿಪುರಗಳನ್ನು ತೋರಿಸುತ್ತಾನೆ. ಅಂತೆಯೇ ಸ್ವರ್ಗಲೋಕದಲ್ಲಿರುವ ಪುಣ್ಯವಂತರಾದವರೆಲ್ಲರನ್ನೂ. ಪಾಪ ಮಾಡಿ ನರಕಲೋಕದಲ್ಲಿ ತೊಳಲಾಡುವ ಜೀವ ರಾಶಿಗಳನ್ನೂ ತೋರಿಸಿ ಅವರ ಕುರಿತು ವಿವರಿಸುತ್ತಾನೆ. ಹಿಂದೆ ಯುದ್ಧರಂಗದಲ್ಲಿ ಅಶ್ವತ್ಥಾಮನು ಸತ್ತುಹೋದನೆಂದು ಸುಳ್ಳು ಹೇಳಿದ ಕಾರಣಕ್ಕಾಗಿ ಧರ್ಮರಾಯನಿಗೆ ನರಕದರ್ಶನವಾಗುತ್ತದೆ. ಮುಂದೆ ದೇವೇಂದ್ರನು ದೊಡ್ಡ ನರಕದಲ್ಲಿ ಹೊರಳುತ್ತಿರುವ ಕೌರವನನ್ನು ತೋರಿಸಲು ಧರ್ಮರಾಯನು ಅವನನ್ನು ಮಾತನಾಡಿಸುತ್ತಾನೆ. "ಎಲ್ಲವೂ ವಿಧಿಲಿಖಿತ. ಅದನ್ನು ಮೀರಲು ಯಾರಿಗೂ ಸಾಧ್ಯವಿಲ್ಲ" ಎಂದು ಕೌರವನು ಹೇಳಲು "ನಾವು ಒಂದಾಗಿದ್ದು ಸ್ವರ್ಗಸುಖವನ್ನು ಸವಿಯೋಣ ಬಾ" ಎಂದು ಧರ್ಮರಾಯನು ಹೇಳುತ್ತಾನೆ. ಆಗ "ಭೀಮನೊಂದಿಗಿರುವ ಸ್ವರ್ಗಸುಖಕ್ಕಿಂತ ಈ ನರಕವೇ ಮೇಲೆಂದು" ಕೌರವನು ಹೇಳಲು, "ನೀನು ಬಾರದಿದ್ದರೆ ನನಗೂ ಸ್ವರ್ಗ ಸುಖ ಬೇಡ, ನೀನು ನಿನ್ನ ತಮ್ಮಂದಿರೊಂದಿಗೆ ಬಾ" ಎಂದು ಧರ್ಮರಾಯನು ಉತ್ತರಿಸುತ್ತಾನೆ. "ನಾನು ಬರುವುದಿಲ್ಲ. ನಮ್ಮೊಳಗೆ ಯಾವ ಗೆಳತನವೂ ಇಲ್ಲ. ನೀನೇ

ಸ್ವರ್ಗಕ್ಕೆ ಹೋಗು" ಎಂದು ಕೌರವನು ಹೇಳಲು ಅವನ ಮಾತಿಗೆ ಕೃಷ್ಣನು ಮೆಚ್ಚುತ್ತಾನೆ. "ಹರಿಶ್ಚಂದ್ರನಿಗಿಂತಲೂ ಮಿಗಿಲಾದ ಸತ್ಯವಂತ, ಧರ್ಮನಿಷ್ಠ ನೀನೇ. ನೀನು ಮಾಡಿದ ಸತ್ಯ ಸುಕೃತದಿಂದ ನಿನಗೆ ಮುಕ್ತಿರಾಜ್ಯ ಕೈಗೂಡುತ್ತದೆ. ಅಲ್ಲಿಗೆ ಹೋಗೋಣ" ಎಂದು ಪುಷ್ಪಕವನ್ನು ದೇವೇಂದ್ರನು ತಿರುಗಿಸಲು, ಧರ್ಮರಾಯನಿಗೆ ಕೃಷ್ಣನು ಇದಿರಾಗುತ್ತಾನೆ.

ಹನ್ನೊಂದನೆಯ ಸಂಧಿ: ಧರ್ಮರಾಯನೊಂದಿಗೆ ಕೌರವನಾಡಿದ ಮಾತುಗಳನ್ನು ಕೇಳಿದ ಕೃಷ್ಣನು ಧರ್ಮಜನಿಗೆ ಸಾಯುಜ್ಯ ಪದವಿಯನು ಕೊಡುತ್ತೇನೆಂದು ಅವನಿಗೆ ತನ್ನ ನಿಜರೂಪವನ್ನು ತೋರಿಸುತ್ತಾನೆ. ಹರಿಯ ನಿಜರೂಪವನ್ನು ಕಂಡು ಕಾಲಿಗೆರಗಿ "ನೀನೇ ರಕ್ಷಿಸಬೇಕು" ಎಂದು ಹೇಳುತ್ತಾ ಧರ್ಮಜನು ಪರಿಪರಿಯಾಗಿ ಸ್ತೋತ್ರ ಮಾಡುತ್ತಾನೆ. ತನ್ನನ್ನು ಕೊಂಡಾಡುತ್ತಾ ಪಾದಮೂಲದಲ್ಲಿ ಹೊರಳಾಡುತ್ತಿರುವ ಧರ್ಮರಾಯನನ್ನು ಹರಿ ಹಿಡಿದೆತ್ತಿ ಆಲಿಂಗಿಸಿ ಮುದ್ದಾಡುತ್ತಾನೆ. ಅವನಿಗೆ ವೈಕುಂಠ ಪದವಿಯನ್ನು ನೀಡುತ್ತಾನೆ. ಅಲ್ಲಿ ಧರ್ಮರಾಯನು ತನ್ನ ತಮ್ಮಂದಿರನ್ನೂ, ಮಡದಿ ದ್ರೌಪದಿ ಹಾಗೂ ತಾಯಿ ಕುಂತಿಯನ್ನೂ ಕಾಣುತ್ತಾನೆ. "ನೀನು ನಿನ್ನವರೆಲ್ಲರೊಂದಿಗೆ ಸಾಯುಜ್ಯವನ್ನು ಪಡೆದಿರುವೆ. ನಿನ್ನಂತಹ ಪುಣ್ಯಾತ್ಮರು ಬೇರಾರೂ ಇಲ್ಲ ನೀವೈವರೂ ನನ್ನ ಜೀವ, ನನ್ನ ಇಂದ್ರಿಯಗಳು. ನಿನ್ನ ಮಾತೇ ವೇದಸಮ್ಮತ" ಎಂದು ಧರ್ಮರಾಯನಿಗೆ ಹೇಳಿ ಅವರೆಲ್ಲರಿಗೂ ದಿವ್ಯದೇಹವನ್ನು ಕರುಣಿಸುತ್ತಾನೆ. ಆಗ ಅವರೆಲ್ಲರೂ ಅಮೃತಶರೀರಿಗಳಾಗಿ ಜಡದೇಹವನ್ನು ನೀಗಿ, ಭವಸಾಗರವನ್ನು ದಾಟಿ, ಜನನವನ್ನು ಗೆದ್ದು ಹರಿಯೊಂದಿಗೆ ವೈಕುಂಠವನ್ನು ಪ್ರವೇಶಿಸುತ್ತಾರೆ. ಅವರಿಗೆ ಸಾಯುಜ್ಯ ಪದವಿಯನ್ನು ಕೊಡಿಸುತ್ತೇನೆಂದು ಕೃಷ್ಣನು ಮನದಲ್ಲೇ ಯೋಚಿಸುತ್ತಾನೆ.

ಹನ್ನೆರಡನೆಯ ಸಂಧಿ: ಸಾಯುಜ್ಯ ಪದವಿಯನ್ನು ಕೊಡಿಸುವುದಕ್ಕಾಗಿ ಹರಿಯು ಪಾಂಡವರನ್ನು ಕೈಲಾಸಕ್ಕೆ ಶಿವನಲ್ಲಿಗೆ ಕರೆದುಕೊಂಡು ಹೋಗುತ್ತಾನೆ. ಪಾಂಡವರೊಂದಿಗೆ ಬಂದ ಹರಿಯನ್ನು ಹರನು ಮನ್ನಿಸುತ್ತಾನೆ. ಹರಿಹರರ ದಿವ್ಯ ಸ್ವರೂಪಗಳ ಮಿಲನವು ಅಪೂರ್ವ ಸೌಂದರ್ಯದಿಂದ ಕೂಡಿತ್ತು. ಹರಿಹರರಲ್ಲಿ ಭೇದವಿಲ್ಲ. ಅವರಿಬ್ಬರೂ ಒಂದೇ. ಹರಿಯ ಭಕ್ತರು ಹರನನ್ನು ನಿಂದಿಸಿದರೂ ಅವರಿಗೆ ನರಕ ಪ್ರಾಪ್ತಿಯಾಗುತ್ತದೆ. ಆದುದರಿಂದಲೇ ಹರಿಯು ಪಾಂಡವರಿಗೆ ಸಾಯುಜ್ಯ ಪದವಿಯನ್ನು ಕೊಡಿಸುವ ಸಲುವಾಗಿ ಅವರನ್ನು ಕೈಲಾಸಕ್ಕೊಯ್ದು ಶಿವನ ದರ್ಶನ ಮಾಡಿಸುತ್ತಾನೆ. ವೇದೋಪನಿಷತ್ತುಗಳ ಸಂಮೋಹ, ಪುರುಷಾರ್ಥಗಳು, ಶಿವಗಣಗಳ ಸಮೂಹ, ಅಪ್ಸರ ಸ್ತ್ರೀಯರು, ಸೂರ್ಯಚಂದ್ರಾದಿ ಗ್ರಹಗಳು, ವೀರಭದ್ರ, ಭೈರವ, ದಾರುಕ, ಧೇನುಕ, ಭೃಂಗೀನಾಥ, ನಂದೀಶ್ವರ, ಪ್ರಮಥರು, ನಾರದ ದೂರ್ವಾಸಾದಿ ಸಕಲ ಋಷಿಗಳು, ಗಂಧರ್ವ ತುಂಬುರಾದಿಗಳ ಗಾನ, ಭೃಂಗೀ ನಾಟ್ಯಗಳಿಂದ ಕೂಡಿ ಶಿವನಾಸ್ಥಾನವು ಮೆರೆದಿತ್ತು. ಶಿವನು ಹರಿಯನ್ನು ಕರೆದು ತನ್ನ

ಸಿಂಹಾಸನದಲ್ಲಿ ಕುಳ್ಳಿರಿಸಿ ಮನ್ನಿಸಿ ಕಾರ್ಯವೇನೆಂದು ಕೇಳುತ್ತಾನೆ. ಆಗ ಹರಿಯು "ನಿನ್ನ ದರ್ಶನಕ್ಕಾಗಿ ಸತ್ಯ, ಜ್ಞಾನ, ಧರ್ಮವನ್ನು ಬಿಡದೆ ಪಾಲಿಸಿದ ಪಾಂಡವರು ಬಂದಿದ್ದಾರೆ. ಅವರಿಗೆ ಸಾಯುಜ್ಯ ಪದವಿಯನ್ನು ಕರುಣಿಸೆ"ಂದು ಹೇಳಲು ಪಾಂಡವರು ಹರನ ಚರಣಕ್ಕೆರಗಿ ತಮ್ಮನ್ನು ರಕ್ಷಿಸಬೇಕೆಂದು ಯಾಚಿಸಿ ಶಿವನ ಸ್ತೋತ್ರ ಮಾಡುತ್ತಾರೆ. ಶಿವನು ಪಾಂಡವರನ್ನು ತನ್ನ ಬಳಿಗೆ ಕರೆದು ಮೈದಡವಿ ಅವರಿಗೆ ಅಮರಪದವಿಯನ್ನು ಕರುಣಿಸುತ್ತಾನೆ. ಅರ್ಜುನನು ಸುಖವನ್ನು ಬಯಸಿ ವರವನ್ನು ಬೇಡಲು, "ನೀನು ಭೋಜನಾಗು" ಎಂದು ಶಿವನು ವರ ನೀಡುತ್ತಾನೆ. "ನರಕದಲ್ಲಿರುವ ಕೌರವ ಹಾಗೂ ಅವನ ತಮ್ಮಂದಿರ ಮೇಲೆ ಕರುಣೆ ತೋರಬೇಕು" ಎಂದು ಧರ್ಮಜನು ಹರಿಹರರನ್ನು ಕೇಳಿಕೊಳ್ಳುತ್ತಾನೆ. ಯಮನು ಚಿತ್ರಗುಪ್ತರನ್ನು ಕರೆಸಿ ಕೇಳಿದಾಗ ಕೌರವನಿಗೆ ಸ್ವರ್ಗದ ಭೋಗವಿರುವುದು ಮೂರೇ ದಿನವೆಂದು ತಿಳಿಯುತ್ತದೆ. ಕೌರವರೆಲ್ಲರನ್ನೂ ಶಿವಪುರಕ್ಕೆ ಶಿವನು ಬರಮಾಡಿಸಿ ಮೂರು ದಿನ ದೇವಲೋಕದಲ್ಲಿರಿಯೆಂದು ಆಜ್ಞೆ ಮಾಡಿ ಅವರಿಗೆ ಸ್ವರ್ಗ ಭೋಗವನ್ನು ಕರುಣಿಸುತ್ತಾನೆ. ಕೃಷ್ಣನ ಆಜ್ಞೆಯಂತೆ ಕರ್ಣನನ್ನು ಶಿವನ ಆಸ್ಥಾನಕ್ಕೆ ಕರೆತರುತ್ತಾರೆ. ಕರ್ಣನು ಶಿವನಿಗೆರಗಿ ರಕ್ಷಿಸೆಂದು ಕೇಳಿಕೊಳ್ಳುತ್ತಾನೆ. ಆಗ ಅವನನ್ನು ಹಿಡಿದೆತ್ತಿ ಬೇಕಾದ ವರವನ್ನು ಬೇಡೆಂದು ಶಿವನು ಹೇಳಲು "ಅನ್ನದಾನವ ಕರುಣಿಸು" ಎಂದು ಕರ್ಣನು ಕೇಳಿಕೊಳ್ಳುತ್ತಾನೆ. ಶಿವನು ಆ ವರವನ್ನಿತ್ತು ಕರ್ಣನನ್ನು ಕಳುಹಿಸುತ್ತಾನೆ. ಬಳಿಕ ಭೀಷ್ಮ, ದ್ರೋಣ, ಭೂರಿಶ್ರವ, ಸೈಂಧವ, ಅವನ ತಂದೆ, ವಿದುರ, ಧೃತರಾಷ್ಟ್ರ, ಕುಂತಿ, ದ್ರೌಪದಿ, ಅಭಿಮನ್ಯು ಎಲ್ಲರಿಗೂ ಸಾಯುಜ್ಯ ಪದವಿಯನ್ನು ಶಿವನು ಕರುಣಿಸುತ್ತಾನೆ. ಧರ್ಮರಾಯನಿಗೆ ಮಣಿಮಯದ ಮಾಡವನ್ನೂ, ಭೀಮನಿಗೆ ಬಂಗಾರದ ಮನೆಯನ್ನೂ. ಅರ್ಜುನನಿಗೆ ಭೋಜನಾಗೆಂದೂ, ನಕುಲ ಸಹದೇವರಿಗೆ ಧರ್ಮಪದ ಸಿದ್ಧಿಯನ್ನೂ ಹರನು ಕರುಣಿಸಿ ಅವರನ್ನೂ ಕೃಷ್ಣನನ್ನೂ ಓಲಗದಿಂದ ಕಳುಹಿಸಿಕೊಡುತ್ತಾನೆ.

ಹದಿಮೂರನೆಯ ಸಂಧಿ: ಶಿವನ ಮೂಲಕ ಅಭಿಮನ್ಯುವಿಗೆ ಪರಮ ಪದವಿಯನ್ನು ಕೊಡಿಸಿದ ಕೃಷ್ಣನು ಪಾಂಡವರನ್ನು ಇಹಪರ ಎರಡರಲ್ಲೂ ಕಾಪಾಡುತ್ತಾನೆ. ಬಳಿಕ ಕೃಷ್ಣನು ಪಾಂಡವರನ್ನು ತನ್ನಳಿಯನಾದ ಅಭಿಮನ್ಯುವಿನಲ್ಲಿಗೆ ತನ್ನ ಮಗಳನ್ನು ಕರೆತರುತ್ತಾನೆ. ಅವಳು ಅಭಿಮನ್ಯುವಿನ ಮುಖವನ್ನು ನೋಡುತ್ತಾಳೆ. ಅವನ ದರ್ಶನದಿಂದ ಆಕೆ ವೃಷ್ಟಿಗರ್ಭವನ್ನು ಧರಿಸಿ ಹಿಂತಿರುಗಿ ಬರುವ ಮಗಳನ್ನು ಕೃಷ್ಣನು ಕಂಡು ಆಕೆಗೆ ಹುಟ್ಟುವ ಮಕ್ಕಳೇ ತನಗೆ ವೈರಿಗಳಾಗುವರೆಂಬುದನ್ನು ಅರಿತು ಆ ಗರ್ಭವನ್ನೇ ನಾಶಪಡಿಸಬೇಕೆಂದು ಯೋಚಿಸುತ್ತಾನೆ. ಅದಕ್ಕಾಗಿ ಆತನು ತನ್ನ ಮಗಳನ್ನು ಕರೆದು "ಕೊಳದಲ್ಲಿ ಮುಳುಗಿ ಸ್ನಾನಮಾಡಿ ದೇವರಿಗೆ ವಂದಿಸಿ ಬಾ" ಎನ್ನುತ್ತಾನೆ. ಆಕೆ ತಂದೆಯ ಮಾತಿನಂತೆ ಕೊಳದಲ್ಲಿ ಮುಳುಗಲು ಆಕೆಯ ಗರ್ಭಸ್ರಾವವಾಗುತ್ತದೆ. ಬಳಿಕ ಆಕೆಯನ್ನು ಮನೆಗೆ ಕಳುಹಿಸಿ ಕೃಷ್ಣನು ಆ ಕೊಳದ

ಬಳಿಗೆ ಬರುತ್ತಾನೆ. ಉತ್ತರೆಯ ಗರ್ಭಸ್ರಾವದಿಂದ ಹುಟ್ಟಿದ ಮಕ್ಕಳು ಅಲ್ಲಿ ಕೃಷ್ಣನನ್ನು ತಡೆಯುತ್ತಾರೆ. ಆಗ ಕೃಷ್ಣನು "ನೀವು ಯಾರ ಮಕ್ಕಳು? ನಿಮ್ಮ ತಂದೆ ತಾಯಿ ಯಾರು? ನೀವು ನೀರಿನಲ್ಲಿರಲು ಕಾರಣವೇನು?" ಎಂದು ಅವರನ್ನು ಕೇಳುತ್ತಾನೆ. ಅವರು "ನಮ್ಮ ತಂದೆ ಅಭಿಮನ್ಯು. ತಾಯಿ ಕೃಷ್ಣನ ಮಗಳು. ತಾಯಿಗೆ ದೃಷ್ಟಿಗರ್ಭವಾಗಲು ಕೃಷ್ಣನು ಹೇಳಿದಂತೆ ಆಕೆ ಈ ಕೊಳದಲ್ಲಿ ಮುಳುಗಿದಳು. ಆದರಿಂದ ಆಕೆಗೆ ಗರ್ಭಸ್ರಾವವಾಗಲು ನಾವು ಹುಟ್ಟಿದೆವು" ಎನ್ನುತ್ತಾರೆ. ಇದನ್ನರಿತ ಕೃಷ್ಣನು ನೀಡಿದ ಆದೇಶದಂತೆ ಅವರು ಭೂಮಿಯ ಮೇಲೆ ಎಲ್ಲರನ್ನೂ ಕಾಡಿ ಉಂಡು ಝುಕ್ಕಿಯರಾಗಿ ಜನಿಸಿ ಕೃಷ್ಣನನ್ನು ಹರಸುತ್ತಾ ಇರುತ್ತಾರೆ. ಆ ಕಡೆಯಲ್ಲಿ ಪಾಂಡವರು ದಿನದಿಂದ ದಿನಕ್ಕೆ ಉತ್ತರೋತ್ತರವಾದ ಪದವಿಗಳನ್ನು ಹೊಂದುತ್ತಾರೆ. ಅವರ ಆಪ್ತಮಿತ್ರರೆಲ್ಲರಿಗೂ ಪರಮ ಪದವಿ ದೊರಕುತ್ತದೆ.

ಈ ಸಂಧಿಯ ಕೊನೆಯಲ್ಲಿ ಕವಿ ಕುಮಾರವ್ಯಾಸನನ್ನು ನೆನೆಯುತ್ತ ಸ್ವರ್ಗಾರೋಹಣದ ಕಥೆಯನ್ನು ವೇದವ್ಯಾಸನ ಕಥೆಯನ್ನು ಅನುಸರಿಸಿ ಬರೆದಿದೆ ಎಂದು ಹೇಳಿ ಫಲಶ್ರುತಿಯೊಂದಿಗೆ ಕಥೆಯನ್ನು ಮುಗಿಸಿದ್ದಾನೆ.

ಹದಿನಾಲ್ಕನೆಯ ಸಂಧಿ: ಈ ಸಂಧಿಯಲ್ಲಿ ಹದಿನೆಂಟು ಪದ್ಯಗಳಿವೆ. ಇವುಗಳಲ್ಲಿ ಕವಿ ಮಹಾಭಾರತದ ಹದಿನೆಂಟು ಪರ್ವಗಳ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿದ್ದಾನೆ. ಇದು ಈ ಕಾವ್ಯದ ವೈಶಿಷ್ಟ್ಯ.

ಸೂತಭಾರತದಲ್ಲಿ ಕವಿ ಮಾಡಿಕೊಂಡ ಮಾರ್ಪಾಟುಗಳು

1. ಕಲ್ಕಿಯ ಅವತಾರದಿಂದ ರಾಜ್ಯದಲ್ಲಿ ಏನೇನು ಸಂಭವಿಸಿತೆಂಬ ವಿಚಾರ ಸೂತ ಭಾರತದಲ್ಲಿ ದೀರ್ಘವಾಗಿದೆ. ಅಲ್ಲದೆ ಆ ವಿಚಾರವನ್ನು ಧರ್ಮರಾಯನಿಗೆ ತಿಳಿಸುವವರು ಬೇಹುಗಾರರು. ಮಹಾಭಾರತದಲ್ಲಿ ಕಲಿಯ ಆಗಮನವನ್ನು ತಿಳಿಸುವವನು ಸಹದೇವ.

2. ಕೃಷ್ಣಾವಸಾನ ಹಾಗೂ ಕಲಿಯುಗದ ಆಗಮನದಿಂದಾಗಿ ಧರ್ಮರಾಯನು ದುಃಖಿತನಾಗಿದ್ದಾಗ ವೇದವ್ಯಾಸರು ಬರುತ್ತಾರೆ. ಧರ್ಮರಾಯನು ರಾಜ್ಯವನ್ನಾಳಲು ತನ್ನಿಂದ ಸಾಧ್ಯವಿಲ್ಲವೆಂದೂ ಪರೀಕ್ಷಿತನಿಗೆ ರಾಜ್ಯದ ಪಟ್ಟ ಕಟ್ಟಬೇಕೆಂದೂ ಅವರಲ್ಲಿ ಕೇಳಿಕೊಳ್ಳುತ್ತಾನೆ. ಈ ಸನ್ನಿವೇಶ ಮೂಲ ಭಾರತದಲ್ಲಿಲ್ಲ.

3. ಇಂದ್ರಪ್ರಸ್ಥದಲ್ಲಿ ಯಾದವ ಕುಲಹರಸರಾದ ವಜ್ರನು ರಾಜನಾಗಿದ್ದನೆಂದು ಮಹಾಭಾರತದಲ್ಲಿ ಹೇಳಿದೆ. ಸೂತಭಾರತದಲ್ಲಿ ಈ ವಿಚಾರವಿಲ್ಲ.

4. ಪರೀಕ್ಷಿತ ರಾಜನ ಪಟ್ಟಾಭಿಷೇಕೋತ್ಸವದ ವಿವರಣೆ ಸೂತಭಾರತದಲ್ಲಿ ಇದೆ; ಮಹಾಭಾರತದಲ್ಲಿ ಈ ವಿವರಣೆಯಿಲ್ಲ.

5. ಧರ್ಮರಾಯನು ಪರೀಕ್ಷಿತ ರಾಜನನ್ನು ಮಂತ್ರಿಗಳ ಹಾಗೂ ಪ್ರಜೆಗಳ ಕೈಗೆ ಒಪ್ಪಿಸಿಕೊಡುವ ಪ್ರಸಂಗ ಸೂತಭಾರತದಲ್ಲಿ ಇದೆ. ಮೂಲ ಭಾರತದಲ್ಲಿಲ್ಲ.

6. ವ್ಯಾಸಭಾರತದಲ್ಲಿ ಧರ್ಮರಾಯನು ತಮ್ಮಂದಿರೊಡನೆ ವಾಸುದೇವ, ಮಾತುಲ, ಬಲರಾಮ ಮೊದಲಾದವರಿಗೆ ಜಲತರ್ಪಣ ಬಿಟ್ಟು ಶ್ರಾದ್ಧ ಮಾಡುತ್ತಾನೆ. ಕೃಷ್ಣನನ್ನು ಕರೆದು ಆಸನದಲ್ಲಿ ಕುಳ್ಳಿರಿಸಿ ಮರ್ಯಾದೆ ಮಾಡಿ ಪರೀಕ್ಷಿತನನ್ನು ಅವನಿಗೆ ಶಿಷ್ಯನನ್ನಾಗಿ ಮಾಡುತ್ತಾನೆ. ಈ ವಿಚಾರ ಸೂತಭಾರತದಲ್ಲಿಲ್ಲ.

7. ಸ್ವರ್ಗಕ್ಕೆ ಹೊರಡುವ ಸಮಯದಲ್ಲಿ ಧರ್ಮರಾಯನು ಸುಭದ್ರೆಯನ್ನು ಕರೆದು ಮೊಮ್ಮಗನ ರಕ್ಷಣೆ ಮಾಡುವಂತೆ ಹೇಳಿ ಸಂತೈಸುತ್ತಾನೆ. ಈ ವಿಚಾರ ಮೂಲ ಕಥೆಯಲ್ಲಿ ಇಲ್ಲ.

8. ಸೂತಭಾರತದಲ್ಲಿ ಪಾಂಡವರೊಡನೆ ಕುಂತಿಯೂ ಸ್ವರ್ಗಕ್ಕೆ ಹೊರಡುತ್ತಾಳೆ. ಮೂಲದಲ್ಲಿ ಕುಂತಿಯು ಮೊದಲೇ ಮರಣ ಹೊಂದಿದ್ದು ಯುಧಿಷ್ಠಿರನು ಅವಳ ಉತ್ತರಕ್ರಿಯೆಯನ್ನು ಮಾಡಿರುತ್ತಾನೆ. ಪಾಂಡವರು ಹೊರಡುವಾಗ ಪುರ ಜನರೂ ಪರಿಜನರೂ ದುಃಖಿಸುವ ಸನ್ನಿವೇಶ ಸೂತಭಾರತದಲ್ಲಿ ದೀರ್ಘವಾಗಿ ಬಂದಿದೆ

9. ಪರೀಕ್ಷಿತನಿಗೆ ಧರ್ಮರಾಯನು ರಾಜನೀತಿಯನ್ನೂ ಅವನ ತಮ್ಮಂದಿರು ನಾನಾ ವಿಧದ ತತ್ವಗಳನ್ನೂ, ನೀತಿಗಳನ್ನೂ ಬೋಧಿಸುತ್ತಾರೆ. ಇದು ಮೂಲ ಭಾರತದಲ್ಲಿಲ್ಲ.

10. ಪಾಂಡವರ ಅಗಲುವಿಕೆಯಿಂದ ಪರೀಕ್ಷಿತನಿಗಾದ ಶೋಕದ ಸನ್ನಿವೇಶ ರಾಣಿಯರಿಗೆ ಹಾಗೂ ಪುರಸ್ತ್ರೀಯರಿಗಾದ ಶೋಕದ ಚಿತ್ರಣ ಸೂತಭಾರತದಲ್ಲಿ ದೀರ್ಘವಾಗಿದೆ. ಆಗ ವೇದವ್ಯಾಸರು ಬಂದು ಪರೀಕ್ಷಿತನ ದುಗುಡವನ್ನು ಪರಿಹರಿಸಿ, ಪಾಂಡವರ ಹಾಗೂ ದ್ರೌಪದಿಯ ಪೂರ್ವಕಥೆಯನ್ನು ಹೇಳುತ್ತಾರೆ. ಅವಳ ಪಂಚಪತಿತ್ವಕ್ಕೆ ಸಂಬಂಧಪಟ್ಟ ಈ ಪೂರ್ವಕಥೆ ವ್ಯಾಸಭಾರತದಲ್ಲಿ ಇಲ್ಲ.

11. ಪರೀಕ್ಷಿತ್ತಿಗೆ ವ್ಯಾಸರ ಮಾತಿನಂತೆ ಧೌಮ್ಯರು ನೀತಿ ಬೋಧಿಸುವ ಪ್ರಸಂಗ ಮೂಲದಲ್ಲಿಲ್ಲ.

12. ಉಲೂಪಿ ಗಂಗಾಪ್ರವೇಶ ಮಾಡುವ, ಚಿತ್ರಾಂಗದೆ ಮಣಲೂರಿಗೆ ಹೋಗುವ ವಿಚಾರ ಮೂಲದಲ್ಲಿದೆ ; ಸೂತಭಾರತದಲ್ಲಿಲ್ಲ.

13. ಪಾಂಡವರು ಹೊರಡುವಾಗಲೇ ಅವರನ್ನು ನಾಯಿಯೊಂದು ಹಿಂಬಾಲಿಸಿತೆಂದು ಮೂಲ ಭಾರತದಲ್ಲಿ ಹೇಳಲಾಗಿದೆ. ಸೂತಭಾರತದಲ್ಲಿ ಧರ್ಮರಾಯನು ತನ್ನ ತಾಯಿ, ಮಡದಿ ಹಾಗೂ ತಮ್ಮಂದಿರನ್ನು ಕಳಕೊಂಡು ಮುಂದೆಹೋಗುವಾಗ ಯಮಧರ್ಮನು ನಾಯಿಯ ರೂಪ ಧರಿಸಿ ಅವನನ್ನು ಹಿಂಬಾಲಿಸುತ್ತಾನೆ.

14. ಮೂಲದಲ್ಲಿ ಅಗ್ನಿ ಪ್ರತ್ಯಕ್ಷನಾಗಿ ಅರ್ಜುನನಲ್ಲಿದ್ದ ದಿವ್ಯಧನುಸ್ಸು ಹಾಗೂ ಬತ್ತಳಿಕೆಗಳನ್ನು ಪಡೆದು ನೀರಿನಲ್ಲೆಸೆದು ಮರೆಯಾಗುತ್ತಾನೆ. ಸೂತಭಾರತದಲ್ಲಿ ಈ ಸನ್ನಿವೇಶ ಇಲ್ಲ.

15. ಪಾಂಡವರು ಬೇಡರ ಪಡೆಯಲ್ಲಿ ಸಿಕ್ಕಿಹಾಕಿಕೊಳ್ಳುವುದು, ಕಿರಾತರ ಕೈಯಲ್ಲಿ ಸಿಕ್ಕಿದ ದ್ರೌಪದಿ ಶಿವನಲ್ಲಿ ಹಾಗೂ ಕೃಷ್ಣನಲ್ಲಿ ಮೊರೆಯಿಡುವುದು, ದೈವಾನುಗ್ರಹದಿಂದ ಅವಳು ಕಷ್ಟದಿಂದ ಪಾರಾಗುವುದು, ಮೊದಲಾದ ಸನ್ನಿವೇಶಗಳು ಮೂಲದಲ್ಲಿಲ್ಲ.

16. ಕಾಡಿನ ಮಧ್ಯ ಕಾಳ್ಗಿಚ್ಚು ಕಾಣಿಸಿಕೊಂಡು ಪಾಂಡವರನ್ನು ತೊಂದರೆಗೀಡು ಮಾಡುವ ಹಾಗೂ ಅಗ್ನಿಪುತ್ರಿಯಾದ ದ್ರೌಪದಿ ಬೆಂಕಿಯನ್ನು ಪ್ರವೇಶಿಸಲು ಆ ಕೃತಕಾಗ್ನಿ ಮಾಯವಾಗುವ ಸನ್ನಿವೇಶ ಸೂತಭಾರತದಲ್ಲಿದೆ. ಮೂಲದಲ್ಲಿ ಇಲ್ಲ.

17. ಪಾಂಡವರು ಕಾಡಿನಲ್ಲಿ ಮುಂದುವರಿಯುತ್ತಿದ್ದಾಗ ಬ್ರಹ್ಮನ ಶಾಪದಿಂದ ದಾನವನಾಗಿ ಜನಿಸಿದ ಒಬ್ಬನು ಭೂಮಿಯ ಉದ್ದಕ್ಕೂ ಮಲಗಿರುತ್ತಾನೆ. ಭೀಮನು ಅವನನ್ನು ಸೋಲಿಸಲು ಅವನ ಶಾಪವಿಮೋಚನೆಯಾಗುತ್ತದೆ. ಇದು ಮೂಲದಲ್ಲಿಲ್ಲ.

18. ಹಿಮದ ಪ್ರಭಾವಕ್ಕೊಳಗಾಗಿ ದ್ರೌಪದಿ ಬಿದ್ದಾಗ ಭೀಮನು ಅದರ ಕಾರಣವನ್ನು ಅಣ್ಣನಲ್ಲಿ ಕೇಳುತ್ತಾನೆ. ಅರ್ಜುನನಲ್ಲಿ ಹೆಚ್ಚು ಪಕ್ಷಪಾತವಿದ್ದುದರ ಫಲದಿಂದ ಅವಳಿಗೆ ಹಾಗಾಯಿತೆಂದು ವ್ಯಾಸಭಾರತದಲ್ಲಿದೆ. ಆದರೆ ಸೂತಭಾರತದಲ್ಲಿ ದ್ರೌಪದಿಗೆ ಕರ್ಣನಲ್ಲಿ ಮನಸ್ಸಿದ್ದುದರಿಂದ ಸ್ವರ್ಗದಲ್ಲಿ ಅವಳಿಗೆ ಸ್ಥಾನವಿಲ್ಲವೆಂದು ಹೇಳಲಾಗಿದೆ.

19. ಸೂತಭಾರತದಲ್ಲಿ ಪಾಂಡವರು ಸ್ವರ್ಗಾರೋಹಣ ಮಾಡುತ್ತಿದ್ದಾಗ ಮೊದಲು ದ್ರೌಪದಿ, ಬಳಿಕ ಕುಂತಿ, ಆಮೇಲೆ ಕ್ರಮವಾಗಿ ನಕುಲ ಸಹದೇವರು ಬೀಳುತ್ತಾರೆ. ಮೂಲದಲ್ಲಿ ದ್ರೌಪದಿಯ ಅನಂತರ ಕ್ರಮವಾಗಿ ಸಹದೇವ ನಕುಲರು ಬೀಳುತ್ತಾರೆ. ಅಲ್ಲದೆ ಮೂಲದಲ್ಲಿ ಕುಂತಿಯ ವಿಚಾರವಿಲ್ಲ.

20. ಸೂತಭಾರತದಲ್ಲಿ ಕುಂತಿ ಕನ್ಯೆಯಾಗಿದ್ದಾಗ ಸೂರ್ಯಮಂತ್ರದಿಂದ ಪಡೆದ ಕರ್ಣನನ್ನು ಗಂಗೆಗೆ ಎಸೆದುದರ ಫಲದಿಂದ ದಾರಿಯಲ್ಲಿ ಬಿದ್ದು ಮರಣ ಹೊಂದುತ್ತಾಳೆಂದು ಧರ್ಮರಾಯ ಹೇಳುತ್ತಾನೆ. ಮೂಲದ ಪ್ರಕಾರ ಕುಂತಿ ಪಾಂಡವರೊಂದಿಗೆ ಪ್ರಸ್ಥಾನ ಮಾಡುವುದೇ ಇಲ್ಲ.

21. ತನಗೆ ಸಮಾನರಾದ ಪಂಡಿತರು ಬೇರೆ ಯಾರೂ ಇಲ್ಲ ಎಂಬ ಗರ್ವವೇ ಸಹದೇವನ ಮರಣಕ್ಕೆ ಕಾರಣವೆಂದು ವ್ಯಾಸಭಾರತದಲ್ಲಿ ಹೇಳಿದೆ. ಬಂಧುಗಳ ವಧೆ ಮಹಾಪಾತಕವೆಂಬುದು ಭವಿಷ್ಯವನ್ನು ಅರಿತ ಅವನಿಗೆ ಮೊದಲೇ ತಿಳಿದಿದ್ದರೂ ಅದನ್ನು ಅಣ್ಣಂದಿರಿಗೆ ತಿಳಿಸದಿದ್ದುದರಿಂದ ಅವನಿಗೆ ಹಾಗಾಯಿತೆಂದು ಸೂತಭಾರತದಲ್ಲಿ ಹೇಳಿದೆ.

22. ಮಹಾಭಾರತದಲ್ಲಿ ನಕುಲನು ದಾರಿಯಲ್ಲಿ ಬೀಳುವುದಕ್ಕೆ ಆತನಿಗೆ ಲೋಕದೊಳಗೆಲ್ಲ ತಾನೇ ಸುಂದರನು. ತನಗೆ ಸಮಾನರಾದವರು ಯಾರೂ ಇಲ್ಲ ಎಂಬ

ಅಹಂಕಾರವಿದ್ದುದೇ ಕಾರಣವೆಂದು ಧರ್ಮರಾಯನು ಹೇಳುತ್ತಾನೆ. ಸೂತಭಾರತ ದಲ್ಲಿ ನಕುಲನು ಬೀಳುವುದಕ್ಕೆ ಕಾರಣವನ್ನೇ ಹೇಳಿಲ್ಲ.

23. ಮೂಲಭಾರತದಲ್ಲಿ ಪ್ರತಿಯೊಬ್ಬರು ದಾರಿಯಲ್ಲಿ ಬಿದ್ದಾಗಲೂ ಅವರು ಬೀಳುವುದಕ್ಕೆ ಕಾರಣವೇನೆಂದು ಭೀಮಸೇನನು ಕೇಳುತ್ತಾನೆ. ಸೂತಭಾರತದಲ್ಲಿ ಭೀಮ ಕೇಳುವುದಿಲ್ಲ. ಧರ್ಮರಾಯ ತಾನಾಗಿಯೇ ಹೇಳುತ್ತಾನೆ.

24. ಅರ್ಜುನನು ಬೀಳುವುದಕ್ಕೆ ಆತನಿಗಿದ್ದ ಮಹಾಶೂರನೆಂಬ ಗರ್ವ ಮತ್ತು ಧನುರ್ಧಾರಿಗಳನ್ನು ಅವನು ಅವಮಾನಪಡಿಸಿದುದೇ ಕಾರಣವೆಂದು ಮೂಲ ಭಾರತದಲ್ಲಿ ಹೇಳಿದೆ. ಸೂತಭಾರತದಲ್ಲಿ ಆತನು ಬಂಧುಗಳನ್ನೂ ಹಿರಿಯರನ್ನೂ ಕೊಂದ ಗೋತ್ರಘಾತಕನೂ, ದುರಾತ್ಮಕನೂ ಆದುದರಿಂದ ಅವನು ದಾರಿಯಲ್ಲಿ ಬಿದ್ದು ಮರಣ ಹೊಂದುತ್ತಾನೆಂದೂ, ಅರ್ಜುನನು ಬಿದ್ದಾಗ ಭೀಮನು ಅವನನ್ನು ಒಂದು ಯೋಜನದವರೆಗೆ ಹೊತ್ತು ತರುತ್ತಾನೆಂದೂ ಹೇಳಿದೆ.

25. ಭೀಮನು ಬೀಳುವುದಕ್ಕೆ ಅವನು ಅಮಿತ ಭೋಜಿಯಾಗಿರುವುದೂ, ಆತ್ಮಸ್ತುತಿ ಮಾಡಿಕೊಂಡುದೂ ಕಾರಣವೆಂದು ಮೂಲದಲ್ಲಿ ಧರ್ಮರಾಯನು ಹೇಳು ತ್ತಾನೆ. ಸೂತಭಾರತದಲ್ಲಿ ಭೀಮನು ಬಿದ್ದುದಕ್ಕೆ ಕಾರಣ ಹೇಳಿಲ್ಲ. ಧರ್ಮರಾಯನು ಭೀಮನ ಗುಣಗಾನ ಮಾಡಿ ಗೋಳಿಡುತ್ತಾನೆ. ಕೃಷ್ಣನು ವೇಷ ಮರೆಸಿ ಅಶರೀರ ವಾಣಿಯ ಮೂಲಕ ಧರ್ಮರಾಯನಿಗೆ ನೀತಿ ತತ್ವಗಳನ್ನು ಬೋಧಿಸುತ್ತಾನೆ. ಧರ್ಮರಾಯನು ಭೀಮನ ಹೆಣವನ್ನು ಹೊತ್ತುಕೊಂಡು ಹೋಗುವಾಗ ಕೃಷ್ಣನು ವೃದ್ಧ ವಿಪ್ರನಾಗಿ ಬಂದು ಸತ್ತ ಮರಕ್ಕೆ ನೀರೆರೆಯುವುದರ ಮೂಲಕ ಭೀಮನ ಹೆಣ ವನ್ನು ಹೊರುವುದರಿಂದ ಪ್ರಯೋಜನವಿಲ್ಲವೆಂದು ತಿಳಿಸಲು ಧರ್ಮರಾಯನು ಆ ಹೆಣ ವನ್ನು ತೊರೆದು ಮುಂದೆ ಹೋಗುತ್ತಾನೆ. ಈ ವಿಚಾರಗಳು ಮೂಲದಲ್ಲಿಲ್ಲ.

26. ಧರ್ಮರಾಯನು ಮುಂದೆ ಹೋಗುತ್ತಿರಲು ಎದುರಾದ ವೈತರಣಿಯನ್ನು ದಾಟುವುದು ಹೇಗೆಂದು ಚಿಂತಿಸುತ್ತಾನೆ. ಆಗ ಕೃಷ್ಣನು ಧರ್ಮರಾಯನನ್ನು ಸ್ವರ್ಗಕ್ಕೆ ಕರೆದೊಯ್ಯಲು ಪುಷ್ಪಕವನ್ನು ಕಳುಹಿಸುತ್ತಾನೆ. ಸೂತಭಾರತದಲ್ಲಿರುವ ಈ ಸಂಗತಿ ಮೂಲದಲ್ಲಿ ಇಲ್ಲ.

27. ಧರ್ಮರಾಯನು ವೈತರಣಿಯಲ್ಲಿ ಮುಳುಗುತ್ತಾನೆ, ಆಗ ದೇವೇಂದ್ರನು ಅಮೃತದ ಮಳೆಗರೆಯಲು ಅವನು ದಿವ್ಯತನುವನ್ನು ಪಡೆಯುತ್ತಾನೆ. ಇದೂ ಹೊಸ ಸನ್ನಿವೇಶ.

28. ಮೂಲಕಥೆಯಲ್ಲಿ ಇಂದ್ರನು ಧರ್ಮರಾಯನನ್ನು ಸ್ವರ್ಗಕ್ಕೆ ಕರೆ ದೊಯ್ಯಲು ಬಂದಾಗ ತನ್ನ ಸಹೋದರರೂ ಮಡದಿ ದ್ರೌಪದಿಯೂ ತನ್ನೊಡನೆ ಬರಬೇಕೆನ್ನುತ್ತಾನೆ. ಸೂತಭಾರತದಲ್ಲಿ ಧರ್ಮರಾಯನು ಹಾಗೆ ಹೇಳುವುದಿಲ್ಲ.

29. ಮೂಲಕಥೆಯಲ್ಲಿ ನಾಯಿಯ ರೂಪದಲ್ಲಿ ಬಂದ ಯಮನು ಪ್ರತ್ಯಕ್ಷನಾಗಿ

ಧರ್ಮರಾಯನನ್ನು ಹೊಗಳಿ ಹಿತವಾಕ್ಯಗಳನ್ನು ಹೇಳುತ್ತಾನೆ. ಸೂತಭಾರತದಲ್ಲಿ ಈ ಅಂಶವಿಲ್ಲ.

30. ಮೂಲದಲ್ಲಿ ಧರ್ಮರಾಯನು ದಿವ್ಯರಥದಲ್ಲಿ ಕುಳಿತು ಅಂತರಿಕ್ಷದಲ್ಲಿ ಹೋಗುವಾಗ ನಾರದನು 'ಸಶರೀರಿಯಾಗಿ ನಿನ್ನಂತೆ ದೇವಲೋಕಕ್ಕೆ ಯಾರೂ ಬಂದವರಿಲ್ಲ' ಎಂದು ಹೇಳಿ ಅವನನ್ನು ಹೊಗಳುತ್ತಾನೆ. ಸೂತಭಾರತದಲ್ಲಿ ಈ ಸನ್ನಿವೇಶವಿಲ್ಲ.

31. ಸೂತಭಾರತದ ಪ್ರಕಾರ ಧರ್ಮರಾಯನು ಮೊದಲು ನರಕವಾಸಿಯಾದ ದುರ್ಯೋಧನನನ್ನು ನೋಡಿ ಬಾ. ನಾವು ಒಟ್ಟಿಗೇ ಸ್ವರ್ಗ ಸುಖವನ್ನು ಸವಿಯೋಣ ಎಂದಾಗ ಕೌರವನು ಭೀಮನೊಂದಿಗಿರುವ ಸ್ವರ್ಗಸುಖಕ್ಕಿಂತ ನರಕವೇ ತನಗೆ ಮೇಲೆಂದೂ, ತಾನು ಬರುವುದಿಲ್ಲವೆಂದೂ ಹೇಳುತ್ತಾನೆ. ಆದರೆ ಮೂಲದಲ್ಲಿ ಧರ್ಮರಾಯನು ಸ್ವರ್ಗದಲ್ಲಿರುವ ಕೌರವನನ್ನು ನೋಡಿ ಆತನಿರುವಲ್ಲಿ ತಾನಿರುವುದಿಲ್ಲವೆಂದು ಹೇಳಿದಾಗ ನಾರದನು ಅವನಿಗೆ ಧರ್ಮಬೋಧೆ ಮಾಡುತ್ತಾನೆ.

32. ಮೂಲದಲ್ಲಿ ಧರ್ಮರಾಯನು ತನ್ನ ತಮ್ಮಂದಿರೂ ದ್ರೌಪದಿಯೂ ಕರ್ಣನೂ ಇರುವಲ್ಲಿ ತಾನಿರುತ್ತೇನೆ. ಅವರೆಲ್ಲಿ? ಎಂದು ಕೇಳುತ್ತಾನೆ. ದೇವದೂತರು ಅವನಿಗೆ ನರಕದರ್ಶನ ಮಾಡಿಸುತ್ತಾರೆ. ಈ ವಿಚಾರ ಸೂತಭಾರತದಲ್ಲಿಲ್ಲ.

33. ಸೂತಭಾರತದಲ್ಲಿ ಧರ್ಮರಾಯನೊಂದಿಗೆ ಕೌರವನು ಆಡಿದ ಮಾತನ್ನು ಕೇಳಿದ ಕೃಷ್ಣನು ಧರ್ಮಜನಿಗೆ ನಿಜರೂಪ ತೋರಿಸುತ್ತಾನೆ. ಧರ್ಮರಾಯನು ಅವನನ್ನು ಸ್ತುತಿಸುತ್ತಾನೆ. ಬಳಿಕ ತಮ್ಮಂದಿರನ್ನೂ ದ್ರೌಪದಿಯನ್ನೂ ಕುಂತಿಯನ್ನೂ ನೋಡುತ್ತಾನೆ. ಅವರಿಗೆಲ್ಲ ಕೃಷ್ಣನು ದಿವ್ಯದೇಹಗಳನ್ನು ಕರುಣಿಸುವುದಲ್ಲದೆ ವೈಕುಂಠ ಪದವಿಯನ್ನು ನೀಡುತ್ತಾನೆ. ಮೂಲದಲ್ಲಿ ಈ ಸನ್ನಿವೇಶ ಇಲ್ಲ.

34. ಸೂತಭಾರತದಲ್ಲಿ ಕೃಷ್ಣನೇ ಧರ್ಮಜನಿಗೆ ಅವನ ತಮ್ಮಂದಿರನ್ನೂ ತಾಯಿ ಹಾಗೂ ಮಡದಿಯರನ್ನೂ ತೋರಿಸುತ್ತಾನೆ. ಆದರೆ ಮಹಾಭಾರತದಲ್ಲಿ ಧರ್ಮರಾಯನು ನರಕದಲ್ಲಿರುವ ಅವರನ್ನು ತಾನೇ ನೋಡುತ್ತಾನೆ. ದೇವತೆಗಳೇ ಪ್ರತ್ಯಕ್ಷರಾಗಿ ಅವರಿಗೆ ಶಾಶ್ವತ ಪದವಿಯನ್ನು ನೀಡುತ್ತಾರೆ. ಬಳಿಕ ಯಮಧರ್ಮರಾಯನು ಪ್ರತ್ಯಕ್ಷನಾಗಿ ಅವೆಲ್ಲವೂ ತನ್ನ ಪರೀಕ್ಷೆಯೆಂದೂ ದೇವೇಂದ್ರನ ಮಾಯೆಯೆಂದೂ ತಿಳಿಸುತ್ತಾನೆ.

35. ಮೂಲಭಾರತದ ಪ್ರಕಾರ ಧರ್ಮರಾಯನು ಸ್ವರ್ಗದಲ್ಲಿ ಕೃಷ್ಣ, ಕರ್ಣ ಹಾಗೂ ತನ್ನ ತಮ್ಮಂದಿರನ್ನೂ ಇತರರನ್ನೂ ಕಾಣುವ ಸನ್ನಿವೇಶವಿದೆ. ದೇವೇಂದ್ರನೇ ಅವರೆಲ್ಲರನ್ನೂ ತೋರಿಸುತ್ತಾನೆ. ಇದು ಸೂತಭಾರತದಲ್ಲಿಲ್ಲ.

36. ಸೂತಭಾರತದ ಹನ್ನೆರಡನೆಯ ಸಂಧಿಯಲ್ಲಿ ಬರುವ ವಿಚಾರಗಳಾವುವೂ ಮೂಲದಲ್ಲಿಲ್ಲ. ಇದೆಲ್ಲವೂ ಕವಿಕಲ್ಪನೆ. ಕೃಷ್ಣನು ಪಾಂಡವರನ್ನು ಕೈಲಾಸಕ್ಕೆ ಕರೆದೊಯ್ದು, ಶಿವನಿಂದ ಅವರಿಗೆ ಶಾಶ್ವತವಾದ ಸಾಯುಜ್ಯಪದವಿಯನ್ನು

ಕೊಡಿಸುತ್ತಾನೆ. ಧರ್ಮರಾಯನ ಮಾತಿನಂತೆ ಕೌರವರಿಗೂ ಇತರರಿಗೂ ಸ್ವರ್ಗಸುಖ ನೀಡುತ್ತಾನೆ.

37. ಸೂತಭಾರತದ ಹದಿಮೂರನೆಯ ಸಂಧಿಯಲ್ಲಿ ಬರುವ ಅಭಿಮನ್ಯುವನ್ನು ನೋಡಿದ ಕೃಷ್ಣನ ಮಗಳಿಗೆ ದೃಷ್ಟಿಗರ್ಭವಾಗುವುದು, ಕೃಷ್ಣನು ಆ ಗರ್ಭಸ್ರಾವವಾಗುವಂತೆ ಉಪಾಯ ಮಾಡುವುದು, ಆ ಗರ್ಭಸ್ರಾವದಿಂದ ಹುಟ್ಟಿದವರಿಗೆ ಭೂಮಿಯಲ್ಲಿ ಭಿಕ್ಷುಕರಾಗಿ ಹುಟ್ಟುವಂತೆ ಆದೇಶ ಕೊಡುವುದು—ಇತ್ಯಾದಿ ವಿಚಾರಗಳು ಮೂಲದಲ್ಲಿಲ್ಲ. (ಸೂತಭಾರತದ ಈ ಸನ್ನಿವೇಶ ಪ್ರಕ್ಷಿಪ್ತವಿರಬಹುದೇ ಎಂಬ ಸಂದೇಹವು ಬರುತ್ತದೆ. ಈ ಪ್ರಸಂಗ ಅಸ್ಪಷ್ಟವಾಗಿದ್ದು ಆ ಸಂದರ್ಭಕ್ಕೆ ಹೊಂದಿಕೊಳ್ಳುವುದಿಲ್ಲ.)

ಈ ರೀತಿ ಮಹಾಭಾರತದ ಮೂಲಕಥೆಯನ್ನು ಕವಿ ಅನುಸರಿಸಿದ್ದರೂ ಅಲ್ಲಲ್ಲಿ ತನಗೆ ತೋರಿದಂತೆ ಕೆಲವು ಪರಿವರ್ತನೆಗಳನ್ನೂ ಮಾಡಿಕೊಂಡಿದ್ದಾನೆ; ಹೊಸ ಕಲ್ಪನೆ, ಸನ್ನಿವೇಶಗಳನ್ನು ಸೇರಿಸಿದ್ದಾನೆ. ಆದುದರಿಂದ ಈ ಕಾವ್ಯಕ್ಕೆ ತನ್ನದೇ ಆದ ಒಂದು ವೈಶಿಷ್ಟ್ಯವಿದೆ.

ಕಾವ್ಯ ವಿಮರ್ಶೆ

ರಸ ನಿರೂಪಣ : ಸೂತಭಾರತದಲ್ಲಿ ಪಾಂಡವರು ಸ್ವರ್ಗಾರೋಹಣ ಮಾಡಿದ ಕಥಾಂಶ ಮಾತ್ರವೇ ಇದೆ. ಈ ಕಾವ್ಯದ ನಾಯಕ ಧರ್ಮರಾಯ. ಇದರಲ್ಲಿ ಮಹಾಕಾವ್ಯದ ಹೆಚ್ಚಿನ ಅಂಶಗಳು ಇಲ್ಲ. ಇದನ್ನೊಂದು ಖಂಡಕಾವ್ಯವೆಂದು ಕರೆಯಬಹುದೇನೋ. ಮುಖ್ಯವಾಗಿ ಕಾವ್ಯದುದ್ದಕ್ಕೂ ಅಲ್ಲಲ್ಲಿ ಕರುಣರಸದ ಪ್ರತಿಪಾದನೆಯಿದೆ. ಪಾಂಡವರನ್ನಗಲಿದ ಪರೀಕ್ಷಿತನ ದುಗುಡವನ್ನು ಕವಿ ಸುಂದರವಾಗಿ ಚಿತ್ರಿಸಿದ್ದಾನೆ. ಅಂತಃಪುರದ ರಾಣಿಯರು ಹಾಗೂ ಪುರದ ನಾರಿಯರು ಪಾಂಡವರ ಅಗಲುವಿಕೆಗಾಗಿ ಗೋಳಿಡುವ ದೃಶ್ಯ ಕರುಣರಸಪೂರ್ಣವಾಗಿದೆ:

ಆರ ನೋಂಪಿಯ ಕೆಡಿಸಿದೆವೊ ಮೇ
ಣಾರ ಮೋಲೆಯ [ಸೆ]ಳೆದೆವೋ ಮೇ
ಣಾರ ಗಂಡರನಗಲಿಸಿದೆವೋ ಪೂರ್ವಕಾಲದಲಿ
ಆರ ಸಿರಿಯನು ಹಳಿದೆವೋ ಮ
ತ್ತಾರ ಭೋಜನವೆಳೆದುಕೊಂಡೆವೊ
ವೀರ ಪಾಂಡವರೆಮ್ಮನಗಲಿದರೆಂದು ಮರುಗಿದರು [೪-೧೪

ಕಾಡಿನ ಮಧ್ಯೆ ಬೇಡರ ಪಡೆಯಲ್ಲಿ ಸಿಕ್ಕಿದ ದ್ರೌಪದಿಯನ್ನು ಪಾಂಡವರು ಬಿಡಿಸಲು ಅಸಮರ್ಥರಾದಾಗ ಅವಳು ತನ್ನನ್ನು ಕಾಪಾಡಬೇಕೆಂದು ಶಿವನಲ್ಲಿ—

ಪತಿಗಳವರಂಜಿದರು ನೀನೇ
ಗತಿ ಕಣಾ ಕಾರುಣ್ಯನಿಧಿ ಪಶು
ಪತಿ ಅನಾಥೆಗೆ ನಾಥ ನೀನಯ್ ಕರುಣಿ ಶಶಿವರ್ಣ
ಗತಿವಿಹೀನೆಗೆ ನೀನೆ ಗತಿ ಪಾ
ರ್ವತೀಪತಿ ಸಲಹೆನ್ನ ಲಜ್ಜಾ
ಸ್ಥಿತಿಯನುಳಿಪಮು ಕರುಣಿಸೈ [ನೀ] ಯೆಂದಳಿಂದುಮುಖಿ [೫-೧೪

ಎಂದೂ, ಹರಿಯಲ್ಲಿ—

ಅಡವಿಯಲಿ ಮರಿಹುಲ್ಲೆ ಬೇಡರ
ಪಡೆಯ ಬೇಟೆಗೆ ಸಿಕ್ಕಿದಂತಾ
ನೊಡೆಯನಿಲ್ಲದೆ ಕೆಟ್ಟೆನೈ ನರಕಾರಿ ಕಂಸಾರಿ
ಗಿಡುಗ ಮುಟ್ಟಿದ ಫಣಿಯ ಮೊಟ್ಟೆಯ
ಬಿಡಿಸಲಾಗದೆ ನಿನ್ನ ಭೃತ್ಯರ
ಕಡು ನಿರೋಧವ ನೋಡುತಿಹರೇ ಯೆಂದಳಿಂದುಮುಖಿ [೫-೧೮

ಎಂದೂ ಮೊರೆಯಿಡುತ್ತಾಳೆ. ಈ ಸನ್ನಿವೇಶವನ್ನು ಕವಿ ಸುಂದರವಾಗಿ ಚಿತ್ರಿಸಿದ್ದಾನೆ. ಪಾಂಡವರು ಗುಡ್ಡ ಕಾಡುಗಳಲ್ಲಿ, ಕಲ್ಲುಮುಳ್ಳುಗಳ ದಾರಿಯಲ್ಲಿ ಸಂಚರಿಸುವಾಗ, ಬೆಟ್ಟಗಳನ್ನೇರುವಾಗ ಪಟ್ಟ ಕಷ್ಟಪರಂಪರೆಗಳನ್ನೂ ಕವಿ ಕರುಣರಸಪೂರ್ಣವಾಗಿ ವರ್ಣಿಸಿದ್ದಾನೆ. ದ್ರೌಪದಿ ಹಿಮದ ಬಾಧೆಗೊಳಗಾದಾಗ ಧರ್ಮರಾಯನನ್ನು ಬಿಟ್ಟು ಉಳಿದ ಪಾಂಡವರೆಲ್ಲರೂ ಅವಳ ಗುಣಗಾನ ಮಾಡಿ ಗೋಳಾಡುತ್ತಾರೆ. ಅಂತೆಯೇ ಮುಂದೆ ಪ್ರತಿಯೊಬ್ಬನು ಬೀಳುವಾಗಲೂ ಉಳಿದವರು ದುಃಖಿಸುತ್ತಾರೆ. ಕೊನೆಗೆ ಭೀಮನು ಬಿದ್ದಾಗ ಧರ್ಮರಾಯನು ಅವನ ಗುಣಗಳನ್ನು ಹೊಗಳುತ್ತಾ ಮರುಗುತ್ತಾನೆ. ಈ ರೀತಿ ಕಾವ್ಯದಲ್ಲಿ ಉದ್ದಕ್ಕೂ ಕರುಣರಸವೇ ಪ್ರಧಾನವಾಗಿದೆ. ಹತ್ತನೆಯ ಸಂಧಿಯಲ್ಲಿ ಧರ್ಮರಾಯನಿಗಾಗುವ ನರಕದರ್ಶನದ ಸನ್ನಿವೇಶವು ಬೀಭತ್ಸರಸದಿಂದ ಕೂಡಿದೆ.

ದೈವಭಕ್ತಿ : ಕವಿಗೆ ಪ್ರಧಾನವಾಗಿ ಕೃಷ್ಣ ಹಾಗೂ ಶಿವ ದೇವರ ಮೇಲಿರುವ ಭಕ್ತಿಯು ಹಲವೆಡೆ ಪ್ರಕಟವಾಗಿದೆ. ಕವಿಗೆ ಕೃಷ್ಣನ ಮೇಲಿರುವ ಭಕ್ತಿ ಅಪಾರವಾದುದು. ಹನ್ನೊಂದನೆಯ ಸಂಧಿಯಲ್ಲಿ ಕೃಷ್ಣನನ್ನು ಧರ್ಮರಾಯನು ಸ್ತೋತ್ರ ಮಾಡುವ ಸಂದರ್ಭದಲ್ಲಿ ಕೃಷ್ಣನ ಹತ್ತವತಾರಗಳ ವರ್ಣನೆ, ಬಾಲಲೀಲೆ ಹಾಗೂ ದುಷ್ಟಸಂಹಾರದ ವರ್ಣನೆಯ ಅನೇಕ ಪದ್ಯಗಳಿವೆ. ಇಲ್ಲೆಲ್ಲ ಆರ್ತಭಕ್ತಿ ವ್ಯಕ್ತವಾಗಿದೆ :

ಜಯ ಜನಾರ್ದನ ವಿಮಳ ಮುಕ್ತಾ
ಶ್ರಯ ಮಧುರಾರಿ ಮುಕುಂದ ರಕ್ಷಿಸು
ಭಯರಹಿತ ಕಮಲಾಕ್ಷ ಕಂಸಾರಾತಿ ರಕ್ಷಿಪುದು
ಲಯವಿಹೀನ ಕೃಪಾಂಬುನಿಧಿ ಯ
ದ್ವಯನೆ ಉಪಮಾತೀತ ರಕ್ಷಿಸು
ಜಯ ಜಗತ್ಪತಿ ರಕ್ಷಿಸೆಂದನು ಧರ್ಮಸಂಭವನು [೧೧-೫

ಸಕಲ ಜಗದಾಧಾರ ಭಕ್ತ
ಪ್ರಕರರಕ್ಷಕ ದೇವ ರಕ್ಷಿಸು
ಭಕ್ತರಿಚ್ಛೆಯನೀವ ಸುರತರು ಭಕ್ತಸಂಸಾರಿ
ನಿಖಿಳ ನಿಗಮಾತೀತ ವಿಶ್ವಾ
ಧಿಕನೆ ವಿಶ್ವದ್ರೂಪಪಸಲುಹಾಂ
ಬಕನೆ ಕರುಣಿಸು ಕರುಣಿಸೆಂದನು ಧರ್ಮನಂದನನು [೧:

"ಸರ್ವಂ ವಿಷ್ಣುಮಯ ಜಗವು" ಎಂದು ಹೇಳಿದರೂ ಕವಿಯು ಹರಿಹರರಲ್ಲಿ ಭೇದ
ನೆಂಬ ತತ್ವವನ್ನು ಸಾರುತ್ತಾ "ಎಲ್ಲಿ ಶಿವಮಯ ಅಲ್ಲಿ ವಿಷ್ಣುವೆ ಯೆಲ್ಲಿ ಹರಿಮಯ
ಶಿವನಿಹ"ನೆಂದು ಹೇಳಿದ್ದಾನೆ. ಇದು ಕವಿಯ ಭಕ್ತಿವೈಶಾಲ್ಯಕ್ಕೆ, ಹರಿಹರಾಭ
ದೃಷ್ಟಿಗೆ, ಸ್ಪಷ್ಟ ನಿದರ್ಶನ.

ಪೋಷಕ ರಸಗಳು : ಕರುಣಾರಸ ಹಾಗೂ ಭಕ್ತಿಯ ಭಾವವೇ ಈ ಕಾ
ವಲ್ಲಿ ಪ್ರಧಾನವಾದರೂ ವೀರ, ಭಯಾನಕ ರಸಗಳೂ ಪೋಷಕವಾಗಿ ಬಂದಿ
ಪಾಂಡವರು ಸ್ವರ್ಗಕ್ಕೆ ಹೋಗುವ ದಾರಿಯಲ್ಲಿ ದ್ರೌಪದಿಯು ಬೇಡರ ಪಡೆಯಲ್ಲಿ
ಹಾಕಿಕೊಂಡಿದ್ದಾಗ, ಮುಂದೆ ಕಾಳ್ಗಿಚ್ಚು ಆವರಿಸಿದಾಗ, ದಾನವನೊಬ್ಬನು ದಾ
ಅಡ್ಡಲಾಗಿ ಮಲಗಿದ್ದಾಗ ಭಯಾನಕ ರಸದ ಚಿತ್ರಣವಿದೆ. ದಾರಿಯಲ್ಲಿ ತಮ್ಮಂ
ಬಿದ್ದಾಗ ಭೀಮನು ಅವರ ಶೌರ್ಯ ಸಾಹಸಗಳನ್ನು ವರ್ಣಿಸುವುದು. ಭೀಮ
ಬಿದ್ದಾಗ ಧರ್ಮರಾಯನು ಅವನ ಹಾಗೂ ಇತರ ತಮ್ಮಂದಿರ ಶೂರತನವ
ಕೊಂಡಾಡುವುದು, ದಾರಿಯಲ್ಲಿ ಅಡ್ಡಲಾಗಿ ಬಿದ್ದಿದ್ದ ದಾನವನನ್ನು ಭೀಮ
ಹೋರಾಡಿ ಸೋಲಿಸುವುದು ಮುಂತಾದೆಡೆಗಳಲ್ಲಿ ವೀರರಸದ ಚಿತ್ರಣವಿದೆ. ಶೃಂ
ರಸದ ನಿರೂಪಣೆಗೆ ಈ ಕಾವ್ಯದಲ್ಲಿ ಅವಕಾಶವೇ ಇಲ್ಲ. ಕೆಲವೆಡೆಗಳಲ್ಲಿ ಕ
ಕಲ್ಪನೆ ಹಾಗೂ ಭಾವಗಳು ಸುಂದರವಾಗಿ ಒಡಮೂಡಿವೆ. ಸ್ವರ್ಗಾರೋಹಣಕ
ಹೊರಟು ಕಾಡಿನ ಮಾರ್ಗವಾಗಿ ಸಂಚರಿಸುತ್ತಿದ್ದ ಪಾಂಡವರಿಗೆ ಕಾಳ್ಗಿಚ್ಚು
ರಾಗುತ್ತದೆ. ಆಗ ದ್ರೌಪದಿ ದೇವದೇವತೆಗಳನ್ನು ಸ್ಮರಿಸಿ ಅಗ್ನಿಯನ್ನು ಪ್ರವೇ
ತ್ತಾಳೆ. ಅಷ್ಟರಲ್ಲಿ 'ಹರಿದು ಹೋದುದು ಕಿಚ್ಚಿನುಬ್ಬರ ಎಂದು ಹೇಳಿದ
ಮುಂದೆ, 'ಆ ಮಹಾಸತಿ ಹೊಗಲು ನಿಲುವುದೆ ಭೂಮಿಯಲಿ ಕೃತಕಾಗ್ನಿ'
ತ್ತಾನೆ. ದ್ರೌಪದಿ ಅಗ್ನಿಪುತ್ರಿಯಾದುದರಿಂದ ಅವಳು ಬೆಂಕಿಯನ್ನು ಪ್ರವೇಶಿ
ಆ ಕೃತಕ ಬೆಂಕಿಯು ಮಾಯವಾಯಿತೆಂದು ಹೇಳಿದ ಕವಿಕಲ್ಪನೆ ಸುಂದರವಾ
ಭೀಮನು ಹಿಮದ ಪ್ರಭಾವಕ್ಕೊಳಗಾಗಿ ಬಿದ್ದು ಸತ್ತಾಗ ಧರ್ಮರಾಯನು ಅ
ಶವವನ್ನು ಹೊತ್ತುಕೊಂಡು ಹೋಗುತ್ತಾನೆ. ಆಗ ಕೃಷ್ಣನು ವೃದ್ಧ ವಿಪ್ರವೇಷ
ಬಂದು ಬಿದ್ದುಹೋದ ಅರಳಿ ಮರವನ್ನು ತಂದು ನಿಲ್ಲಿಸಿ ಕಟ್ಟೆ ಕಟ್ಟಿ ಸಾವಿರ ಕು
ಕೊಡದಲ್ಲಿ ಅದಕ್ಕೆ ನೀರನ್ನು ತಂದು ಸುರಿಯುತ್ತಾನೆ. ಈ ಸನ್ನಿವೇಶದ ಮೂ
ಸತ್ತುಹೋದ ಭೀಮನ ಹೆಣವನ್ನು ಹೊತ್ತುಕೊಂಡು ಹೋಗುವುದರಿಂದ ಪ್ರಯೋ

ಲ್ಲವೆಂಬುದನ್ನು ಕವಿ ತಿಳಿಸಿದ್ದಾನೆ. ಇದು ಕವಿಪ್ರತಿಭೆಗೆ ಒಂದು ನಿದರ್ಶನ. ಇಲ್ಲಿ ಾನವ ಜೀವಿತದ ಕ್ಷಣಭಂಗುರತೆ ಸೂಚಿತವಾಗಿದ್ದು ಶಾಂತಿರಸ ಧ್ವನಿತವಾಗುತ್ತದೆ.

ವರ್ಣನೆ: ಈ ಕಾವ್ಯದಲ್ಲಿ ಸುಂದರವಾದ ಅನೇಕ ವರ್ಣನೆಗಳೂ ಇವೆ. ರಂಭದಲ್ಲಿ ಕಲ್ಕಿಯ ಆಗಮನದಿಂದ ಲೋಕದ ಜನರಲ್ಲಾಗುವ ವ್ಯಾಪಾರ್ಟನ ರ್ಣನೆಯಿದೆ. ಪರೀಕ್ಷಿತರಾಜನ ಪಟ್ಟಾಭಿಷೇಕೋತ್ಸವ, ಬೇರೆಬೇರೆ ಮರ, ಗಿಡ, ಾಗೂ ಮರಗಳು, ಕಾಳ್ಗಿಚ್ಚು, ಹಿಮದ ಪ್ರಭಾವ ಹಾಗೂ ಪರಿಣಾಮ, ೀಮಾರ್ಜುನರ ಶೌರ್ಯ, ಸ್ವರ್ಗ, ನರಕ, ಮಹಿಮೆ ಹಾಗೂ ಹತ್ತವತಾರಗಳು, ಶಿವ ಾಗೂ ಶಿವನಾಸ್ಥಾನ, ಮುಂತಾದುವುಗಳ ವರ್ಣನೆಗಳು ಈ ಕಾವ್ಯದ ಸೌಂದರ್ಯ ನ್ನು ಹೆಚ್ಚಿಸಿವೆ. ಸೂರ್ಯೋದಯ, ಸೂರ್ಯಾಸ್ತ, ಚಂದ್ರೋದಯದ ವರ್ಣನೆ ಳು ಬಂದಿದ್ದರೂ ಅವು ಅಷ್ಟು ಮುಖ್ಯವಾಗಿಲ್ಲ. ಶಬ್ದಾಲಂಕಾರ ಹಾಗೂ ರ್ಥಾಲಂಕಾರಗಳು ಮಿತ ಪ್ರಮಾಣದಲ್ಲಿವೆ. 'ಘನದಬ್ಬರದ ಘೋಷಾರವದ ುಳುಘುಳು ಘುಳಿಪ ಸಾಸಿರದಾ' ಎಂಬಲ್ಲಿ ಮಹಾಪ್ರಾಣ 'ಘ' ದ ಪುನರಾವರ್ತನೆ ್ಯಂಜಕವಾಗಿದೆ.

ಅಲ್ಲಿಗಲ್ಲಿಗೆ ಭೂತಸಂತತಿ
ಯಲ್ಲಿಗಲ್ಲಿ[ಗೆ] ದೈತ್ಯರುಪಟಳ
ಪಲ್ಲಿಗಲ್ಲಿಗೆ ಭೈರವನ ಬಲು ಜಟ್ಟಿಗನ ಬಲುಹು
ಅಲ್ಲಗಲ್ಲಿಗೆ ಶಾಕಿಣೀಜನ
ಪಲ್ಲಿಗಲ್ಲಿಗೆ ಸಚಿವರಾಲಯ
ವಲ್ಲಿ ಹೊಗಲನುಚಿತವೆನಲು ಜುಂತೆಂದಲೆಂದುವನುಪಿ [೨–೩೦

ಈ ಪದ್ಯದಲ್ಲಿ 'ಅಲ್ಲಿಗಲ್ಲಿಗೆ' ಎಂಬ ಪದವು ವೃತ್ತ್ಯನುಪ್ರಾಸವಾಗಿ ಬಂದಿದೆ. 'ನಭ ಮಂಡಲವನಂಡಲೆಯಿತ್ತು ಪಾತಕಕೋಟಿಗಳ ರಭಸ' ಎಂಬಲ್ಲಿ 'ಮಂಡಲ–ಅಂಡಲೆ' ಹಾಗೂ 'ಪಾತಕ–ಕೋಟಿ' ಎಂಬ ಪದಗಳ ಪ್ರಯೋಗ ಚೆನ್ನಾಗಿದೆ. 'ರಾಹು ುಡುಕಿದ ಚಂದ್ರಮಂಡಲ ಗಾಹಿನಂತಿರೆ', 'ಉದಯದ ತರಣಿಯಂತಿರೆ', 'ಕರು ಾಯ ಮೊಲೆಯನು ಅರಸುವಾಪ್ಪೋಲ್', 'ನೆರೆ ನೋಡವನೊಡೆದು ಮೂಡುವ ನಪನಂದದಲಿ', '[ಭೇಕ] ಸರ್ಪನ [ಬಾಯ್ಗೆ] ಬಿದ್ದಂತೆ', 'ವೃಂದದಲಿ ತಾಯ್ ುಸುಟ ಶಿಶುವಿಂಗಂದು ನಾ ಯಣೆಯಾದೆ', 'ಉರಿಯ ಧಾವರದೊಳಗೆ ಸಿಕ್ಕಿದ ಗಿಡುಗ ಂತೆ', 'ಕಾಗೆಗಳಲ್ಲಿ ಕೋಗಿಲೆ ಮರಿಯು ಹಿಡಿಪೆಳೆದು ನೆರೆದು ಬಡಿವಂತೆ' ಮುಂತಾದ ರ್ಥಾಲಂಕಾರಗಳು ಅಲ್ಲೊಂದು ಇಲ್ಲೊಂದು ಬಂದಿದ್ದರೂ ಕವಿ ಆ ಬಗ್ಗೆ ಹೆಚ್ಚಿನ ಮನ ಹರಿಸಿಲ್ಲ.

ಶೈಲಿ: ಕವಿಯ ಭಾಷೆ ಸಂಸ್ಕೃತಭೂಯಿಷ್ಠವಾಗಿರದೆ ದೇಸಿಯಿಂದ ಕೂಡಿದ್ದು ರಳವಾಗಿದೆ. ಭಾಷಾ ದೃಷ್ಟಿಯಿಂದ ಹಾಗೂ ಪದಗಳ ಬಳಕೆಯ ದೃಷ್ಟಿಯಿಂದ

ಇವನ ಮೇಲೆ ಕುಮಾರವ್ಯಾಸನ ಪ್ರಭಾವ ಸಾಕಷ್ಟು ಆಗಿದೆ ಎನ್ನಬಹುದು. ಗಾಥಿಕೆ, ಡಗೆ, ಡಾವರ, ಡೆಂಡಣಿಸು, ಹೇಡೈಸು, ಥೊಕ್ಕರಿಸು, ಜಕ್ಕುಲಿಸು, ಜೊಕ್ಕೈಯ ಮುಂತಾದ ಪದಗಳನ್ನು ಈ ಕವಿ ಬಳಸಿದ್ದಾನೆ. ಕೆಲವೆಡೆಗಳಲ್ಲಿ ದ್ವಿತೀಯಾಕ್ಷರ ಪ್ರಾಸದ ನಿಯಮವನ್ನು ಇವನು ಕಟ್ಟುನಿಟ್ಟಾಗಿ ಪಾಲಿಸಿಲ್ಲ. ಇತರ ಕವಿಗಳಂತೆ ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಹಿಗ್ಗಿಸಿ ಕುಗ್ಗಿಸಿ ಪ್ರಯೋಗಿಸುವ ರೀತಿಯನ್ನು ಈ ಕಾವ್ಯದಲ್ಲೂ ಕಾಣಬಹುದು. ಲೋಲುಪುತಿ (ಲೋಲುಪ್ತಿ), ಸೂರಿಯನ (ಸೂರ್ಯನ), ಕಾಯಿದನ (ಕಾಯ್ದನ), ಮಾವನ (ಮಹಾವನ), ಮಹಾತ್ರದಲಿ (ಮಾತ್ರದಲಿ), ದುರಿಯಶ (ದುರ್ಯಶ) ಮೊದಲಾದ ಪದಗಳ ಬಳಕೆ ಇದಕ್ಕೆ ಉದಾಹರಣೆ. ಕೆಲವೆಡೆಯಲ್ಲಿ ಮಾತ್ರೆಗಳು ಹೆಚ್ಚುಕಡಿಮೆಯಾಗಿದ್ದು ಛಂದಸ್ಸಿಗೂ ಭಂಗ ಬಂದಿದೆ.

ಮೂಲಪ್ರತಿಯಲ್ಲಿ 'ಇ' ಕಾರದ ಬದಲು 'ಯಿ'ಕಾರವನ್ನೂ, 'ಎ' ಕಾರದ ಬದಲು 'ಯೆ' ಕಾರವನ್ನೂ 'ಈ' ಕಾರದ ಬದಲು 'ಯೀ' ಕಾರವನ್ನೂ, 'ಏ' ಕಾರದ ಬದಲು 'ಯೇ' ಕಾರವನ್ನೂ, 'ಒ' ಕಾರದ ಬದಲು 'ವ' ಕಾರವನ್ನೂ 'ಓ' ಕಾರದ ಬದಲು 'ವಾ' ಕಾರವನ್ನೂ ಬಳಸಲಾಗಿದೆ. ಉದಾ: ಯಿರಿದಾಡು (ಇರಿದಾಡು), ಯಿಳೆ (ಇಳೆ), ಯಿದು (ಇದು), ಯಿಂದು (ಇಂದು), ಯಿಲ್ಲಿ (ಇಲ್ಲಿ), ಯಿನ್ನು (ಇನ್ನು), ಯಿಳಿ (ಇಳಿ), ಯೀಶ (ಈಶ), ಯೀತ (ಈತ), ಯೆನಲು (ಎನಲು), ಯೆಲ್ಲಿ (ಎಲ್ಲಿ), ಯೆಂದು (ಎಂದು), ಯೇನ (ಏನ), ವದರು (ಒದರು), ವಲಿದೆ (ಒಲಿದೆ), ವೂಡ (ಒಡ), ವೂಂದು (ಒಂದು), ವಾಲೆ (ಓಲೆ) ಮೊದಲಾದುವು. ಕವಿಯ ಶೈಲಿಯು ದೇಸೀ ಮಿಶ್ರಿತವಾಗಿದ್ದು ಆಡುಮಾತುಗಳ ಬಳಕೆ ಇರುವುದು ಕಂಡು ಬರುತ್ತದೆ. ಬೂದಿ ಮುಸುಕಿದ ಕೆಂಡ, ತಾಯನಗಲಿದ ಕರು, ಒಡೆಯರಿಲ್ಲದ ಧನವಲಾ, ನಾರಿಯರಿ ಸಂಸಾರ ಕಷ್ಟವು, ಹುಲಿಯ ಬಾಯಲಿ ಬದ್ಧ ಕಪಿಲೆ, ತಾಮರಸದಳನಯನನೊಲಿದರ್ಗಾವುದರಿದು, ಸತ್ಯದ ಸೀಮೆ ತಪ್ಪದೆ ನಡೆವರುಂಟೇ, ವಿಧವೆಯರಾಳುವರೆ ರಾಜ್ಯವನು, ಜಗವ ಪಾಲಿಸದಿರಲು ಜಯಸಿರಿಯಗಲಿ ಹೋಹುದು, ಮುಂಕಾಲ ಗತಿ ಲೇಸಲ್ಲ, ಕಳಿದ ನೀರಿಗೆ ಕಟ್ಟುಕಟ್ಟಲು ನಿಲುವುದೇ, ಹಿಮಕಿರಣ ಕಂದಲಿಗೆ ಬಾಡುವುದೇ, ಕನಸಿನಲಿ ಕಂಡಾ ಲಲಿತ ಧನವನು ನೆನೆದು ನಿಶ್ಚಯವೆಂದು ನಂಬುವರೆ, ಸತ್ಯದ ಬಲುಹು ತಾಯಾಗಿಹುದು, ಚಕೋರಂಗಳಿಗೆ ಕತ್ತಲೆಗೆ ಮುನ್ನ ಸೇರಿಕೆಯುಂಟೆ?, ಮಾಗಿಯಲಿ ಮದವೇರಿ ನುಡಿವುದೆ ಕೋಗಿಲೆ ಮೊದಲಾದ ನುಡಿಗಟ್ಟು ಹಾಗೂ ಗಾದೆಗಳು, ಕನ್ನಡ ಜಾಯಮಾನಕ್ಕೆ ಹೊಂದಿಕೊಂಡು ಈ ಕಾವ್ಯದಲ್ಲಿ ಪ್ರಯೋಗವಾಗಿವೆ.

ಇತರ ಕವಿಗಳ ಪ್ರಭಾವ: ಸೂತಭಾರತದ ಮೇಲೆ ಕುಮಾರವ್ಯಾಸ ಕವಿಯ ಪ್ರಭಾವ ಅಧಿಕವಾಗಿದೆ. ಶೈಲಿ ಹಾಗೂ ಪದಪ್ರಯೋಗಗಳಲ್ಲಿರುವಂತೆ, ಕೆಲವು ಪದ್ಯಗಳಲ್ಲೂ ಸಾದೃಶ್ಯವಿರುವುದು ಕಂಡುಬರುತ್ತದೆ.

ವೇದ ಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನ ಫಲ ಕೃ
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮ ಯಾಗಫಲ
ಮೇದಿನಿಯನೊಲಿದಿತ್ತ ಫಲ ವ
ಸ್ತ್ರಾದಿ ಕನ್ಯಾದಾನ ಫಲವಹು
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ

[ಕು.ವ್ಯಾ. ಭಾರತ, ಆದಿಪರ್ವ, ಪೀಠಿಕಾ ಸಂಧಿ, ಪದ್ಯ ೨೦]

ಕುಮಾರವ್ಯಾಸ ಭಾರತದ ಈ ಪದ್ಯದ ಪ್ರಭಾವ ಸೂತಭಾರತದ—

ಈ ಮಹಾಭಾರತದ ಕಥೆಯನು
ಭೂಮಿಯೊಳಗಾರಾದರೆಯು ಮಿಗೆ
ನೇಮದಲಿ ಕೇಳಿದರೆ ಪುಣ್ಯದ ಫಲವನನವರತ
ಕಾಮಪರ ಕರುಣಿಸುವನವರಿಗೆ
ಪ್ರೇಮದಿಂ ಮುಕ್ತಿಯನು ಕೊಡುವನು
ಅನುದಿನಂ ಪೇಳುವುದು ಕೇಳ್ವುದು ಪಾಂಡವರ ಕಥೆಯ

ಒಂದು ಪದವನು ಕೇಳಿದರೆ ಸಾ
ಕೊಂದರೊಳಗರ್ಥವನು ಸಾಕಾ
ವೊಂದು ಅರ್ಥದೊಳೆರಡು ಚರಣವ ಕೇಳಿದರೆ ಸಾಕು
ಒಂದು ವಾಕ್ಯವ ಕೇಳಿದವರಿಗೆ
ಒಂದು ಅಕ್ಷರ ಕೇಳಿದವರಿಗೆ
ಕುಂದದಿಹ ಪರಪದವನೀವನು ವೀರನಾರಯಣ

[ಸೂತಭಾರತ, ೧೩ - ೧೪, ೨೦]

ಎಂಬ ಎರಡು ಪದ್ಯಗಳ ಮೇಲೆ ಆಗಿರುವುದು ಕಂಡುಬರುತ್ತದೆ. ‘ಗದುಗಿನ ವೀರ ನಾರಾಯಣ’ ಎಂಬ ಕುಮಾರವ್ಯಾಸನ ಇಷ್ಟದೈವದ ಅಂಕಿತವನ್ನೂ ಕೆಲವೆಡೆ ಸೂತಭಾರತದ ಕವಿಯು ಉಪಯೋಗಿಸಿದ್ದಾನೆ. ಸ್ವರ್ಗಾರೋಹಣಕ್ಕಾಗಿ ಹೋಗುವಾಗ ಹಿಮದ ಪ್ರಭಾವಕ್ಕೊಳಗಾಗಿ ಬಿದ್ದು ಅರ್ಜುನನು ಅಸುನೀಗುವ ಸಂದರ್ಭದಲ್ಲಿ ಭೀಮನು ಆತನು ಹಿಂದೆ ತೋರಿದ ಸಾಹಸದ ಘಟನೆಗಳನ್ನು ಹೇಳುವ ಹಾಗೂ ಭೀಮನು ಹಿಮದ ಪ್ರಭಾವಕ್ಕೊಳಗಾಗಿ ಬಿದ್ದಾಗ ಧರ್ಮಜನು ಅವನ ಹಿಂದಿನ ಸಾಹಸದ ಕಥೆಯನ್ನು ಹೇಳುವಲ್ಲಿ ಸಿಂಹಾವಲೋಕನಕ್ರಮದಿಂದ ಭಾರತದ ಹಿಂದಿನ ಕಥಾಂಶಗಳು ಬಂದಿವೆ. ಇಲ್ಲಿ ರನ್ನನ ‘ಗದಾಯುದ್ಧ’ದ ಪ್ರಭಾವವಿರುವಂತೆ ಕಂಡು ಬರುತ್ತದೆ.

ಈ ಕಾವ್ಯದ ಸಂಪಾದನೆಯಲ್ಲಿ ಅನೇಕರು ಹಲವು ರೀತಿಯಿಂದ ಸಹಾಯ, ಸಲಹೆ, ಸಹಕಾರಗಳನ್ನಿತ್ತಿದ್ದಾರೆ. ಸೂತಭಾರತದ ತಾಳೆಯೋಲೆಯ ಪ್ರತಿಯನ್ನು ಒದಗಿಸಿಕೊಟ್ಟ ಶಿರಸಿ ತಾಲೂಕಿನ ಗಮೆಯನ ಮನೆಯ ಪ್ರೊ. ಪಿ. ಐ. ಹೆಗ್ಗಡೆ ಅವರಿಗೆ ನಾವು ತುಂಬ ಆಭಾರಿಗಳಾಗಿದ್ದೇವೆ. ಪ್ರಕಟನೆಯ ಹೊರೆಹೊತ್ತು ಇದನ್ನು ಪ್ರಕಟಿಸಲು ಅವಕಾಶ ಮಾಡಿಕೊಟ್ಟ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೂ, ಸಲಹೆ ಸೂಚನೆಗಳನ್ನಿತ್ತು ಬೇಕಾದಲ್ಲಿ ಪಾಠ ಪರಿಷ್ಕರಣಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ತಿದ್ದುಪಡಿಗಳನ್ನು ಮಾಡಿರುವ, ಪ್ರತಿಷ್ಠಾನದ ಪ್ರಕಟನೆಗಳ ಪ್ರಧಾನ ಸಂಪಾದಕರಾದ ಪ್ರೊ. ಎಂ. ವಿ. ಸೀತಾರಾಮಯ್ಯನವರಿಗೂ, ಸಂಪಾದನೆಯ ಸಂದರ್ಭದಲ್ಲಿ ಉಂಟಾದ ಸಂದೇಹಗಳನ್ನು ನಿವಾರಿಸಿ ಯೋಗ್ಯ ಸಲಹೆಗಳನ್ನು ನೀಡಿರುವ ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಕೆ. ಕುಶಾಲಪ್ಪಗೌಡ ಅವರಿಗೂ ನಮ್ಮ ಗೌರವಪೂರ್ವಕ ಕೃತಜ್ಞತೆಯ ವಂದನೆಗಳು ಸಲ್ಲುತ್ತವೆ. ಸಂಪಾದನೆಯಲ್ಲಿ ಸಹಕರಿಸಿದ ಶ್ರೀ ಕೆ. ಪದ್ಮನಾಭ ಅವರಿಗೆ ನಮ್ಮ ನೆನಕೆಗಳು. ಇತರ ರೀತಿಯಲ್ಲಿ ಸಹಕರಿಸಿದ ಶ್ರೀ ಗಣಪತಿ ಭಟ್ ಹಾಗೂ ಪ್ರೋತ್ಸಾಹಿಸಿದ ಶ್ರೀ ಹರಿಕೃಷ್ಣ ಭರಣ್ಯ ಹಾಗೂ ಇತರರಿಗೂ ನಮ್ಮ ವಂದನೆಗಳು.

ಡಾ|| ಶ್ರೀಕೃಷ್ಣ ಭಟ್ ಅರ್ತಿಕಜೆ
ಎಂ. ಜಿ. ಹೆಗಡೆ ಹಲಸಿಗೆ
ಸಂಪಾದಕರು

ಸೂತ ಭಾರತ ಅಥವಾ ಸ್ವರ್ಗಾರೋಹಣ

ಸಂಧಿ ೧

ಶ್ರೀ ಸಕಲ ಜಗವಂ[1][ದ್ಯನಂ][1]ಕುಶ
ಪಾಶ ಮೋದಕ ಪಾಶಧರ ವಿ
ಘ್ನೇಶ ಗಜಮುಖ ಗಣಪ ಲಂಬೋದರ ಮಹಾಕಾಯ
ವಾಸವಾರ್ಚಿ[2][ತ][2] ಕಮಲಭವ ಗಿರಿ
ಜೇಶ ಹರಿಪೂಜಿತ ವಿನಾಯಕ
ಈಶಸುತ ರಕ್ಷಿಸುಗೆ ನಮ್ಮನು ಪಾರ್ವತೀತನಯ ೧

ಎರಡು ತೋಳಿನ ವಿಷ್ಣು ಮುಖ ಒಂ
ದರಲಿ ಮೆರೆವ ಬ್ರಹ್ಮ ನೊಸಲಲಿ
ಉರಿನಯನ ಒಂದುಳ್ಳಡಾ ಸಾಕ್ಷಾ[3][ತು]ಪರ[ಶಿ]ವ[ನು][3]
ಧರೆಯ ಜೀವರ ಜನನಮರಣಾಂ
ಕು[4][ರ][4]ಕುಠಾರ ವಿಹಾರ ವಿದ್ಯಾ
ಶರಧಿ ವೇದವ್ಯಾಸಮುನಿ ಮಾಳ್ಕೆಮಗೆ ಸನುಮತಿಯ ೨

ಗುರು ಗಣಪ ನಾರದಗೆ *ವ್ಯಾಸಗೆ
ವರ ಶುಕಗೆ ಹರಿಹರ ವಿರಿಂಚಿಗೆ
ಸಿರಿಗಿರಿಜೆ ಶಾರದೆಗೆ ಸುರಮುನಿ ಪಿತೃಗಳಡಿಗ[5][ಳಿ][5]ಗೆ
ನರರುರಗ ಗರುಡರಿಗೆ ಭಕುತರಿ
ಗರಿಗಳಿಗೆ ಮಿತ್ರರಿಗೆ ಪ್ರಕೃತಿಗೆ
ಪುರುಷರಿಗೆ [6]*[ತ್ರೈಲೋಕ್ಯ][6] ಸಚರಾಚರರಿಗೊಂದಿಸುವೆ ೩

---

1 ದ್ಯಾನ. 2 (ಸಂ. ಸೇ.). 3 (ಸಂ. ಸೇ.). 4 ರ. 5 ಡಿ. 6 ತ್ರೈಲೋಕ.

ವಿಶೇಷ ಸೂಚನೆ : ಪಾಠಪರಿಷ್ಕರಣ ಕಾರ್ಯ ದೊರೆತ ಒಂದೇ ಹಸ್ತಪ್ರತಿಯ ಆಧಾರದ ಮೇಲೆ ನಡೆದಿರುವುದರಿಂದ, ಅಡಿಟಿಪ್ಪಣಿಯ ಪಾಠಗಳೆಲ್ಲವೂ (ಕೆಲವು ಹೊರತಾಗಿ) ಮೂಲಪಾಠ ಎಂದು ತಿಳಿಯಬೇಕು; ಪಾಠಾಂತರಗಳಲ್ಲ. ಅರ್ಥವ್ಯಕ್ತಿಗಾಗಿಯೋ ಛಂದಸ್ಸಿನ ಸರಿಪಡಿಕೆಗಾಗಿಯೋ ಸಂಪಾದಕರು ಸೇರಿಸಿರುವ ಅಕ್ಷರಗಳನ್ನೂ ಶಬ್ದಗಳನ್ನೂ ಮಾತ್ರ ಚೌಕಕಂಸದಲ್ಲಿ ಕಾಣಿಸಿ, (ಸಂ. ಸೇ. = ಸಂಪಾದಕರು ಸೇರಿಸಿದ್ದು) ಎಂದು ಅಡಿಟಿಪ್ಪಣಿಯಲ್ಲಿ ಕಾಣಿಸಿದೆ.

ಭೂತಳೇಶ್ವರ ಮತ್ತೆ ಕೇಳಾ
ಜಾತಿ ಸಂಕರವಕ್ಕು ವಂಚನೆ
ಭೀತಿಯಾರ[1] [ಡ][1] [2]ದಳದು ಬೆಳಗುವ ಲತೆಯ ಕೊಲೆಯೆಂಬ
ಘಾತಕರು ಈ ಯೇಳು ನಾಯಕ
ರಾತುರಗ ಚೂಣಿಯಲಿ ಜಗದ
ಖ್ಯಾತಿಯಲಿ ಕೈಕೊಂಡು ನಡೆದನು ಕಲಿಕಿ ಧರಣಿಯಲಿ ೪

ವಿಗಡತನದಿಂ ದೈವ ದ್ವಾಪರ
ಯುಗದ ಧರ್ಮವ ಮುರಿವ ಭರದಿಂ
ಜಗದ ಜೋಡಿಯ ಮೇಲೆ ಬಂದನು ಕಲಿಕಿಯವಗುಣವ
ಮಗನೆ ಕೇಳಾ ಕಲಿಯ ಶೀಲವ
ಮಿಗುವ ಧರ್ಮವ ಕಾಣೆನಾ ಕಲಿ
ಯುಗದ ಕಾಲುವೆಯಲ್ಲಿ ಧರ್ಮದ ಪೇಟಿಯಾಗಿಹುದು ೫

ರಾಯ ಕೇಳೈ ಕಲಿಕಿ ಬಂದ ಉ
ಪಾಯವನು ಹೇಳುವೆನು ತನ್ನಯ
ತಾಯ ನೆತ್ತಿಯ ಮೇಲೆ ಮೊಟ್ಟೆಯ ಹೊರಿಸಿ ನಿಜ ಸತಿಯ
ನೋಯದಂತೆ[3] [ಯೆ][3] ಕುಮುರಿಯೇರಿಸಿ
ಬಾಯಬಿಡು ವಾಘೆಯನು ಪಿಡಿಯುವ
ತಾಯ ಬೈವುತ ನಡೆದು ಹೊಕ್ಕನಿಳಾ[4] [ವೃತದ][4] ಮೇಲೆ ೬

ಕ್ಷಿತಿಪ ಚಿತ್ತೈಸೊಬ್ಬ ಮುಪ್ಪಿನ
ಪಿತನು ಮನೆಯೊಳಗಿರಲು ಆತನ
ಸುತರು ಭಂಗಿಸಿ ಬೈದು ಹೊರಡಿ[5]ಸಲಾಗ ಬಳಿಕವನು[5]
ಸತಿಯು ತಮ್ಮದಿರೊಡನೆ ಭೋಜನ
ಸತತ ಕೇಳಿಯು ಗಳಿಸಿದರ್ಥವ
ಮಿತವ ಹೇಳುವ ಸಹಭವ[6] [ರು][6] ಹಾನಿಯನೆ ಬಯಸುವರು ೭

ಹತ್ತೆ ಕರೆವರು ವಧುವನೇಳಿಸಿ
ಹೊತ್ತುಗಳೆಯದೆ ತನ್ನ ರಮಿಸಿರೆ
ನುತ್ತ ರಮಿಸಿದಳೊಂದು ರಾತ್ರಿಯಲೊಬ್ಬ ಸತಿ ಬಂದು

---

1 ಡ. 2 ಇಲ್ಲಿಯ ಪಾಠದ ಆಶಯ ಏನೆಂಬುದು ಸ್ಪಷ್ಟವಾಗುವುದಿಲ್ಲ. [ಸೂ. ಪಾ. (= ಸೂಚಿತಪಾಠ) ಕಳವು ತೆಗಳು ವನಿತಯ ಕೊಲೆಯೆಂಬ] 3 (ಸಂ. ಸೇ.) 4 ವೃತದ. 5 ಸಿದರು ಬಳಿಕವನೂತವ. 6 ರ.

ಚಿತ್ತವಿಸು ನೃಪತಿಲಕ ಮಧುರೋ-
ತ್ಪತ್ತಿಯಲಿ ಹರಿದತ್ತಲಿತ್ತಲು
ಮತ್ತೆ ಕೇಳಾ ಸುರೆಯ ಭಾಂಡವ ತೋರುತೆಲ್ಲರನು ೮

ಇದೆ ಮಹಾದ್ಭುತವೆನುತ ಕೆಲಬರು
ಬೆದರಿ ಜನ ಜನನಾಥ ಚಿತ್ತೈ
ಸಿದರ [1]ಹದನನು[1] ದೇವರರಿದಿಹುದೆಂದರಾ ಜನರು
ಮದವಡಗಿ ತಮ್ಮೊಳಗೆ ನುಡಿದರು
x x x x x x x x x x x x x x
x x x x x x x x x x x x x x ೯

ಈ ಹದನ ವಾರ್ತೆಯನು ಕೇಳಿದು
ಬೇಹುಗಾರರು ಬಂದು ಯಮಜಂ
ಗೂಹಿಸಲು ದುಸ್ಥಿತಿಯ ಕಾಲವೆ ಮೊಳೆತುದೇ ಎನುತ
ರಾಹು ತುಡುಕಿದ ಚಂದ್ರಮಂಡಲ
ಗಾಹಿನಂತಿರೆ ಬಾಡಿದಾನನ
ಸಾಹಸೋನ್ನತ [2][ಪದರಿಗೊ][2]ದಗಿತು ಕಳವಳದ ಮರೆ[3][ಯು][3] ೧೦

ಅವನಿಪಾಲಕ ಕೇಳು ಧರ್ಮಜ
ಶಿವಶಿವಾ ಯೆನುತೆದ್ದು [4][ಸುಯ್][4]ದನು
ವಿವಿಧ ದುಸ್ಥಿತಿಯೊತ್ತುವಾ ದಿನ ಮೊಳೆತುದೇ ಯೆನುತ
ಹವಣಿಸಿತೆ ಕೃಷ್ಣಾವಸಾನವು
ಭುವನದೊಳಗಿನ್ನಿರಲು ನಮ್ಮನು
ಬವಣೆಗೇ ಬರಿಸುವದು ಕಲಿಯುಗವೆಂದು ಬಿಸು[5][ಸುಯ್ದ][5] ೧೧

ಮನದಲಂಕುರವಾಯ್ತು ದುಗುಡವು
ಕೊನತುದೆರಡೆಲೆಯಾಯ್ತು ಬುದ್ಧಿಯ
ನೆನಹು ಮುಸುಕಿತು ಚಿತ್ತವೆಲ್ಲ[6][ವ][6] ಹರಹಿ ಹ[7][ದ][7]ಗೆಡಿಸೆ
ತನುವನಾವರಿಸಿತ್ತು ಯಮನಂ
ದನಗೆ ದೃಶ್ಯವ ತೋರುತಿದೆ ಲೋ
ಚನ[8][ದ][8] ಕಡೆಯಲಿ ಕೋಡಿವರಿದವು ಬಾಷ್ಪವಾರಿಗಳು ೧೨

---

1 ಹದನವನು. 2 ವದಗರೊ. 3 ಯಾ. 4 ಸ್ಯು. 5 ಸ್ಯುದ. 6 ರ. 7 ರ.
8 ವೆರಡು.

ಕರತಳದ ಮೇಲಿಟ್ಟು ಗಲ್ಲವ
ಮುರಿದ ಹುಬ್ಬಿನ ಮಕುಟದೊಲಹಿನ
ಮುರಹರನ [1]ನೆನೆ[ನೆನೆ]ದು ಸು[ಯು]ಲಾ[1] ಸುಯಿಲ ನಾಸಿಕದ
ಧರಣಿಪತಿ ದುಶ್ಚಿತ್ತನಾದನು
ಪರವಶಕೆ ಸಂದಿರಲು ಬಂದನು
ಪರಮ ವೇದವ್ಯಾಸ ಮುನಿಪತಿ ಬದರಿಕಾಶ್ರಮ[2][ದಿಂ][2] ೧೩

ಬರಲು ಕಂಡಾ ಮುನಿಯ ಸರಸಿಜ
ಪದಯುಗಂಳಿಗೆರಗಿ ಬೇಡಿದ
ನರ ವೃಕೋದರ ನಕುಲ ಸಹದೇವಾದಿಗಳು ನೃಪನ
ಇರವ ತೊ[3][ೞ][3]ರಿದಡಾ ಮುನೀಶ್ವರ
ಕರಕಮಲ ದಿಂ[4][ದೋ][4]ವಿ ಶೋಕದ
ಸರಣಿಯನು ಬಣ್ಣಿಸಿದನೆಬ್ಬಿಸಿದನು ಮಹೀಪತಿಯ ೧೪

ಮುರಮಥನ ಹಾ ಯೆನಲು ಧರಣೀ
ಶ್ವರನು ನೀರೊಗುತಿಪ್ಪ ಕಂಗಳ
ತೆರೆದು ನೋಡಿದ ನಾಲ್ಕು ದೆಸೆಯನು ಮತ್ತೆ ಕಳವಳಿಸಿ
ಮರುಗಿ ನೋಡುತ್ತಿರಲು ದುಃಖವ
ನೊರಸಿ ಮುನಿಪತಿ [5]ನೀನು[5] ಚಿಂತೆಯ
ಲಿಹರೆ ಹೇಳೆನ್ನರಸ ಹೇಳೆನ್ನಾನೆ ಹೇಳೆಂದ ೧೫

ಏನಮಾಡುವೆನಿನ್ನು ಮುನಿಪಾ
ದಾನವಾಂತಕ ದೂರವಾದನು
ಹಾನಿ[6][ನ][6]ಮಗಿನ್ನುಂಟು ಕಲಿಯುಗ[7][ವಿ][7]ಟ್ಟತಗಲದಲಿ
ಹೀನದೊಂದೆಸೆಯಿದ್ದು ಬದುಕುವು
ದನ್ಯವೃತ್ತಿಯ ತಾಳಲಾರೆವು
ಯೇನುಪಾಯವು ಕಲಿಕಿಯವಗಡತನವ ನೂಕುವರೆ ೧೬

ಮೇದಿನಿಯನಾಳುವರೆ ತಾ ಮಧು
ಸೂದನನು ದೂರಸ್ಥನಾದನು
ಹೋದುದೆಮ್ಮಯ ಸಾಹಸವು ತಾನೇನ[8][ದೊ][8]ದಗುವು[9][ದೊ][9]

1 ನೆನೆದು ಸುಯಿ. 2 ದಿ. 3. ಡ. 4 ದಾ. 5 ಧರಣಿಪಾಲ ನೀನು (ಇಲ್ಲಿ ದರಣಿಪಾಲ ಎಂಬ ಪದ ಅಧಿಕ. ಆದರಿಂದ ಛಂದಸ್ಸು ಕೇಡುತ್ತದೆ). 6 ನಿ. 7 ವ. 8 ನೊ. 9 ದೂ.

ಈ ದಿವಿಜಪತಿಸುತನ ಸಾಹಸ
ಹೋದುದಸುರಾಂತಕನ ಬೆನ್ನಲಿ
ಬೂದಿ ಮುಸುಕಿದ ಕೆಂಡವಾದುದು ಭೀಮನಗ್ಗಳಿಕೆ ೧೭

ನಕುಲ ಸಹದೇವರಲಿ ಹರಿಯದು
ಸಕಲ ಮೇದಿನಿಯಾಧಿಪತ್ಯವು
ಸುಕರವೇ ನಮ್ಮಿಂದ ಒದಗುವದುಂಟೆ ಭುಜಬಲವು
ರುಕುಮಿಣೀವಲ್ಲಭನ ಕರುಣಾ
ಪ್ರಕರ ವಜ್ರದ [1]ಗಿಣಿಗನುಸುವ[1](?)
ಸುಕರ ತಪ್ಪಿತು ಕೇಳು ಮುನಿಪತಿಯೆಂದ ಯಮಸೂನು ೧೮

ಮುಂದೆ ಕಲಿಯುಗ ಹೊಗುವುದೆಂದು ಮು
ಕುಂದ ಬೆಸಸಿದ ನಮಗೆ ಕಲಿಯುಗ
ದಂದುಗವ ಕೆಡುವಂದು ಕಲಿ ಕಲಿಯುಗದ ಧರ್ಮವನು
ಇಂದು ಕಲಿಯುಗ ಹೊಕ್ಕುದಿನ್ನೇ
ನಿಂದಿರಾಪತಿಯಲ್ಲಿಗೈದುವೆ
ನೆಂದು ಧರ್ಮಜ ಬಿನ್ನವಿಸೆ ಮುನಿರಾಯನಿಂತೆಂದ ೧೯

ಮಗನೆ ಕೇಳಾ ಸೋಮವಂಶವ
ನೆಗಳುವವರಾರಿನ್ನು ನೀವೇ
ಬಿಗಡುಗೊಂಡಿರಿ ಕಲಿಯುಗದೊಳೀ ಧರೆಯನಾಳುವರೆ
ಮಿಗಿಲು ಬಹು ಸತ್ವಜರು ಪವನನ
ಮಗನು ಸುರಪತಿಸೂನು ತಪ್ಪಿಸಿ
ಜಗದೊಳಗೆ ಬಲುಗೈಗಳಾರುಂಟೆಂದನಾ ಮುನಿಪ ೨೦

ಇನ್ನು ನಾವೀ ಧರೆಯನಾಳುವ
ರುನ್ನತಿಕೆ ನಮಗಾಗಲರಿವುದೆ
ಬನ್ನಬಡಿಸುವುದಾ ಚಕೋರಂಗಳಿಗೆ ಕತ್ತಲೆಗೆ
[2]ಮುನ್ನ ಸೇರಿಕೆ[2]ಯುಂಟೆ ಕೃಷ್ಣನು
ಬೆನ್ನಲಿರಲಾವತಿ[3]ಬಲರು[3] ನಮ
ಗಿನ್ನು ಸಾಹಸ ಪೊದಗಲರಿವುದೆ ಯೆಂದನಾ ನೃಪತಿ ೨೧

(ಸೂ. ಪಾ.) ಗಿಣಿಯು (ಗಣಿಯು) ನರಸುವ (?), ಗಿಣಿಗನಸುವದು (?).
2 ಮುನ್ನ ಸೇರಿಗೆ, 3 ಬರಲು.

ನಾಗಯುತ ಸತ್ರಾಣನೆಂದಾ
ವಾವ ಜನವಳುಕುವದು ಯೆನ್ನಿಂ
ದಾಗದಸುರಾರಾತಿಯಗಲಿದ ಬಳಿಕ ಸತ್ವಬಲ
ಮಾಗಿಯಲಿ ಮದವೇರಿ ನುಡಿವುದೆ
ಕೋಗಿಲೆಯುದಂತಿರಲಿ ಈ ಭೂ
ಭಾಗದೊಡೆತನವೆನಗೆ ನೂಕದು ಯೆಂದನಾ ಭೀಮ ೨೨

ಆದರೆಂತೈ ಯಿಂದು ಧರೆಯಿದ
ನಾದರಿಸುವವರಾರು ಶಿವ ಶಿವ
ಮೇದಿನೀಪತಿಯಾದವನೆ ಧರ್ಮಜನೆ ಪೇಳೆನಲು
ಬಾದರಾಯಣ ಬೆಸಸೆ ಕೈಮುಗಿ
ದಾ ಧರಿತ್ರಿಗೆ ಒಡೆಯನಿನ್ನೀ
ಶ್ರೀಧರನ ಜಾಮಾತನಾತ್ಮಜಗಿರಿಸಿ ಪಟ್ಟವನು ೨೩

ಹೇಳಲೇನು [1]ಕಳಿಂಗ[1] [2]ಉ[ತ್ಕ]ಲ[2]
[3][ಲಾಳ][8] ವಂಗ ಕಿರಾತ ಬರ್ಬರ
ಗೌಳ ವಂಗ [2]ತೆಲುಂಗ[2] ಕರ್ಪರ ತಿಗುಳ ದೇಶದವರು
ಚೋಳ ಪಾಂಡ್ಯ ದ್ರವಿಡ ಕೊಂಕಣ
ಮೂಲೆಯರಸುಗಳೆಲ್ಲ ತಮತ
ಮ್ಮಾಳು ಕುದುರೆ ವರೂಥ ಗಜಗಳ ಸಹಿತ ಬರುತಿರಲು ೨೪

ಪದಹತದ ರಜದಿಂದ ರವಿರಥ
ಹುದುಗಿ ಹೋಯಿತು ಧ್ವಜ ಪತಾಕೆಯ
ಹೊದರಿನಲಿ ಬೆಳುಗೊಡೆಯ ಝಲ್ಲರಿಗಳ ವಿಡಾಯಿಯಲಿ
ಹೊ[4][ದಿ][4]ಸಿಹೋಯಿತು ಗಗನವೆನೆ ಯಿಡು
ಕುದುರೆ ಗಜ ರಥ ಪಾಯದಳಮಯ
ಉದುರುತಿರೆ ಫಣಿರಾಜನಳುಕಿದ ದಳದ ಭಾರಕ್ಕೆ ೨೫

ಸೂಳವಿಪ ನಿಸ್ಸಾಳದಬ್ಬರ
ಸೀಳಿ[5][ತ][5]ಬುಜಭವಾಂಡವನು ತಾ
ಹೇಳಲೇನದನಿನ್ನು ಘನತರ ವಾದ್ಯನಿಚಯವನು

---

1 ಖಳಿಂಗ 2 ಉಂನ್ನಲ 3 ಲೋಳ 4 ಡ 5 ದುದ

ಮೇಲೆ ಮೇಲೈತಂದು ಧರ್ಮಜ
ಗಾಳುದೋರಿದರವರು ಹಿಂದಣ
ಕಾಳಗದೊಳಳಿದುಳಿದ ರಾಯರ ಸಂ[1][ತ][1]ತಿಗಳೆಲ್ಲ ೨೬

ಬಂದರೈ ಚತು[2][ರ][2]ಬ್ಧಿ ಪರಿಯುತ
ದಿಂ ಧರಾಧೀಶ್ವರರು ಗಜಪುರ
ಕಂದು ಧರ್ಮಜನಾಣೆನಲು [3]ಆ[3] ದೇಶದವರೆಲ್ಲ
ವಂದಿಯಹ ಕೆಳೆಯಲ್ಲದೆಲ್ಲರು
ಸಂದಣಿಸಿ ತಮ್ಮೊಳಗೆ ಸಂಭ್ರಮ
ದಿಂದ ಯಮು[4][ರಾಜನ ತನುಜನನು ಕಂಡ][4]ರೈತಂದು ೨೭

ದರುಶನವ ಮಾಡಿದರು ರಾಯನ
ಚರಣದಲಿ ಮೈಯಿಕ್ಕಿನಿಂದಿರ
ಲರಸ ಕರ್ಪುರ ವೀಳೆಯವನಿತ್ತವರನುಪಚರಿಸಿ
[5]ಪರಿ*ಕ್ಷಿತ[5]ಗೆ ಪಟ್ಟವನು ಕಟ್ಟುವ
ಭರದಿ ಕರಸಿದೆನೀಗ ಪಾಳೆಯ
ಪುರದ ಬಹಿ[6][ರು][6]ದ್ಯಾನದಲಿ ಬಿಡಲೆಂದು ನೇಮಿಸಿದ ೨೮

ಕೇಳು ಜನಮೇಜಯನೆ ಶರಧಿಯ
ಮೇರೆ ಜರಿವಂಡದಲಿ ಭುವನ ಜ
ನಾಳಿ ಹಸ್ತಿನಪುರಿಗೆ ಬರುತಿದ್ದುದು ಸರಾಗದಲಿ
x x x x x x x x x x x x x
x x x x x x x x x x x x x
x x x x x x x x x x x x x x ೨೯

ಬಂದುದಖಿಳ ಪ್ರಜೆ ಮನೋಹರ
ದಿಂದ ಘೃತ ಮಧು ತೈಲ ನದಿಗಳ
ಗೊಂದಣದ ಪೂಗೀಫಲಂಗಳ ಫಲಫಲಾವಳಿಯ

---

1 'ತ' ಲೋಪ 2 ರಾ 3 ವಾ 4 ರಾಜತನೂಭವನ್ಕಂಡ (ಇಲ್ಲಿ ಛಂದಸ್ಸಿಗೆ ಭಂಗವುಂಟಾಗಿರುವುದರಿಂದ ಮೂಲದ ಆಶಯಕ್ಕೆ ಭಂಗಬಾರದಂತೆ ತಿದ್ದುವ ಸ್ವಾತಂತ್ರ್ಯವಹಿಸಿದೆ.) 5 ಮೂಲಪಾಠ 'ಪರಿಕ್ಷಿತ' ಎಂದೇ ಇದೆ. 'ಪರೀಕ್ಷಿತ' ಎಂಬ ಪರ್ಯಾಯ ಪಾಠವನ್ನು ಇಟ್ಟುಕೊಂಡರೆ ಛಂದೋಭಂಗವಾಗುತ್ತದೆ. ಅಲ್ಲದೆ, ನಿಷಿದ್ಧ 'ಜಗಣ'ವೂ ಉಂಟಾಗುತ್ತದೆ. ('ಕ್ಷಿ' ಅಕ್ಷರವನ್ನು ಶಿಥಿಲದ್ವಿತ್ವ ಎಂದು ಪರಿಗಣಿಸಬೇಕು.) 6 ರೋ.

ಸಂದಣಿಸಿ ಬಂಡಿಗಳ ಶೀವಿದ
ರಂದು ಮೇಣವಲಕ್ಕಿ ಸಕ್ಕರೆ
ಯಿಂದ ಬಂದುದು ಹಸ್ತಿನಾಪುರಪಟ್ಟದುತ್ಸಹಕೆ ೩೦

ಭೂಸುರಾಗ್ರಣಿಯೆನಿಪ ಮುನಿ ದೂ
ರ್ವಾಸ ಜಯಮುನಿ [1]ಗಾರ್ಗ್ಯ ಗಾಲವ[1]
ವ್ಯಾಸ ಭಾರದ್ವಾಜ [2]ವರ[2] ವಾಲ್ಮೀಕಿ ನಾರದನು
ರೋಷವರ್ಜಿತ ಭೃಗು ಸನಂದನ
[2a][ನಾ ಸನಕನವನಾದಿಯ]ಪ್ಪ ಸ[2a]
ಮಸ್ತ[3][ರಾ ವರ][3] ಮುನಿಜನಂಗಳು ಬಂದುದಿ[4][ಭ][4]ಪುರಿಗೆ ೩೧

ಅರಸ ಕೇಳಭಿಷೇಕಮಂಟಪ
ಮೆರೆದುದತಿ ವಿಸ್ತರದಿ ನೆರೆ ವೈ
ಢೂರ್ಯ ಲೋವೆಗಳಿಂದ್ರಕಾಂತದ ಸರಿಯ ನೆಲೆಗಟ್ಟು
[5]ಮರ[ಕತ]ದ[5] ಜಂತಿಗಳು ನೀಲದ
ತರತರದ ಭಿತ್ತಿಗಳು ವಜ್ರದ
ಸರಿಯ ಕಂಬಗಳೆಂಟು ಗೋಟಿನಲೆಸೆದುವಂದಾಗ ೩೨

ಹೊರೆ[6][ದ][6] ಸಾದು ಜವಾದಿ ಮೃಗ[7][ಮು][7]ದ
ಮಿರುಪ ಸಾರಣೆ ಹೊಳೆವ ಮಕುಟದ
ಗಂ[8][ಟಿ][8]ಗಳ ಹೊಂಗಳಸ[8a]ಚಿತ್ರಾವಳಿಯ ಮೇಲ್ಕಟ್ಟು[8a]
[9][ನಿರುಪಮದ][9] ಹೊಂಗೆಲಸ ತತಿಯಲಿ
ನಿರುತ ತೋರಣ ತಳಿರತೋರಣ
ಮೆರೆದವೈ ಸ[9a][ಲೆ][9a] ಮಕರತೋರಣ [9b][ವೋ][9b] ರಣದಲೊಪ್ಪೆ ೩೩

ಥಳಥಳಿಪ ನವರತ್ನಖಚಿತದ
ಕಳಶವೊಪ್ಪಿದವೇನನೆಂಬೆನು
[10][ತಳಿದ][10] ಪನ್ನೀರುಗಳ ಕುಂಕುಮ ಸಾರಣೆಯ ರಚನೆ
ತರತರದಿ ನಿಲಿಸಿದವು ಶಸ್ತ್ರೋ–
[11][ತ್ಕ][11]ರಗಳೆಲ್ಲ[12][ವು][12]ಜೋಡು ಸೀಸಕ
ಸವಗ ಮೊ[13][ಚ್ಚೆ][13]ಯ ಬಾಹುರಕ್ಷೆಯ ನಿಲಿಸಿದರು ಬಳಿಕ ೩೪

1 ಧಿಗಾರ್ಗ್ಯಾಲವ 2 ಹರ 2a ನಾದಿಯಾಗಿಪ್ಪಸ (ಸಂ.ಸೇ. ನಾಸನಕನವ) 3 (ಸಂ.ಸೇ.) 4 (ಸಂ.ಸೇ.) 5 ಮರತಕದ 6 ಗೆ 7 ವ 8 ಟು 8a ಚಿತ್ರಾವಳಿಯ ಮೇಲ್ಕಟ್ಟು (ಗಳ ಮೌಕ್ತಿಕದಾ) 9 ನಿರುನವ. 9a ನ. 9b ತೋ 10 ದಳಿಪ 11 ತ್ತ 12 ವ 13 ತ್ಸೆ.

ಪುರದೊಳಗೆ ಗುಡಿ ನೆಗಹಿದವು ಸಾ
ವಿರ ಗಜಂಗಳ ಮೇಲೆ ಚಪ್ಪರ
ತರುಣಿಯರ ನವನೃತ್ಯ ಮೆರೆದುದು ಹೇಳಲೇನೆಂದ
ಸರಳು ಚಾಪ ಕಟಾಹಿರಿಯ[1][ವು][1]
ಬ್ಬಣದಡಾಯುಧ ಸರಳು ಸೆಲ್ಲೆಹ
ಸುರಗಿ ಖಂಡೆಯ ಪಿಂಡಿವಾಳವು ಚಕ್ರಮುದ್ಗರವು ೩೫

ಅರಸ [2]ಕೇಳ್[2] ಹಕ್ಕರಿಕೆ ಹಲ್ಲಣ
ಕುರುಕು[3][ಗಳ][3] ಕಡಿಯಾಣ ಹಾಹೆಯ
ಲಿ ರಣಕಬ್ಬಿಕವಿ[4][ಗಳ][4] ಗಜ ಮೊಗರಂಬ ರೆಂ[5][ಚೆ][5]ಗಳ
ತಳಿಸಿದರು ಗಜ ತುರಗ ರಥಸಿಂ
ಗರ[6][ವ][6] ಮಾಡಿಸಿದ[7][ರು][7] ಅರಸ [8]ಕೇಳ್
[ವರ][8] ಮುಹೂರ್ತದ ಗಾರ್ಗ್ಯರನು ಕರಸಿದನು ಭೂಪಾಲ ೩೬

ಕರಣ ಯೋಗ ಶುಭಗ್ರಹಂಗಳ
ವರ ಭರಿತ ತಿಥಿ ವಾರ ಲಗ್ನವು
ಭರಿತದಿಂ ಪೇಳುವುದು ಸುರರಿರ ಯೆನಲು ಮುದದಿಂದ
ಪರಿಪರಿಯ ಗಣಿತಂಗಳಿಂದನು
ಕರಿಸಿ ಗುಣಿಸಿದರುರುವ ಲಗ್ನದ
ಹೊರಿಗೆಯನು ನಿಶ್ಚೈಸಿ ಪೇಳುವೆವೆನುತ ಮನದೊಳಗೆ ೩೭

ನೋಡಿದರು ನಕ್ಷತ್ರಯೋಗವ
ಕೂಡಿ ಸಿದ್ಧಿಸಿ* ಗ್ರಹಬಲಂಗಳ
ಕೂಡಿ ಶುಭ ಕರಣೋ[9][ಕ್ತ][9] ತಿಥಿಯನು ಚಂದ್ರತಾರೆಗಳ
ಮೂಢಗ್ರಹಯುದ್ಧವು ಸಮಾಗಮ
ಕೇಡು ಪಕ್ಷಾದಿಗಳ ಶೋಧಿಸಿ
ನೋಡಿದರು ಮರಮರಳಿ ಗಾರ್ಗ್ಯರು ಶುದ್ಧಭಾವದಲಿ ೩೮

(ಸಂ. ಸೇ.). 2 ಕೇಳು. 3 (ಸಂ. ಸೇ.) 4 ಸಳ. 5 ದೆ. 6 (ಸಂ. ಸೇ.)
ರ್ಯ. 8 ಕೇಳೈಲಗ್ನ. 9 ಕ್ತಿ.

ಟಿಪ್ಪಣಿ—೧ ೩೩-೩, ೩೪-೬, ೩೫-೫ನೆಯ ಸಾಲುಗಳಲ್ಲಿ ಪ್ರಾಸಭಂಗವಾಗಿದೆ. ೩೪ನೆಯ ಪದ್ಯದ ಪೂರ್ವಾರ್ಧ ಉತ್ತರಾರ್ಧಗಳು ಬೇರೆ ಬೇರೆ ಪದ್ಯ ಭಾಗಗಳೆಂದು ೀರುತ್ತದೆ; ಪ್ರಾಸಭೇದವಿದೆ.

ಸಕಲ *ಜ್ಯೋತಿಷ್ಯಾದಿ ಶಾಸ್ತ್ರದ
ಪ್ರಕರದೊಳಗಾರ್ರೈದು ಅತಿ[1]ಸು[1]
ವ್ಯಕತದಿಂ ನೋಡಿದವು ನಾನಾವಿಧ ಫಲಂಗಳಲಿ
ಸುಕರತಿಥಿ ಶುಭವಾರ ಯೋಗಾ
ದಿಕವು ದೇ[2][ವ][2] ಶುಭ ಗ್ರ[3][ಹೋ][3]ದಯ
ಮಕರ ಲಗ್ನ[4][ವ][4] ಗಾರ್ಗ್ಯರೊಳ್ಳಿತ್ತೆನಲು ಜೋಯಿಸರು ೩೯

ಭರದಿ ಧೌಮ್ಯಗೆ ಪೇಳಿದರು ಮಂ
ಗಳ ಸುವಸ್ತುವ ತರಿಸಿ ಬೇಗದಿ
ಮೆರೆವ ದೂರ್ವಾಕ್ಷತೆ[5][ಯ ಧವಳವ][5] [6]ಸರುಸಪಂಗಳಲಿ[6]
ತರಿಸಿ ಹೊಂಗಳಶಂಗಳಿಂದವೆ
ಸುರನದಿಯ ವಾರಿಯನು ಮಿಗೆ ವಿ
ಸ್ತರಿಸಿ ಹರಿವಿಷ್ಟರವ ಪೂಜಿಸಿ ಸಕಳ ಕೈದುಗಳ ೪೦

ಬಂದವಾಗಳೆ [7]ಧವಳ[7] ಸರುಸಪ
ವೆಂದು ದಧಿ ದೂರ್ವಾಂಕುರಂಗಳ
ತಂದರೈ ಫಲವಸ್ತುಗಳನಾಗಳು ಸಿತಾಕ್ಷತೆಯ
ತಂದು ಮಂದಾಕಿನಿಯ ಜಲವನು
ಸಂದ ಹೊಂಗಳ[8][ಶ][8]ದಲಿ ತೀವಿದ
ರಂದು ಧೌಮ್ಯ ವ್ಯಾಸ ನಾರದ ಗಾರ್ಗ್ಯರೊಂದಾಗಿ

ಕೈದುಗಳನರ್ಚಿಸಿದರಾಗಳು
ವೈದಿಕೋಕ್ತಿಗಳಿಂದ ಮಿಗೆ ನೈ
ವೇದ್ಯ [9][ಪ್ರೊಪ್ಪಿಸಿ][9] ಚಂಡಿ[10]ಕಾ[10]ದೇವಿಗೆ ಸರಾಗದಲಿ
[11]ಹೊಯ್ಯು[11] ಕುರಿಗಳ ಹೊರಗೆ [12]ಮಾರಿಯ
*ಗೈದೆ[12] ರಕ್ತಾದನವ[13]ಚ[13]ಲ್ಲಿದ
ರೈದೆ ದಿಗುಬಲಿ ಭೂತಿ ಭೂತಂಗಳಿಗೆ ಅಗಲದಲಿ ೪೧

---

1 ಸ. 2 ಹ. 3 ಹ. 4 ದ. 5 (ಸಂ. ಸೇ.) 6 ಸುರಸಶಂಗಳಿಂ. 7 ಶವಳ. 8 (ಸಂ. ಸೇ.) 9 (ಸಂ. ಸೇ.) 10 ಕ 11 ಹೊಯ್ದು 12 ಮಾಯ್ಯಾರಿಗೈದೆ 13 ದ

ವಿರಚಿ1[ಸಿ]1ತು ಶಾಸ್ತ್ರಾಗಮಾ2ದ್ಯೋ2
ತ್ಕರ ನಿನಾದದಿ ಪೂಜೆ ಮಾಡಲು
ಮೆರೆದುದಬ್ಬರವಾಗಲಾ ಅಭಿಷೇಕ ಮಂಟಪವ
ಹೊರೆಗೆ ಬಡಿಸಿದ ಭೂತಬಲಿ ಬೊ
ಬ್ಬಿರಿಯಲಗ್ಗದ ಹರೆಯ ರವ ಗ
ಬ್ಬರಿಸಿತಬುಜಭವಾಂಡ ಭವನದ ಕರ್ಣಕೋಟರವ ೪೩

ಸಾರೆ ಬಂದುದು ಲಗ್ನವೆನಲು ಕು
ಮಾರಕನ ಶೃಂಗರಿಸಿ ಧರ್ಮಜ
ಮರುತನಾತ್ಮಜ ನರ ನಕುಲ ಸಹದೇವರೊಲವಿನಲಿ
ಸಾರೆ ಕೈಗೊಡಲಖಿಳ ನೃಪರವ
ಧಾರು ಜೀಯವಧಾರೆನುತ್ತವೆ
ಸಾರಿದವು ಹರೆಗ3ಳ[ವು]3 ಬಿರುದಾವಳಿಯ ಮುದದಿಂದ ೪೪

ತಂದರಾಗಳೆ ಮಂಟಪಕೆ ಸಂ
ಕ್ರಂದನಂದನಸುತನ ಮಂಗಳ
ದಿಂದಮಳ ಕೇಸರಿಯ ಪೀಠದಮೇಲೆ ಕುಳ್ಳಿರಿಸಿ
ಬಂದರಾಗಳು ವೈದಿಕೋತ್ತಮ
ರಂದು ವೇದವ್ಯಾಸ ಧೌಮ್ಯರು
ತಂದು ಪಟ್ಟವ ಹಣೆಯಲವಚಿದರಾ ಪರೀಕ್ಷಿತಗೆ
೪೫

ವರ ಉಪನಿಷತ್ತುಗಳ ಮಂತ್ರಾ
ಕ್ಷರದಲಭಿಷೇಕವನು ಮಾಡಿದ
ರರಸ ಕೇಳೈ ನಿನ್ನ ತಂದೆಗೆ ಸಕಲ ಮುನಿನಿಕರ
ಹರಸಿ ಸೇಸೆಯನಿಟ್ಟು ಪಾಲಿಸು
ಧರಣಿಯ4[ನು]4 ನೀ5[ನೆ]5ನಲು ಉದಯದ
ತರಣಿಯಂತಿರೆ ಮೆರೆದನೈ ನಿನ್ನಾತ ಕೇಳೆಂದ ೪೬

ಭೋರೆನಲು ಗಂಭೀರ ಭೇರಿಗ
ಳಾರುಭಟೆಯಲಿ ಮೊಳಗಿದವು ರತು
ನಾರತಿಯ ತಳಿಗೆಗಳ ಪಿಡಿದೆತ್ತಿದರು ಸತಿನಿವಹ

---

1 (ಸಂ.ಸೇ.) 2 ಲೋ 3 ಳು 4 (ಸಂ.ಸೇ.) 5 (ಸಂ.ಸೇ.)

ಸಾರೆ ಸುಳಿದೆತ್ತಿದರು ಬಳಿಕು
ಪ್ಪಾರತಿಯ ನೀವಾಳಿ ಮುತ್ತಿನ
ವೀರಸೇಸೆಯನಿತ್ತರ್ಕೈ ಜಯಂಪವ ರಭಸದಲಿ ೪

ನೀಡಿದರು ಕಾಣಿಕೆಯ ಪವನಜ
ಗೂಡಿ ಧರ್ಮಜ ಪಾರ್ಥ ಯಮಳರು
ಕೂಡಿ ಸಚಿವರು ಬಳಿಕುಳಿದ ಭೂಪಾಲ ಭೂಭುಜರು
ನಾಡು ಕಾಣಿಕೆಯಿಕ್ಕೆ ಕಂಡುದು
ಕೂಡೆ ಪರಿಜನ ಸಕಳ ನಾಯಕ
ಮಾಡಿದರು ದರುಶನವನಿತ್ತೆರಗಿದುದು ಪರಿವಾರ ೪

1ವರ1 ಋಷಿಸ್ತೋಮವನು ಭೂಸುರ
ವರರ ಜನವರ್ಗವನು ನೆರೆ ಸ
ತ್ಕರಿಸಿದರು ಗೋಭೂಮಿ ಕಾಂಚನವೆನಿಪ ದಾನದಲಿ
ಮೆರೆವ ಕವಿಗಳು ಗಮಕಿ ವಾ2ದಿ2
ಪ್ರವರ ವಾಗ್ಮಿಗ3*ಳ 3ರಿತು ಕೊಟ್ಟನು
ನಿರುಪಮಿತ ವಸ್ತುವನು ಧನಕನಕವನು ಧರ್ಮಜನು ೪

ಬಳಿಕ ನಾನಾ ವಿಧದ ಯಾಚಕ
ಕುಲವನೆಲ್ಲವ ಬರಿಸಿ ಧರ್ಮಜ
ಭೂರಿದಾನವನಿತ್ತು ಅವರನು ನೃಪತಿ ಮನ್ನಿಸಿದ
ಉಳಿದರಲಿ ಕನ್ಯಾರ್ಥಿಗಳ ಕರೆ
ದಮಳ ಕನ್ಯಾದಾನವೆಂದೇ
ಯೆನಿಸಿ ಕೊಟ್ಟನು ಧನವನಾ ಯಮನಂದನನು ಬಳಿಕ ೫

ಅರಸ ಕೇ4ಳ್ಮಾ4ಂಡಳಿಕ ಮನ್ನೆಯ
ವರ ನೃಪಾಲಾ5ನೀಕವನು5ಸ
ತ್ಕರಿಸಿ ವಸ್ತ್ರಾಭರಣ ಲೇಪನ ವಸ್ತುವಾಹನವ
ಉರುತರ ಪ್ರೇಮದಲಿ ಕೊಟ್ಟನು
ಧರಣಿಯೊಡೆಯ ಪರೀಕ್ಷಿರಾಯನ
ಚರಣಸೇವೆಯ ಮಾಳ್ಪುದೆಂದನು ಧರ್ಮನಂದನನು ೫

---

1 ನಶ 2 ಂ 3 ಳ 4 ಳ್ಮ 5 ನಿಕರವನು

ದಾನ ಸನ್ಮಾನದಲಿ ಸರ್ವರ
1ದೀ1ನತನವನು ಬಿಡಿಸಿ ಧರ್ಮ2ನ2
ನೂನಧನವನು ಕೊಟ್ಟು ಸಲಹಿದನಖಿಳ ಯಾಚಕರ
ವಿನತೆಯನಯೋರುವನ ಕೂಡುವ
ಬಹಳ ತೇಜದಲಂದು ಕುಂತೀ
ಸೂನುಗಳು ಹಿಮಗಿರಿಯ ಪಯಣವ ನೆನೆದರೊಲವಿನಲಿ ೫೨

ಒಂದನೆಯ ಸಂಧಿ ಸಮಾಪ್ತ

---

1 ಚಾ 2 ಜ

ಸಂಧಿ ೨

ಸಕಳ ಭೂಪ1ರಿಗಾ1 ಪ್ರಧಾ2ನರ2
ನಿಕರ ಪರಿಜನ ಪುರಜನ3ಕೆ3 ರಾ
4ಯರಿಗೆ4 ಕೈಯೆಡೆಗೊಟ್ಟನಾ ಧರ್ಮಜ ಪರೀಕ್ಷಿತನ ಪದ

ಕೇಳು ಭೂಪ4a[ತಿ]4a ಸಕಳ ಪೃಥ್ವೀ
ಪಾಲ5[ಕ]5ರಿಗೆ *ಪ್ರಧಾನರಿಗೆ ಜನ
ಜಾಳರಿಗೆ 6ಪರಿವಾರ6 ಪುರಜನ ಭೂಜನಂಗಳಿಗೆ
ವೀಳಯವನುಡುಗೊರೆಯನಿತ್ತಾ
ಮೇಲೆ ನಿನ್ನಯ ಪಿತನನಾ ಭೂ
ಪಾಲ ಮಂತ್ರಿಕರುಗಳ ಕೈಯೆಡೆಗೊಟ್ಟನಾ ಭೂಪ ೧

ಈತ ತರಳನು ರಾಜಕಾರ್ಯದ
ಧಾತುವರಿಯನು ನಿಮ್ಮ ಶಕ್ತಿ
ವ್ರಾತವಲ್ಲದೆ ಬೇರೆ ಕಾಣೆನು ಯಿವಗೆ ಶಕ್ತಿಯನು
ಮಾತುಗಳ ಕಲಿಕಾಲದೊಳಗ
ಖ್ಯಾತಿಯಿಲ್ಲದೆ ಧರ್ಮವಿಡಿದಿಹ
ನೀತಿವಿದರನು ಕಾಣೆನೆಂದನು ಧರ್ಮನಂದನನು ೨

ಕೇಳಿದೈ ನೃಪತಿಲಕ ಕಲಿಯುಗ
ಕಾಲವ7ದು7ತಾನತಿ ಭಯಂಕರ
ಕೇಳಿದವರಿಗೆ ಕಿವಿಗೆ ಕರ್ಕಶವದರ ಚಾರಿತ್ರ
ಹೇಳಲನೃತದ 8ಪರಿ8ಯನವಗುಣ
ಶೀಲವನ್ನಯ ತನ್ನ ದುಃಸ್ಥಿತಿ
ಚಾಳ ಜನಿಸಿದ ತವರುಮನೆ ತಾನೆಂದನಾ ಭೂಪ ೩

---

1 ರನಾ. 2 ನಾ. 3 ದ. 4 ಯರ 4a,5 (ಸಂ. ಸೇ.) 6 ಪರಿವಾರಜನಕೆ
7 ನು. 8 ಪೆರೆ,

1ಇಂತು1 ಬಹ ಕಲಿಯುಗದೊಳಗೆ ಯಿರ
ಲೆಂತು ಘಟಿಸುವುದಲ್ಲದಾ ನಿ
ಶ್ಚಿಂತರಾಗಿಯೆ ಹಿಮಗಿರಿಯ ದಾಟುವೆವು ನಾಕದಲಿ
ಕಂತುಪಿತನೋಲಗದೊಳಗೆ ನಿ
ಶ್ಚಿಂತರಮೃತಶರೀರರಾಗಿ ಯ
ನಂತ ಸುಖದಿಂದಿಹೆವು ದಿವಿಜಾನೀಕದೊಡಗೂಡಿ ೪

ಹಿಂದೆ ನಮ್ಮಯ ಸೇವೆ 2ಮಾಡಿರು
ವಂದದಲಿ2 ನೀವೀ ಪರೀಕ್ಷುವ
ಮುಂದಿ3ರಿಸಿ3ಕೊಂಡಿಹುದು ಕಾಲದ ಮಹಿಮೆಯನು ಹಿಡಿದು
ಒಂದ4ಕೊಂದಾಡ4ದಿರಿ ಈ ಶಿಶು
ವೆಂದುದನು 5 ನೀವ್5 ಮೀರಲಾಗದು
ಯೆಂದು ಕೈಗಳ ಮುಗಿದು ಧರ್ಮಜ ನುಡಿದನವರೊಡನೆ ೫

ಜನಪನಾಡಿದ ಮಾತ ಕೇಳುತ
ತನತನಗೆ ಸುಯ್ವುತ್ತ ತಮ್ಮಯ
ಮನದೊಳಗೆ ಮರುಗುತ್ತ ವಿಧಿಯನು ಬೈದು ಶಪಿಸುತ್ತ
ಇನಿತು 6[ಕಾಲವು]6 ನಿಮ್ಮ *ಶ್ರೀಪದ
ವನ7ರು[ಹ]ದ7 ಸೇವೆಯಲಿ ಮೆಚ್ಚಿದ
ಮನವನಗಲಿರಲಾರೆನೆಂದಳಲಿದರು ಸಕಲ ಜನ ೬

ಹೇಳಲೇನದ8[ನೃಪ]8 ಸಕಲ ಜನ
ಜಾಳ ತೊಡಗಿದ ದುಃಖ9[ವನು]9ಕ
ಣ್ಣಾಲಿ ನೀರುಗುಳಿದವು ನೆರೆಹೊನಲಾಗಿ ಹರಿವುತಿರೆ
ಗೋಳಿಡಲು ಮಿಗೆ ಜನರ ದುಃಖವ
ಕೇಳುವವರಾರಿನ್ನು ಶಿವಶಿವ
ಬಾಲ10ವೃದ್ಧ [ಸಮಸ್ತ] ಜನಗಳು10 ಸಹಿತವೆನೆ ಮುನಿಪ ೭

ಮರುಗದಿರಿ ನೀವೆಮ್ಮ ಪಯಣದ
ಭರವಸವ ಕೆಡಿಸದೆ ಪರೀಕ್ಷಿತ
ವರತನಯ *ಶ್ರೀಪಾದಸೇವೆಯ ಮಾಡಿಕೊಂಡಿಹುದು

1 ಇಂದು 2 ಮಾಡುವಂದದಲಿ 3 ಟ್ಟು 4 ಕೊಂಡಾಡ 5 ನೀವು 6 ಕಾಲ್ವ 7 ರುದ
8 (ಸಂ. ಸೇ.) 9 (ಸಂ. ಸೇ.) 10 ವೃದ್ಧಾ ಜನಂಗಳು.

ಅರಸನೀತನು ನಿಮಗೆ 1ನಾವ್1ನ
ಮ್ಮರಸ ಮುರಹರನಿದ್ದ ಠಾವಿಗೆ
ತೆರಳುವೆವು ಕರು ತಾಯನೊಲಿಯಸಃ ಅರಸು2ವವೊ2ಲೆಂದ ೮

ಜನಪ ಚಿತ್ತ್ರೈಸಾವು3ಬಪ್ಪೆವು3
ವನಜನಾಭನ ಕಾಣಿಕೆಗೆ ಭೂ
ಜನಸಹಿತವೀ ಧರೆಯ ಬಿಡುವೆವು ನಿಮ್ಮ ಸಂಗಾತ
ದಿನಗತಿಯಲ್ಯೈದುವೆವು ನಾಕವ
ನೆನಲು ಭೂಮೀಪಾಲನೆಂದನು
ವನಧಿಗಧಿ4ಧಾತ್ರಿಗೆ ಜನಂಗಳ4ಗಂದು ಕೈಮುಗಿದು ೯

ನೀವು ನಮ್ಮೊಡನ್ಯೈದಿ ಬಂದವ
5ರಾವು5ಗಡ ಕಾಲದೊಳು ಹಿಂದಿಹ
ಭೂಮಿಪರು ಪರಿ*ಕ್ಷಿತನನಲಸದೆ ಕೂಡಿಕೊಂಡಿಹುದು
ಸೇವೆ ಮಾಡಿರಲೆಮ್ಮನ್ಯೈತಂ
6[ದಾ ಕಮಲ]6ಲೋಚನನ ಶ್ರೀಪದ
ತಾವರೆಯ ತೋರಿಸಿದವರು ನೀವೆನುತ ಕೈ7[ಮು]7ಗಿದ ೧೦

ಆ ಸಮಸ್ತ ಜ8ನೌಘ8ದಾ ಬಲು
*ಕ್ಲೇಶವನು ವಿಸ್ತರಿಸಲರಿಯೆನು
ಭೂಮಿಪಾಲಕ ಕೇಳು ಜನಮೇಜಯ ಮಹೀಪಾಲ
ಮೀಸಲಳಿಯದೆ ನಯನಜಲಧಾ
ರಾಸಮುದ್ರವದಾಯ್ತು ತಮಗೆನು
9ತೈಸೆ9 10[ಮಮ್ಮಲ ಮರುಗಿ]10ತಖಿಳ ಜ11ನೌಘ11 ದುಗುಡದಲಿ ೧೧

ಇಂದೆಮಗೆ ಸಂತೋಷವಡಗಿತು
ಇಂದೆಮಗೆ ಸಿರಿ ಜಾರಿತಕಟಕ
ಟೆಂದು ಮಿಗೆ ತಾಯಗಲಿದಾ ಕರುವೆಂದು ಗೋಳಿಡುತ
ಮಂದಿ ತಮತಮಗೊರಲುತಿದ್ದುದು
ತಂದೆ ಕೇಳು ಪರೀಕ್ಷುರಾಯನ
ಯೆಂದು ವೈಶಂಪಾಯ ಮುನಿ ನುಡಿದನು ನೃಪಾಲಂಗೆ ೧೨

---

1 ನಾವು 2 ವಾವೊಳ 3 ಬೊಪ್ಪೆವು 4 ಧಾತ್ರಿ ಜನರಗಳ 5 ರಾಲಿ 6 ದಾವರೆಯ
7 [ಸಂ. ಸೇ.] 8, 11 ನವುಘ 9 ತ್ಯೆದೆ 10 ತಮಗೆನು

ಮರುಗುತಿಹ ನೃಪತಿಗಳ ಹಸ್ತಿನ
ಪುರಜನಂಗಳ ಧರೆಯ ಜನರನು
1[ಬರೆಕರಸಿದನು]1 ಮಂತ್ರಿನಿಕರವನಾಪ್ತಜನಗಳನು
ವರಪುರೋಹಿತರಾದಿಯಾಗಿಹ
ಅರಮನೆಯ ವಿಶ್ವಾಸಿಗಳ 2[ಕರೆ
ದುರೆ]2 ಪರಿಕ್ಷಿತನಾಗು ನಿಮ್ಮ 3[ವನೆನುತ]3 ಕೈಮುಗಿದ ೧೩

ಭೂಸತೀವಲ್ಲಭನೆ ಚಿತ್ತೈ
ಸಾ ಸಮಾಧಾನದಲಿ ವೇದ
ವ್ಯಾಸ ನಾರದ ಧೌಮ್ಯ ಮೊದಲಾದಖಿಳ ಋಷಿಗಳಿಗೆ
ಭೂಸತೀವಲ್ಲಭನು ಕೈಮುಗಿ
ದಾಶಿಷವನಾ ಹಾನಿವೃದ್ಧಿಗ
ಳೈಸೆ ನಿಮ್ಮದು ನಿಮ್ಮ ಕರುಣವೆ ಹರಣ ನಮಗೆಂದ ೧೪

ನೋಡಿ ಸಲಹುವುದಿವಗೆ ವಜ್ರದ
ಜೋಡು ನಿಮ್ಮಾಶೈಕೆಯಲ್ಲದೆ
ಕೂಡಿಕೊಂಡಿಹ ಬುದ್ಧಿ ಬಲಯುತರಿಲ್ಲ ಮತ್ತಿವಗೆ
ರೂಢಿಯೊಳು ಹಿಮಕಿರಣ ಕಂದಗೆ
ಬಾಡಲೀಯದೆ ಬಹಳ ಕೃಪೆಯ ಕೃ
ಪಾರಸೇಕ್ಷಣದಿಂದ ಸಲಹುವುದೆನುತ 2ಕೈಮುಗಿದ2 ೧೫

ಜನಪನಾಡಿದ ಮಾತ ಕೇಳುತ
ಮುನಿನಿಕರ ಮರುಗುತ್ತ ಶಿವಶಿವ
ಯೆನುತ ಜಡೆಗಳನಲುಗಿ ಮೂಗಿನಲಿಟ್ಟ ಬೆರಳಿನಲಿ
ದಿನದಿನಕೆ ದಿನವಟ್ಟತಹುದೆಂ
ದೆನುತ ವರ್ಣಾಶ್ರಮದ ನೆಲೆ 3ಹೋ
ಯ್ತೆನುತ3 ದುಮ್ಮಾನದಲಿ ಮುಳುಗಿದ 4[ರಂದು]4 ಮುನಿನಿಕರ ೧೬

ಇನ್ನು ನಡೆವುದೆ ಯಾಗಯೋಗವು
ಇನ್ನು ನಡೆವುದೆ ಧರ್ಮವ್ರೊಳಿತಾ
ಯ್ತಿನ್ನು ನಡೆವುದೆ ಸಕಳ 5[ವೇದವು]5 ಶಾಸ್ತ್ರ ಪೌರಾಣ

1 x x x x x x x 2 (ಕೈಮುಗಿದ) + ನವಸೀಶಾ 3 ಹೋಯಿತೆಂದೆನುತ 4 ರು
5 (ಸಂ.ಸೇ.)

ಇನ್ನು ನಡೆವುದೆ ನಿತ್ಯಕರ್ಮವು
ಭಿನ್ನವಾಗದೆ ಮಾಣ್ಬುದೇ ತ-
ಮ್ಮನ್ನ1ಠಿಕೆಯದೆಸು1ತ ಮುನೀಶ್ವರ2[ರ]2ಳಲಿ ಮರುಗಿದರು ೧೭

ಕೃತಯುಗದ ಕಾಲದೊಳು ಧರ್ಮ
ಸ್ಥಿತಿಗೆ ಕಂಟಕವಿಲ್ಲ ತ್ರೇತೆಯ
ಲತಿಶಯದ ಧರ್ಮಸ್ಥಿತಿಗೆ ಭಯವಿಲ್ಲ ದ್ವಾಪರದ
ಗತಿಯ ಕೇಳ್ವರೆ ಧರ್ಮದೊಳಗತಿ
ಹಿತವ ನಡೆಯದೆ ಕೆಟ್ಟು ನಡೆವಾ
ಕ್ಷಿತಿಯ ಜನ ತಾವಲ್ಲ ಕಲಿಯುಗಧರ್ಮವದು ಬೇರೆ ೧೮

ಇಲ್ಲ ಧರ್ಮವ ಬಯಸುವರು ತಾ
ವಿಲ್ಲ ಕಲಿಕಿಯ ಕಾಲವವಗಡ
ಬಲ್ಲಿದಪ್ಪುದಧರ್ಮ ಭೂಮಿ3[ಯ]3 ಜನದ ಮನದೊಳಗೆ
ಎಲ್ಲಿ ನೋಡಿದಡಲ್ಲಿ ದುರ್ಜನ
ವಲ್ಲಿ ಹಬ್ಬಿಹುದಲ್ಲಿ ಮಿಗೆ ಬೇ
ರಲ್ಲ ಪುಣ್ಯದ ಬಳಕೆಯೆಂದಳಲಿತು ಋಷಿಸ್ತೋಮ ೧೯

ಹಿಂದಣಾ ಯುಗ ಮೂರರಲಿ ನೃಪ
ರಿಂದ ಧರ್ಮವು ಪಾಲಿಸುತ್ತಿಹು
ದಿಂದು ಧರ್ಮದ ಪಾಲಕರು ನೀವಳಿಯಲಿನ್ನಾರು
ಎಂದು ಋಷಿಜನ ಮರುಗುತಿರೆ ಯಮ
ನಂದನನು ಕೈಮುಗಿದು ಬಳಿಕಿಂ
ತೆಂದು ಬಿನ್ನಹ ಮಾಡಿದನು ಮುನಿಗಳಿಗೆ ಯಮಸೂನು ೨೦

ನಿಮ್ಮನುಷ್ಠಾ4[ನ]4ವ್ರತಕೆ ಷಟ್
ಕರ್ಮ ಪಂಚಕಯಜ್ಞ ನಿಯಮದ
5[ನೊ]5ಮ್ಮೆಯಾ ಕೆಡದಂತೆ ನಡೆಸುವನೀ ಪರೀಕ್ಷಿ6[ತ]6ನು
ನಿಮ್ಮ ಶ್ರೀಪದವನಜಸೇವಾ
ಧರ್ಮವನು ಬಿಟ್ಟಿರ್ದರೆಮ್ಮಯ
ಮೊಮ್ಮನಲ್ಲಿವನೆಂದ ಧರ್ಮಜ ಕೈಗಳನು ಮುಗಿದು ೨೧

---

1 ಯನು ಮನು 2 (ಸಂ.ಸೇ.) 3, 4, 5, 6, (ಸಂ. ಸೇ.)

ಮತ್ತೆ ಕೇಳು ಪರೀಕ್ಷುರಾಯ ನೃ
ಪೋತ್ತಮನ ನಂದನನೆ ವಿಹ್ವಲ
ಚಿತ್ತರಾಗದೆ ಪಾಂಡುನಂದನರಮಳ ಹರುಷದಲಿ
ಹೊತ್ತ ನೂಕದೆ ಸ್ವರ್ಗದಾ ಪದ
ದತ್ತ ನೆನೆವುತ ದ್ರೌಪದಿಯ ಮನ
ದತ್ತ ನಡೆದರು ಬುದ್ಧಿಗಲಿಸಿದರಂದು ದ್ರೌಪದಿಗೆ ೨೨

ಹಿಂದೆ ನೀನಿರು ಲಲನೆ ಸ್ವರ್ಗದ
ಬಂದಿಗಾರರು ನಾವು ದೇವಕಿ
ನಂದನನ ಶ್ರೀಪದದ ಕಮಳವ ಕಾಂಬ ತವಕದಲಿ
ಇಂದು ವೃಂದಾರಕರ ಸುಖದೊಳ
ಗೊಂದಿಯಮೃತವ ಸೇವಿಸುತ್ತಿಹೆ
ವೆಂದಡಬುಜದಳಾಕ್ಷಿ ಮರುಗಿದಳಕಟ ವಿಧಿಯೆನುತ ೨೩

ಬಹಳ ಕಾನನವಾಸವನು ಅನು
ಭವಿಸಿ ಮತ್ತದನುಳಿದು ಕೌರವ
ಮಹಿಪತಿಯ ಸೋದರರು ಕರೆದರೆ ಕದನಭೂಮಿಯಲಿ
ಬಹಳ ಯುದ್ಧವ ಮಾಡಿಕೊಂಡಿರಿ
ಧರೆಯ ಬಿಡುವರೆ ಸ್ವರ್ಗದೊಳು ರಮಿ
ಸುವರೆ ಹಾ ಹಾ ಯೆ1[ಂದು ಮರುಗಿದಳಾಗಳಿಂದುಮುಖಿ]1 ೨೪

ಹಲವು ಮಾತೇಕಿನ್ನು ನೀನಿರು
ಭೂಮಿಯಲಿ ನಿನ್ನಾತ್ಮಜಾತನ
ಫಲದ 2ಬಳವಿ2ಗೆಯಾ 3ಪರೀಕ್ಷುವ3 ಸಲಹಿಕೊಂಡಿಹುದು
ಇಳೆಯ ಪಾಲಿಸು ಹಸ್ತಿನಾಪುರ
ದೊಳಗೆ ಸುಖವಿಹುದೆನಲು ಮತ್ತಾ
ಲಲನೆ ಕೈಗಳ ಮುಗಿದು ಬಿನ್ನಹಮಾಡಿದಳು ತರಳೆ ೨೫

ಬಾಳಿಕೆ4[ಗೆ]4 ವಿಸ್ತಾರ ವಿಭವವ
ಹೇಳಿದಿರಲಾ ಯೆನಗೆ ಶಿವಶಿವ
ಕೇಳಿ ಪರಿಣಾಮವನು ತಾಳ್ದೆನಗಾಯ್ತು ಪರಿಣಾಮ

1 ಯೆಂದಳಿಂದುಮುಖೀ 2 ಬೆಳವಿ 3 ಪರೀಕ್ಷೆಯ 4 (ಸಂ. ಸೇ.)

ಕಾಳನಾಡದಿರಕಟ ವಿಧವೆಯ
ರಾಳುವರೆ ರಾಜ್ಯವನು ಸುಡಲಾ
ಬಾಳಿಕೆಯ ಸಾಸೇನನೆಂಬೆನೆನುತ್ತ ಮರುಗಿದಳು ೨೬

ಒಡೆಯರೆವಗಿನ್ನಾರು ನೀವಿ
ನ್ನಡವಿ 1ಹೊ1ಕ್ಕರೆ ತನಗೆ ನಿಮ್ಮಡಿ
ಯೊಡಲ ಬಳಿನೆಳಲಿಂಗೆ ಗತಿ ಬೇರುಂಟೆ ನೋಡುವರೆ
ಬಿಡೆನು ನಿಮ್ಮಯ ಚರಣವನು ನಿ
ಮ್ಮೊಡನೆ ಬಂದಪೆನೆನ್ನನೊ2ಯ್ಯದೆ2
ಬಿಡಲು ಗರಳವ ಕುಡಿವೆನೆಂದಳು ದ್ರೌಪ3ದೀ3 ದೇವಿ ೨೭

ನೀವಗಲ4ಲೆ4ನ್ನಯ ಶರೀರವ
ಪಾವಕಂಗಾಹುತಿಯ ಕೊಡುವೆನು
ಜೀವದಾಶೆಯಲುಳಿದೆನಾದರೆ ನಿಮ್ಮ ಮೇಲಾಣೆ
5ನೀವು*ಪ್ರಾಣಸಮೀರಣವೆನಗೆ5
ಜೀವ ತೊಲಗಿದರುಳಿಯಬಲ್ಲೆನೆ
ಜೀಯ ಚಿತ್ತೈಸಾಸು ಒಪೆನೆಂದೆರಗಿದಳು ಪದಕೆ ೨೮

ಎನಲು ಸಹದೇವಾಂಕನೆಂದನು
ವನಜವದನೆಗೆ ಬಟ್ಟೆ ತಾನೆಂ
ದನುನಯವು ತಾನೆಲ್ಲಿಯದು ದುರ್ಘಟ *ಕ್ರೂರ ಮೃಗರಾಜ
ವನಗಜವು ಬೆಳೆದಿಹವು ಕದಳಿಯ
6ನರಿವ6 ಕತ್ತರಿ 7ರಾಣಿಗ7ಲ್ಲೀ
ವನವು ಹಿಮಗಿರಿಯಲ್ಲಿ ತತ್ಸಲ ಸನ್ನಿವೇಶದಲಿ ೨೯

ಅಲ್ಲಿಗಲ್ಲಿಗೆ ಭೂತ ಸಂತತಿ
ಯಲ್ಲಿಗಲ್ಲಿ8[ಗೆ]8 ದೈತ್ಯರುಪಟಳ
ವಲ್ಲಿಗಲ್ಲಿಗೆ ಭೈರವನ ಬಲು ಜಟ್ಟಿಗನ ಬಲುಹು
ಅಲ್ಲಿಗಲ್ಲಿಗೆ ಶಾಕಿನೀಜನ
ವಲ್ಲಿವಲ್ಲಿಗೆ 9ಖಚರ9ರಾಲಯ
ವಲ್ಲಿ ಹೊಗಲಸುಚಿತನೆನಲು ಯಿಂತೆಂದಳಿಂದುಮುಖಿ ೩೦

---

1 ಯೊ 2 ಯ್ಯನೆ 3 ಪಾ 4 ನೆ 5 ನೀವೆನಗೆ ಪ್ರಾಣಾಸಮೀರಣ 6 ಶಿರವ
7 ವಾಣಿಯ 8 (ಸಂ.ಸೇ.) 9 ಸಚಿವ

1ಆವ ಭಯ1 ಘನವಾದಡೆಯು ನೀ
ಣಾವ ದುರ್ಘಟವಾದಡೆನ್ನ ಯ
ಜೀವ ನೀವೈವರುಗಳಲ್ಲದೆ ಬೇರೆ ಗತಿಯುಂಟೆ
ಆವ ಪರಿಯಲಿ ಬಪ್ಪೆನಲ್ಲದೆ
ದೇವ ಸೈರಿಸಲರಿಯೆನೆನೆ ರಾ
ಜೀವಮುಖಿಯನು ನಗುತ ಬರಹೇಳಿದನು ಯಮಸೂನು ೩೧

ಗಂಧಿ ಸೌಗಂಧಿಯ ಹಿಡಿಂಬಿಯ
ನಂದು ನಿಲಿಸಿದರಲ್ಲಿ ಸುರಪ2[ನ]2
ನಂದನನ ವಲ್ಲಭೆ ಸುಭದ್ರಾದೇವಿ3[ಯ]3ನು ಕರೆಸಿ
ಹಿಂದೆ ನೀನಿರು ನಿನ್ನ ತನುಜನ
ನಂದನನ ಸಲಹೆನುತ ಪಿತೃಪತಿ–
ನಂದನನು ನೇಮಿಸಲು ಬಳಿಕಿಂತೆಂದಳಾ ರಾಣಿ ೩೨

ಎರಡನೇ ಸಂಧಿ ಸಮಾಪ್ತ

---

3 ಅಭಿಯುವದು 2, 3 (ಸಂ. ಸೇ.)

ಸಂಧಿ – ೩

ಪರಿಜನವ ಬೀಳ್ಕೊಟ್ಟು ಧರಣೀ
ಧರನ ನೆರೆ ಸಂತೈಸಿ ಧರಣೀ
ಧರನು ಹರಿಸನ್ನಿಧಿಗೆ ಹಸ್ತಿನಪುರವ ಪೊರಮಂಟ ಪದ

ಧರೆಯ ಸಂಪತ್ತೆಲ್ಲವನು ಬಿ
ಟ್ಟರರೆ ನಡೆವಿರೆ ಸ್ವರ್ಗಭೂಮಿಗೆ
ತರಳನಿವನೀ ರಾಜ್ಯವನು ಸಂತೈಸಲರಿಪನೆ
ಮರುಳುತನದಾಲಾಪ ಚಿತ್ತವ
ಬೆರಸಿತೇ ಹಾ ಯೆನುತ ಕಂಬನಿ
ಯೆರಡು ಕಡೆಯಲಿ ಸುರಿಯಲೊದವಿದಳಾಗ ಸೌಭದ್ರೆ ೧

ಒದರದಿರು ಸೌಭದ್ರೆ ನಾಕದ
ಪದವಿಯನು ಬೇಡಲ್ಕೆ ನಡೆವೆವು
ಪದುಮನಾಭನ ಬಳಿಗೆ ನೀನು ಪರೀಕ್ಷಿದ್ರಾಯನನು
ಹದುಳವಿಡಿವುದು ನೀನು ಪೌತ್ರನ
ಪದವಿಯನು ನೋಡುವುದು ಭೂಲೋ
ಕದಲಿ ಸುಖಿ[1]ಸುವು[1]ದೆಂದು ನೇಮವನಿತ್ತ ಯಮಸೂನು ೨

ಆಯಿತಿದು ನಿರ್ವಾಹ ನಮಗಿ
ನ್ನಾಯಿತಿದು ಪರಿಣಾಮ ಧರಣಿಗೆ
ರಾಯನಾದ ಪರೀಕ್ಷಿತನಯನು ನಮಗೆ ಭಯವುಂಟೆ
ಶ್ರೀಯನನುಭವಿಸುವಡೆ ನಮಗಿ
[2]ನ್ನಾಯಿತೇತಕ್ಕೆ[2]ನುತ ಕಮಳದ
ಳಾಯತಾಂಬಕಿ ತಾಳದಳು ಮನದೊಳಗೆ ಬಲು ವ್ಯಥೆಯ ೩

ತಂಗಿ ಬಿಡು ದುಗುಡವನು ರಾಯ[3]ರ[3]
ಪುಂಗವನ ರಿಪುರಾಯಮದಗಜ
ಸಿಂಗವನು ಸಲಹ[4]ದಿ[4]ರೆ ಸಂತಾನಕ್ಕೆ ಲೋಪವಲಾ

---

1 ಸೂ 2 ನ್ನಾಯ್ತೇಕೆಯಾಯ್ತೆ 3 ನ 4 ದ

ತುಂಗ ವಿಕ್ರಮನುಳಿವುಪಾಯ1[ದ]1
ಭಂಗಿಯನು ಮಾಡೆನುತ ಬೆಸಸಿದು
1aತುಂಗ1a ಧರ್ಮಕುಮಾರ ನಿಲಿಸಿದನಾ ಸುಭದ್ರೆಯನು ೪

ಭರದಿ ಪಾಂಡುಕುಮಾರಕರು ತಾ
ಯರಮನೆಗೆ ನಡೆತಂದು ಕುಂತಿಯು
ಚರಣವಲಿ 2ಪೊಡವಟ್ಟು2 ಬಿನ್ನೈಸಿದರು ಕಾರ್ಯವನು
ನರನ ಮಗನ ಕುಮಾರನನ್ನಾ
3ದ3ರದಿ ಸಲಹಿ ಮಹೀತಳವನಾ
ಪರಮ ವಿಭವವ ನೋಡಿ ಸುಖವಿರಿ ತಾಯೆ ನೀವೆಂದ ೫

ತಾಯೆ ನಿಮ್ಮಯ ಚರಣಬಲದಿಂ
ದೇವಕೀಸುತನಲ್ಲಿಗೈದುವೆ
ವಾವು ಸುರಪದಕೆಮಗೆ ನೇಮವ ಕೊಡಲುಬೇಕೆಂದ
ಹಾವು ಹಿಡಿದಂದ4[ದ]4ಲಿ ಕುಂತೀ
ಭಾವ ಬೆಚ್ಚಿತು ಧರೆಯ ಪಾಲಿಸು
ವೀ ವಿಭವವನು ಬೀಳುಗೊಂಡಿರೆ ಯೆಂದು ಬಿಸುಸುಯ್ದು ೬

ಹಿಂದೆ ವನವಾಸದ5[ಲಿ ಪರಿಪರಿ]5
ದಂದುಗವನನುಭವಿಸಿ 6ರಣದಲಿ6
ಬಂಧುಗಳ ವಧೆಮಾಡಿ ಧರೆಯೇಕಾಧಿಪತ್ಯದಲಿ
ನಿಂದು ಕಡೆಯಲಿ ರಾಜ್ಯಭೋಗವ
ಹಿಂದುಗಳೆವುದು ಬುದ್ಧಿಯೇ ಹೇ
ಳೆಂದು ಕುಂತಿದೇವಿ ನುಡಿದಳು ಧರ್ಮನಂದನಗೆ ೭

ತಾಯೆ ಬಿನ್ನಹ ಧರ್ಮಕಾಲವು
ಹೋಯಿತಿನ್ನೀ ಕಲಿಯ ಕಾಲದ
ಲಾಯತಿಕೆ ತಮಗಲ್ಲ ಸತ್ಯದ ನೀತಿ ದುಸ್ಸಂಗ
7ಬೀಯವ7ಹುದೀ ಕಾಯಸೌಖ್ಯದ
ವಾಯದಭಿಲಾಷೆಯಲಿ ಕಮಳದ
ಳಾಯತಾಕ್ಷನ ಪದವ ಪಡೆವರೆ ಬೀಳುಗೊಡಿಯೆಂದ ೮

1 (ಸಂ. ಸೇ.) 1a ಭಂಗ 2 ಪೊರವಂಟು 3 ಭ 4 (ಸಂ. ಸೇ.) 5 x x x x x (ಸಂ. ಸೇ.) 6 ಚರಣದಲಿ 7 ವಾಯುದ

ಆದಡೆಲಿ ಮಕ್ಕಳಿರ ತನ್ನನು
ಮೇದಿನಿಯಲೇ ಬಿಸುಟು ಸ್ವರ್ಗಕೆ
ಹೋದೆ1ಪೆ1ಂಬುದು ನೀತಿಯೇ 2ನೀವ್2 ಪಾಂಡುರಾಯನನು
ಆ ದಿವಿಜರೊಡಗೂಡಿ ಯೀ ಕಮ
ಳೋದರನ ಪದಕಮಳದಲ್ಲಿ3[ಂ]3
ಗೈದಲಿಕೆ ನಿಮ್ಮೊಡನೆ 4[ನಾ]4 ಬಹೆನೆಂದಳಿಂದುಮುಖಿ ೯

ಬಳಿಕ ಪಾಂಡುಕುಮಾರಕರು ನಿಜ
ಲಲನೆಸಹಿತರಮನೆಯ ಬಾಗಿಲ
ಕಳೆದು ಮುಂದಣ ರಾಜಬೀದಿಗಳೊಳಗೆ ಬರುತಿರಲು
ಇಳೆಯ ಪತಿಗಳು ಹೊದ್ದಿ ಕೈಗೊ
ಟ್ಟೊಲಿದು ನೆಲನುಗ್ಗಡಿಸೆ ನಭಮಂ
ಡಲವನಂಡಲೆಯಿತ್ತು ಪಾತಕಕೋಟಿಗಳ ರಭಸ ೧೦

ಪೊಡವಿ 5ಬಾಯ್ಬಿಡೆ5 ಮೊರೆವ ವಾದ್ಯದ
ಬಿಡುಸರದ ಕಹಳೆಗಳ ಭಟ್ಟರ
6[ಗಡ]6ಬಡೆಯ ರವ ತುಡುಕಿತಬುಜಭವಾಂಡಮಂಡಲವ
ನಡೆದರಾ ಸ್ವರ್ಗಾದಿ ಭೋಗವ
ಹಿಡಿವ ಭರದಲಿ ಪಾಂಡುತನಯರು
ಒಡಲ ಮೇಲೆಳ್ಳನಿತು ಮೋಹ6a[ವ]6a ನೋಡದಾ ಬಳಿಕ ೧೧

ಬಂದು ಹಸ್ತಿನಪುರದ ಕೋಟೆಯ
ಮುಂದೆ ನಿಂದರು ನೋಡಿ ಬಾಗಿಲಿ
ಗಂದು ಕುಂತೀನಂದನರು ಸಹಿತಲ್ಲಿ ತತ್ಪುರಕೆರಗಿ ಕೈಮುಗಿದು
ಇಂದು ಪರಿಯಂತರವು ಜನಿಸಿದ
ಇಂದುಕುಲರಾಯ7ರ7 8ತವರ್ಮನೆ8
ಯಿಂದು ನಿಮ್ಮನು ಬೀಳುಗೊಟ್ಟೆವೆನುತ್ತ ನಮಿಸಿದರು ೧೨

ಹರುಷವಡಗಿತು ಮಂತ್ರಿವರ್ಗಕೆ
9ಕರಣಿಕ9ರಿಗಾಪ್ತರಿಗೆ ಹಸ್ತಿನ
ಪುರಜನಕೆ ಪರಿಜನಕೆ ಭೂಜನರಾದಿಯಾದವರು

---

1 ನೆ. 2 ವ 3 (ಸಂ.ಸೇ.) 4 (ಸಂ.ಸೇ.) 5 ಬಾಯಿವಿಡೆ 6, 6a (ಸಂ.ಸೇ.) 7 ರಂ
8 ತವಮನೆ 9 ಕರುಣಿಕ

ಮರುಗಿತಷ್ಟಾದಶ ಜನಾವಳಿ
ಸುರಿವ ಕಂಬನಿ ಕೋಡಿವರಿಯಿತು
ಧರಣಿಪಾಲಕನವರ ದುಃಖವ ನಿಲಿಸುತಿಂತೆಂದ ೧೩

ನೆರೆದ ಜನನಿಕರಕ್ಕೆ ತನ್ನಯ
ಕರವ ಮುಗಿದನು ಧರ್ಮನಂದನ
ನೊರಲಲಾಗದು ನಮ್ಮ ಪಯಣಕೆ ನಾವು ಮುರಹರನ
ಸಿರಿಪದಾಬ್ಜವ ಕಾಂಬ ಭರದಿಂ
ತೆರಳುವರಿಗುಪಚರಿಸಿ ಕಳುಹದೆ
ನೆರಹಿಕೊಂಡಳುತ[1]ಪ್ಪಿ[1]ರೇ ನೀವೆಂದನಾ ಭೂಪ ೧೪

ಧರೆಯ ಋಣಸಂಬಂಧ ತೀರಿದ
ಬಿರಬಹುದೆ ನಾವಿನ್ನು ವಿಬುಧ
ಬೆರಸಿ ಸ್ವರ್ಗದ ಭೋಗಸುಖವನುಭವಿಪ ಕಾರಣದಿ
ಮುರಹರನ ಸಾರುವದು ಮತ್ತೀ
ಸ್ವರನ ಭಜಿಸುತ್ತಮಳ ಸುಖದೊಳು
ರುಷದಿಂಪೊಳಗಿಸಬೇಹುದು ಹರಿಯ ಚರಣವನು ೧೫

ಈ ವ್ಯಥೆ [2][ಯು ತಾ][2]ಯಾಕೆ ನಿಮಗೆನು
ತಾ ಮಹೀಪತಿ ಹದುಳವಿಡಲಾ
ಭೂಮಿಪತಿ [3]ನಿಜಲೌಘ[3] [4][ವದು][4]ಮೊದಲಾದ ಸಕಲಜನ
ಭೂಮಿಗಿಲ್ಲದ ದುಃಖವಾಗ್ನಿ
ಸ್ತೋಮ ತೆರೆಗಳು ಮುಳುಗುತಿದ್ದುದು
ವೈಮನಸ್ಯದ ಲಳಿಯ[5]ಲಹರಿಯ[5] ಸುಳಿಯ ಬಳಗದೊಳು ೧೬

ಭೀಮ ನಿಲಿ[6]ಸೀ[6] ಮಂದಿಯನು ಸು
ತ್ರಾಮ ಸನ್ನಿಭ ನಿಲಿಸು ನಾವೇ
ಕಾಮಪಿತನೆಡೆಗಾಗಿ[7][ನಡೆವೆವು][7] ನಡೆವರೇಕಿವರು
ಸೋಮವಂಶದ ರಾಯರೊಳಗು
ದ್ದಾಮನಲ್ಲಾ ಈ ಪರೀಕ್ಷಿತ
ಪ್ರೇಮಿಕನು ತಾನಲ್ಲವೇ ಹೇಳೆಂದನಾ ಭೂಪ ೧೭

---

1 ಪ್ಪ 2 (ಸಂ.ಸೇ.) 3 ನಿಕರೌಘ 4 (ಸಂ.ಸೇ.) 5 ಸಿದ 6 (ಸಂ.ಸೇ.)

ಬಳಿಕ ಭೀಮಾರ್ಜುನರು ನಿಲಿಸಿದ
ರಳುವ ಜನರನು ಹಸ್ತಿನಾಪುರ
ದಳನಿಯಲಿ ಮುಂದೊಂದು ಗಾವುದ ಬಟ್ಟೆಯಗಲದಲಿ
ಹಳೆಯರಾಪ್ತರನಾ ಪ್ರಧಾನರ
ಕುಲವ ನಿಲಿಸಿದನೆಂದು ಕೇಳ್ಳೈ
ಇಳೆಯ ಪತಿ ನೀನೆಂದು ವೈಶಂಪಾಯ ಮುನಿ ನುಡಿದ ೧೮

ಬರುತಿರಲು ಮುಂದೆರಡು ಗಾವುದ
ಭರದಿ ಕಳುಹಿದರಲ್ಲಿ ಬಾಹ
ತ್ತ್ರರ ನಿಯೋಗದ ಮಣಿಯ ಸಹವಾಸಿಗಳ ವರ್ಗವನು
1ಕರಣಿಕ1ರನಾ ಸಂಧಿವಿಗ್ರಹ
ಉರುವ ಶಿಷ್ಟರ ನಿಲಿಸಿದರು ತ
ಮ್ಮರಮನೆಯ ವಿಶ್ವಾಸಿಗಳ ನಾನಾಧಿನಾಯಕರ ೧೯

ಬಳಿಕ ನಿಮ್ಮಯ್ಯಂಗೆ ಧರ್ಮಜ
ತಿಳುಹಿದನು ವರರಾಜನೀತಿಯ
ಲಲಿತವಚನಾಮೃತದ ಮಳೆಯನು ಸುರಿವೆ ತಾನೆನುನತ
ಇಳೆಯನುರ ಹೇಳಲ್ಕೆ ಮತ್ತಾ
ಯಿಳೆಯ ಪತಿ ಕುಡಿಕುಡಿದು ಕಿವಿಯಲಿ
ಆಲಸದಿದ್ದನು ತನ್ನವರ ಚಾರಿತ್ರದಾ ಕಥೆಯ ೨೦

ಮಗನೆ ಕೇಳ್ಳೈ ನಿನ್ನ ಕೆಳೆಯರ
ಸೊಗಸಿ ರಕ್ಷಿಸು ದೇಶವೆಲ್ಲವ
ಸುಗಮದಲಿ ನೀ ಮಾಳ್ಪ ತೆರನವ ನೋಡಿ ಸಲಹುವುದು
ಜಗವ ಪಾಲಿಸದಿರಲು ಜಯಸಿರಿ
ಯಗಲಿಹೋಹುದು ನಿನ್ನ ಮನದಲಿ
ನೆಗಳಲಾಗನ್ಯಾಯಕೋಟಿಯನೆಂದನಾ ಭೂಪ ||೨೧||

ನಿನ್ನ ಆಣೆಯ ಮಿಕ್ಕು ಮಾಡುವ
ಭಿನ್ನರನು ಕಾಯದಿ2[ರು]2 ಟಂಕದ
ಹೊನ್ನಿನೊಳು ಕೀಳಾಗಿ ಬೆರಸುವರನ್ನು ಉಳುಹದಿರು

1 ಕರುಣಿಕ 2 (ಸಂ. ಸೇ.).

ಚಿನ್ನದಲಿ ಮಾಡುವುದು ಧರ್ಮವ
ನಿನ್ನ ಮನದಲಿ ಖೋಡಿಯಿಲ್ಲದೆ
ನನ್ನಿಗೆಡದಿರು ಭೂಪ ನೀನೆಂದರಸ ನೇಮಿಸಿದ ||೨೨||

ಚಿಕ್ಕ ಮನೆಹೊಗಿಸದಿರು ಖೂಳರ
ಸೊಕ್ಕಿಸದಿರೈ ಭಂಡ ಮಿಂಡ ಜ
ನಕ್ಕೆ ಮೇಳದ ಸಲುಗೆ ಯೆಂಬುದನೀಯದಿರು ಮಗನೆ
ಚುಕ್ಕಿಗರ ಕೆಳೆಗೊಳ್ಳದಿರು ನೆರೆ
ಮಿಕ್ಕು ನಿನ್ನಯ ಪದವಿ ಕೇಳಲು
ಮಕ್ಕಳಾಟಿಕೆಯಿಂದ ದುರ್ಜನರೊಡನೆ ಬೆರಸದಿರು ||೨೩||

ಸೋಲದಿರು ಗೆಲುವಲ್ಲಿ ಸುಜನರ
ನಾಳಿಗೊಳ್ಳದಿರೆಲೆ ಮಗನೆ ನೀ
ತ್ರಾಣದಲಿ ಸಂಗರವ ಹೊಗದಿರು ಮುಂದೆ ಉರವಣಿಸಿ
ಕಾಳಗಕ್ಕಿದಿರಾದ ಭೂಪರ
ಮೇಲುದಳ[1]ವ[1]ರಿದೊತ್ತುವದು ಸಂ
ಮೇಳವಾಗದಿರನ್ಯ ವಧುಗಳನೆಂದನಾ ಭೂಪ ||೨೪||

ನಗೆನುಡಿ[2]ಗೆ[2] ಕುಂದದಿರು ನಿನ್ನೋ
ಲಗದೊಳನವರತದಲಿ ಕೇಳಾ
ಮಗನೆ ಸರಸ ವಿನೋದ ಸಮ್ಮೇಳದಲಿ ನೀನಿಹುದು
ಉಗುಳಲಾಗದು ಮಂತ್ರಶಕ್ತಿಯ
ನಗೆಗೆಡೆಯ ಮಾಡದಿರು ಸನ್ಮಾ
ರ್ಗಿಗಳ ಬುದ್ಧಿಯ ಧರಿಸಿ ನೀ ನೋಡುವುದು ಕೇಳೆಂದ ||೨೫||

ನುಡಿಯಲಾ[3][ಗದ][3] ಸತ್ಯವನು ಕೇಳ್
[4]ನಡೆ[4]ಯಲಾಗದಧರ್ಮದಲಿ ಯೆಡೆ
ಗೊಡದಿರಂತಸ್ಥವನು ಕಪಟಿಗಳಾದವರ ಕೂಡೆ
ಬಿಡುವುದೈ ಖಳನಿಕರವನು ನಿ
ನ್ನೊಡನೆ ಬಂದರೆ ಲೌಕಿಕರಿಗೆಡೆ
ಗೊಡದಿರೈ ನೃಪನೀತಿ ಯಿದು ಕಳೆಂದನಾ ಭೂಪ ||೨೬||

---

1 ಯು 3 (ಸಂ. ಸೇ.) 4 ನುಡಿ

ಸುಜನ ಜನವನು ಮನ್ನಿಸೈ ಸ
ದ್ವಿಜರ ಪೂಜಿಸು ದೇಶದೊಳಗಣ
ಪ್ರಜೆಯನಾದರಿಸದೆ ಮದಾಂಧದಿ ಘಾಸಿಮಾಡದಿರು
ವಿಜಯಸಿರಿ1ನೆಲಸಲ್ಕೆ1 ನಿನ್ನಯ
ಭುಜವನೆಡೆಗೊಡು ಮಗನೆ ನೀ ನೀ
ಜಗದ ಸೇವಕ ಜನಕೆ ಜೀವಿತವಿತ್ತು ಸಲಹೆಂದ ||೨೭||

ಭೇದಕರ ಬುದ್ಧಿಗಳ ನೀನೊಲಿ
ದಾದರಿಸದಿರು ಜಾತಿಸಂಕರ
ಪಾಪವರ 2ಶಿ2ಕ್ಷಿಸುವುದೈ ವರ್ಣಾಶ್ರಮಂಗಳೊಳು
ಆದರಿಸುವುದು ಮಿತ್ರಜನವನು
ಕೈದುಗಳಲೆಚ್ಚರಿಕೆಗುಂದದಿ
ರಾ ದುರಾತ್ಮರ ಹೊಗಿಸದಿರು ನಿನ್ನೋಲಗದೊಳೆಂದ ||೨೮||

ಕಂದ ಕೇಳಾ ಸ್ವಾಮಿದ್ರೋಹರ
ಕಂಡು ನಿನ್ನೊಳಗಿರಿಸದಿರು ಸಾ
ನಂದದಲಿ ನಂಬುಗೆಯನಿತ್ತರಿಗಳುಪದಿರು ಮಗನೆ
ಸಂದ ಹಳೆಯರ ಹಳಿಯದಿರು ಮನ
ಬಂದ ಹಿತವರ ಬೆಗಡುಗೊಳಿಸದಿ
ರೆಂದು ಧರ್ಮಜ ಬುದ್ಧಿಕಲಿಸಿದ ನಿನ್ನ ತಾತಂಗೆ ||೨೯||

ಆರು ಗುಣವನು ನಾಲ್ಕು ಬುದ್ಧಿಯ
ಯಿರವ ಕಂಡೆನು 2ಸೋ2ಪಚಾರವ
ನರಿಯೆನೆಂದೆನೆ ನಗುತ ಬಿನ್ನೈಸಿದನು ಸುರರಾಯ ೫

ವೈತರಣಿ ನದಿಯೆಂಬುದೆಲ್ಲಾ
ಪಾತಕವನೊಳಗೊಂಡು ಹರಿ3ದಿದೆ3
ಈ 4ತೊ4ರೆಯನುತ್ತರಿಸಿ ಮಾನವಜನ್ಮದಿಂದಾದ
ಸೂತಕವ ಕಳೆದೆಮ್ಮ ದೇವ
ವ್ರಾತದೊಳು ಮಿಗಿಲೆನಿಪ ತನುವಿ
ಖ್ಯಾತದಿಂ ತೊಳತೊಳಗಿ ಬೆಳಗುವನೆಂದನಮರೇಂದ್ರ ೬

ಈ ನದಿಯನುತ್ತರಿಸಿ ಬಾ ಯೆನೆ
ಭೂಮಿಯರಸನು ನದಿಯನಿಳಿದನು
ಮಾನಿಸದೆ ಹಾಯಲ್ಕೆ ಮುಳುಗಿಸಿಕೊಂಡುವಳಸನನು
ಏನನೆಂಬೆನು ನದಿಯು ದಾಂಟಿದ
ಮಾನನಿಧಿ ವೈಚರ್ಮ ಕಳೆಯ
ಲ್ಕನಿಮಿಷಾಧಿಪ ಕಂಡು ಶಿವ ಶಿವ ಯೆನುತ ಬೆರಗಾದ ೭

ಎಲೆ ಮುನೀಶ್ವರ 5ಆವ5 ಕಾರಣ
ಸುಲಿದುಹೋದುದು ಚರ್ಮವಾ ನೃಪ
ತಿಲಕ ಧರ್ಮಪರೋಪನಿಷ್ಠಂಗೆನಲು ಮುನಿ ನುಡಿದ
6ಕ[ಳ]6ನೊಳಗೆ ಕಾ7[ಮತ್ತ]7ಲಾ ನೃಪ
ತಿಲಕ ಧರ್ಮಜ ರಾಜಗುರುವಿಂ
ಗಳುಕದೆಂದನು 'ಬನ್ದು ದಶ್ವತ್ಥಾಮ ಗಜ'ವೆಂದು ೮

1 (ಸೂ. ಪಾ.) ಸಿರಿಪದದ ಅರವಿಂದದ 2 ಸೋ. 3 ದನೆ. 4 ತಿ 5 ದಾ 6 ಣ
7 (ಸಂ. ಸೇ.)

ಆ ನುಡಿಯ ದೆಸೆಯಿಂದ ಅಂತಕ
ಸೂನುವಿನ ನಿಜ ಸತ್ಯ ಸತ್ಯಕೆ
ಹಾನಿ ಬಂದುದು ಮುರವಿರೋಧಿಯ ಮಾಯೆ ಮರೆಯಿಂದ
ಆ ನೃಪಾಲನ ಚರ್ಮ ಸುಲಿದುದು
ಈ ನದಿಯ ಜಲದೊಳಗೆ ಭೂಪತಿ
*ಶ್ರೀ ನೃಸಿಂಹಾ ಯೆನುತ ತಡಿಸಾರಲ್ಕೆ ಭೂಪಾಲ ೯

ಎಲೆ ಮಹಾದೇವೆನುತ ಅಮೃತದ
ಮಳೆಯ ಸುರಿ[1][ದಾ][1]ಖಂಡಲನು ನೃಪ
ತಿಲಕನಂಗ[2]ವ[2] ದಿವ್ಯತನುವನು ಮಾಡಿದನು ಬಳಿಕ
ಹೊಳೆವ ತನುಕಾಂತಿಯಲಿ ಮಂಗಳ
ವಿಳಸ[3][ದ][3]ಸದೃಶವಾಣಿಯಲಿ ನೃಪ
[4][ಕುಲಿಶ][4]ಧರನಡಿಗೆರಗಿದರೆ ತೆಗೆದಪ್ಪಿ ಹರುಷದಲಿ ೧೦

ತಂದೆ ಕೇಳೈ ನಿನ್ನ ಸತ್ಯಕೆ
ಇಂದು ಸರಿಯಾರುಂಟು ಭೂಪರು
ದುಂದುಮಾರ ಭಗೀರಥರು ನಳನಹುಷ ಪುರುಕುತ್ಸ
ಸಂದ ಸಗರ ಪುರೂರವ ಹರಿ
ಶ್ಚಂದ್ರ ರಾಯರೊಳಗ ಳಿಯ ನೀ
ನೆಂದು [5][ಸುರಪತಿ][5]ಹೊಗಳಿ ಮುಂಡಾಡಿದನು ಧರ್ಮಜನ ೧೧

ಸೂರಿಯನ ಕುಲದವರು ಸರಸಿಜ
ವೈರಿಕುಲಜರು ಮೆರೆವ ಉಭಯದ
ಧಾರಿಣೀಶರು ವಾಜಿಮೇಧವ ಮಾಡಿದವರುಗಳು
ಈ ರಥವ ಕಂಡರಿಯರಿಂದಾ
ಭಾಸುರದ ಸುಕೃತಿಗಳು ನಿನ್ನವೊ
ಲಾರು ಹೇಳೆಂ[6][ದು ಯಮಜನ][6]ಕೊಂಡಾಡಿದನು ವಜ್ರಿ ೧೨

ಸ್ಯಂದನವನೇರಯ್ಯ ರಾಯ ಮು
ಕುಂದನೋಲಗಕೈದುವೆವು ನಡೆ
ಯೆಂದು ನೇಮಿಸಿಯಿರಲು ಇದಿರಲಿ ನಿಂದ ಶುನಕನನು

---

1 ದನು. 2 ದ. 3 (ಸಂ.ಸೇ.) 4 ನೃಪತಶ್ರೀಲ [ನೃಪ ದುಶ್ಶೀಲ ಎಂದು ಇದ್ದಿರಬಹುದೆ ?] 5 (ಸಂ.ಸೇ.) 6 ದೆನುಜನನು

ಮುಂದೆಯೇರಿಸಿ ರಥವನಿದ ಬಿ
ಟ್ಟೊಂದು ಹಜ್ಜೆಯನಿಡೆನು ಶ್ವಾನನ
ಎಂದು ಧರ್ಮಜನ ಕೂಡೆ ನಸುನಗುತಾಗ ಯಿಂತೆಂದ ೧೩

ಒಡೆಯರಿದ್ದಾ ನಾಯಿ ತಾನಿದ
ನೊಡನೆ 1ಪೊಯ್ದರೆ1 ಕದನ ತಪ್ಪದು
ಕಡೆಗೆ ನೋಡುವೊಡೊಯ್ಯಲಾಗದು ಯಿದನು ಯೆಂದೆನಲು
ಬಿಡು ಮರುಳೆ ಈ ನಾಯ ತಾನತಿ
ಕ2ಡಿ2ದು ಕಷ್ಟವು ನೋಡಲಾಗದು
ನುಡಿಯಲಾಗದು ಯೆಂದನಾ ಸುರಪಾಲನರಸಂಗೆ ೧೪

3ಇದನು3 ಕರೆವುದು ನೀತಿಯೇ ನಿನ
ಗಿದನು ಪುಷ್ಪಕದೊಳಗೆ ಇರಿಸೆಂ
ಬುದು ಮಹಾ ರೌರವವು ಯೆನಲಿಂತೆಂದ ಯಮಸೂನು
ಕೆರಳಿದನು ಸುರಪತಿಯು ಧರ್ಮಜನು
ಪರಮಪುರುಷನು ನೀನು ನಿನ್ನಂ
ತರವನಿದರಲಿ 4ಕಳೆ4ಯಲಾಗದು ಧರ್ಮವಲ್ಲೆಂದ* ೧೫

ಅರಸ ಕೇಳಾ ಇದನು 5[ಕೊಂ]ಡರೆ5
ನೆರೆ ಸುಕೃತನಾಶನವು ಪಾತಕ
ಕಿರದೆ ಬಟ್ಟೆಯ ತೋರ್ಪ ಜೀವವು ಮತ್ತೆ 6ಕೇಳ್ನೀನು6
ಅರಿದರಿದು ಈ ನಾಯನೊಯ್ದರೆ
ಪರವು ಕೆಡುವುದು ತನ್ನ ವಂಶಕೆ
ಕೊರತೆಯಹುದಿದನರಿತು ಬಿಡುವುದು ಯೆಂದನಾ ಸುರಪ ೧೬

7[ನಾನು]7 ಈ ನಾಯ 8[ನ್ನು ಒಯ್ಯದೆ]8
ನಾನು ಬಾರೆನು ಯೆಂಬ ಮಾತಿಗೆ
ಕೀನಸನು ಮೆಚ್ಚಿದನು ತೋರಿದನಲ್ಲಿ ನಿಜತನುವ

---

* ಈ ಪದ್ಯದ ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಕಂಡು ಬರುವ ಪ್ರಾಸಭೇದವನ್ನೂ ಪೂರ್ವಾರ್ಧದಲ್ಲಿಯ ಯಮಸೂನು ಹೇಳಿದನೆಂಬ ಮಾತು ಉತ್ತರಾರ್ಧದಲ್ಲಿ ಇಲ್ಲದಿರುವುದನ್ನೂ ಗಮನಿಸಿದರೆ 15 ನೆಯ ಪದ್ಯದ ಉತ್ತರಾರ್ಧ ಮತ್ತು ಅದರ ಮುಂದಿನ ಪದ್ಯದ ಪೂರ್ವಾರ್ಧಗಳು ಪ್ರತಿಕಾರನ ಪ್ರಮಾದದಿಂದ ಲುಪ್ತವಾಗಿರುವಂತಿದೆ. 7ನೆಯ ಸಂಧಿಯ 6ನೆಯ ಪದ್ಯದಲ್ಲಿಯೂ ಇದೇ ಬಗೆಯ ಅಸಾಂಗತ್ಯ ಕಂಡು ಬಂದಿದೆ.

1 ವೈದರೆ 2 ರವು 3 ಇದು 4 ಕಳೆ 5 ಕಂಡರೆ (+ ಪರಕೆ ಸಲ್ಲದು) 6 ಕೇಳಿನ್ನೂ, 7 (ಸಂ.ಸೇ.) 8 ನೊಯ್ಯದಿರೆ

ನೀನೆನಗೆ ಮಗ ಮನವ ನೋಡ
ಲ್ಕಾನು ಬಂದೆನು ಯೆಂದು ಅಂತಕ
ಸೂನುವನು ತೆಗೆದಪ್ಪಿ ಮುಂಡಾಡಿದನು ವಿನಯದಲಿ ೧೭

ಬಳಿಕ ತಾ ಪುಷ್ಪಕವನೇರಿದ
ಕುಲಿಶಧರನೊಡನರಸ ಹಯಕುಲ
ಲುಳಿಯ ಲಾವಣಿಗೆಯಲಿ ಹೇಷಾರವದ ಹಲ್ಲಣದ
ನಲವು ಮಿಗೆ ಹಿಂದಣದ ವಾಘೆಯ
1[ಸು]1ಲಿದು ಚಮ್ಮಟಿಕೆಯಲಿ 2ಯಿಳೆಯು
ಬ್ಬಳಿಯೆ2 ಬೆದರಿ3ಸೆ3 ಕುಣಿವುತಿರ್ದವು ಚಪಳಗತಿಗಳಲಿ ೧೮

ನೆಗೆದು ಪುಷ್ಪಕವಂದು ಬರುತಿರೆ
ಗಗನದಲಿ ತೋರಿದನು ಸುರಪತಿ
ಅಗಣಿತದ ಬೆಳಗೆಸೆವ ಹೊಂಗಳಶಂಗಳೋಳಿಗಳ
ಸುಗಮ ಬಂಧದ ತೆನೆಯ ತೆಕ್ಕೆಯ
ಝಗಝಗಿಪ ನವರತ್ನ ಚಿತ್ರಾ
ವಳಿಯ ವೃಷಭಧ್ವಜದ ಕಂಬವ ನೋಡು ನೀನೆಂದ ೧೯

ಅದು ಮಹೇಶ್ವರನಿಪ್ಪ ಗಿರಿಯಂ
ತದುವೆ ಕೈಲಾಸಾದ್ರಿ ಕೆಲದಲಿ
ಅದು ಮುಕುಂದನ ಲೋಕ ಕೆಲದಲಿ ಬ್ರಹ್ಮಲೋಕವದು
ಅದರ ಕೆಲದಲಿ ತೋರ್ಪುದಮರಾ
ವತಿ ಮಹಾಪಟ್ಟಣವು ಮತ್ತಂ
ತದರ ಕೆಲದಲಿ ತೋರುತಿದೆ 4ಸಪ್ತ4 ಮುನಿಪುರವೆಂದ ೨೦

ಉತ್ತಮ5ದ5 ವ್ರತನಿಷ್ಠರೊಂದೆಸೆ
ಯಿತ್ತ ದೀಕ್ಷಿತರೀ ವಿಮಾನದ
ಲಿತ್ತ ನೋಡ್ಯೆ ವಾಜಿಮೇಧವ ಮಾಡಿದವರೆಂದ
ಮತ್ತೆ ನೋಡಾ ಭೂಪ ತರತರ
ದತ್ತ ರತುನಾಲಯವದ6ನು6ಪಿಡಿ
ದತ್ತಲೀಕ್ಷಿಸು ರತುನ ಕಾಂಚನ ಮಾಡದೊಡ್ಡುಗಳ ೨೧

---

1 ನೊ. 2 (ಸೂ.ಪಾ.–'ಯಿಳೆಯುಬ್ಬಳಿಯೆ' – ಎಳೆಯುವ ಉತ್ಸಾಹ ತಗ್ಗುವಂತೆ). 3 ಸಿ
4 ಸಯ್ಯ 5 ವ್ರ 6 ರ

ಇವರು1[ವರ ಸೋಮಾಶ್ವ]1ಮೇಧ
ಪ್ರವರವರ್ಗವು ಈ ವಿಮಾನ2ದ2
ನವರತುನ ಮಾಡದಲಿ ಪಿತೃಮಾತೃಗಳ ಭಕ್ತರಿಗೆ
ದಿವಸದಲಿ ಸತ್ಯದಲಿ ನಡೆವರ
ನಿವಹವನು ಮೇಲಿನ್ನು ನೋಡಾ
3ಭ3ವನದಲಿ ನೀನೀ ಹರಿಶ್ಚಂದ್ರಾದಿ ರಾಯರನು ೨೨

ಹಿರಿದು ದಾನ ವ್ರತ ತಪೋನಿ
ಷ್ಠರನು4ವರ4 ಮಣಿಮಾಡದಲಿ ಆರಿ
ವರಿಸದಿದ ನೋಡೆಂದನಾ ಭೂಪಂಗೆ ಸುರಪಾಲ
ಶರಧಿನೇರೆಯೊಳ್ಳಿದೆ ನಿನ್ನಯ
ಪರಮ ಕೀರ್ತಿಯನೆಲ್ಲ ಧರಣಿಗೆ
5ಹರಹಿಡಲ್ಕೆ5ಡೆಯಿಲ್ಲ ಲೋಕದ ಕೀರ್ತಿಯಂತರದಿ ೨೩

ಭೂತಳಾಧಿಪ ಕೇಳು ಮತ್ತಂ
ತೀತ ವೇದಾಧ್ಯಯನ ಪರನಂ
ತೀತ ನಿರ್ಮಲ ಸತ್ಯಭಾಷಿತ ನೀತಿಶುಚಿಯೀತ
ಈತ ನಿರ್ಮತ್ಸರನು ಬಳಿಕಂ
ತೀತ ನಿರಹಂಕಾರಿ ನಿಸ್ಪೃಹ
ನೀತ ನಿಯತನು ಭೂತದಯೆಯುಳ್ಳಾತ ನೋಡೆಂದ ೨೪

ಈತ ಪಂಚಮ ಯಜ್ಞದಲಿ ನಡೆ
ವಾತ ಈತನಹಿಂಸಕನು ತಾನಂ
ತೀತ ಗುರುಪಾದಬ್ಜ ಸೇವಕನೀತ ಸಮದೃಷ್ಟಿ
ಈತ ಶಿವಭಕ್ತಾತಿಶಯವು
ಳ್ಳಾತನೀತನು ವಿಪ್ರರಕ್ಷಕ
6ನೀತನತಿಥಿ6ಸು 7[ಪೂ]ಜಕನು7ನೋಡೆಂದನಮರೇಂದ್ರ ೨೫

ಅವರದಂತಿರಲಿತ್ತ ತೋರುವೆ
ಭುವನಪತಿ ನೋಡಿತ್ತ ಘನ ರೌ
ರವದ ನರಕದಲಾಳುತಿಪ್ಪಾ ಜೀವರಾಶಿಗಳ

1 ಸೋಮವಾಜಿ 2 ದಿ 3 ಭು 4 ವರೆ 5 ತರಹಿಡಲ್ಕ 6 ಈತನ೨೨
7 ಸುಜಿತನು

ವಿವರಿಸುವೆನಿನ್ನೆನುತ ತೋರಿದ
ನಿವ[1]ನು[1] ಭೂತದ್ರೋಹಿ ತಾನಂ
ತಿವನು [2][ದಾರಾಜಾರ ?][2] ಬಳಕವ ಬರಿ[3]ಯಹಂ[3] ಕಾರಿ ೨೬

ಇತ್ತ ನೋಡೈ ಭೂಪ ಹಿರಿಯರ
ಮತ್ಸರಿಸಿ ನುಡಿದವನು ಇವ ತಾ
ನತ್ತಲೈದನೆ ಅಧಿಕ ಹಿಂಸಕ ವಿಪ್ರಘಾತಕನು
ಈತನತಿ[4][ಥಿಯ ಜರಿದವನು ಉ][4]
ದ್ವೃತ್ತಮಹಿಮನು ಇವನು ಪಿಸುಣನು
ಈತ ನೋಡಾ ಇತ್ತಲಿಪ್ಪನು ಧರ್ಮಕಂಟಕನು ೨೭

ಇವನು *ಸ್ವಾಮಿದ್ರೋಹಿ ತಾನಂ
ತಿವನು ಬಹುಕಾಮುಕನು ನೋಡಿಂ
ತಿವನು [5]ಮಿಥ್ಯಾ[5]ವಾದಿ ಭೂಮಿಯನೊತ್ತಿಯಾಳಿದವ
ಇವನು [6]ಉಪಕಾರೋಪ[6] ಘಾತಕ
[7]ನಿ[7]ವನು [8]ಅಗ್ರಾಹಾರ[8] ಕೆಡಿಸಿದ
[9]ನಿ[9]ವನು ಗ್ರಾಮಿಣಿಯಿವನಸತ್ಯನು ಯಿತ್ತನೋಡೆಂದ ೨೮

ಇವನು ಮಿತ್ರದ್ರೋಹಿ ಮತ್ತಿಂ
ತಿವ ಕೃತಘ್ನನು ದೂರದಲಿ ತೋ
ರ್ಪವನು ನೆರೆ ವಿಶ್ವಾಸಘಾತಕ ಕ್ರೂರ ಶಠನಿವನು
ಇವನು ಮಿಥ್ಯಾವಾದಿಯೆನಿಪವ
ನಿವನು [10]ಮಿಗವತ್ಯಾರ್ಥಿ[10]ವ್ರತಭಂ
ಗವನು ಮಾಡಿದನಿವನು ಮಹ *ಕ್ರೂರಾತ್ಮ ನೋಡೆಂದ ೨೯

ಜಾತಿಸಂಕರನಿವನು ಯಿವಪಿತೃ
ಮಾತೃಘಾತಕನಿವನು ಪಿಸುಣನು
ನೀತಿಬಾಹಿರನಿವನು ಬಹುಕುಟಿಲಾತ್ಮನಿವನೀತ
ಭೂತದಯೆಯಿಲ್ಲಾತ ತಾನಂ
ತೀತನತಿ[11]ನಿಂದಕ[11]ನು ಮಿಗೆ ಕಾ
ಮಾತುರನು ಇವ ನೋಡು ಭೂಪತಿಯೆಂದನಮರೇಂದ್ರ ೩೦

1 ರು 2 ಜಾರದ್ವಾರ 3 ಯ ಅಹಂ 4 ತಿಜನಿಸನು ಇವನೆ 5 ವಿ 6 ಪರ ಉಪಕಾರ
7, 9 ಇ 8 ಅಗ್ರಾಹಾರವನು 10 (ಸೂ. ಸಾ.) ಮಿಗೆಯತ್ಯಾರ್ಥಿ 11 ನಿಂದ್ಯಕ

ಇತ್ತ ನೋಡಾ ಸುರವಿಘಾತಕ
ಇತ್ತ ನೋಡಾ ವೇದನಿಂದಕ
ಇತ್ತ ನೋಡಾ ಹರ1 ಮುಕುಂದರ1 ಭೇದ2ಮಾಡಿ2ದವ
ಇತ್ತ ನೋಡಾ ರಣದೊಳೋಡಿ3ದ3
ಕುತ್ತು ದಲೆಯ ಮಹೇಶರಿರವನು
ಇತ್ತ ನೋಡಾ ಶರಣುಪೊಕ್ಕನ4 ಕಾಯ4ದನ ವಿಧಿಯ ೩೧

ಅರಸ ಕೇಳಾ ನರಕದಂಡನೆ
ಪರಿಯಲಿಪ್ಪತ್ತೆಂಟು ಕೋಟಿಯೊ
ಳುರುಳಿ ಮುಳುಗಿಹ ಪಾತಕರ ಪರಿವಿಡಿಯುಪದ್ರಗಳ
ಪರುಠವನ ವಿವರಿಸಲು ತೀರದು
ಹಿರಿಯ5[ನೋಡಲಗಮ್ಯ ತಾಪಿವು]5
ಪರಮ ಧನ್ಯನು 6[ನೀನು]6 ಸಾಕೆನ್ನೆಂದನಮರೇಂದ್ರ ೩೨

ಈ ನರಕದರ್ಶನವು ಧರ್ಮಜ
ಗೇನು ಕಾರಣವಾಯಿತೆಂಬುದ
7[ನೀ]7ನೆನಗೆ ಬೆಸ8ಸ8ನಲು ನಸುನಗೆ ಮೊಳೆಯ ಸುರನಾಥ
9ನೀನು9 ರಣದೊಳಗಂದು ದ್ರೋಣನ
ಸೂನು ಹುದಿದನುಯೆಂದು ನುಡಿದಾ
ವಾಣಿಯಂಪವೆ ಬಂದುದಿದು ತಾನೆಂದನಮರೇಂದ್ರ ೩೩

ಅರಸ ಕೇಳಾ ನರಕಕೋಟಿಯ
ಇರವುಗಳನದನೇನ ಹೇಳುವೆ
ಕುರುನೃಪಾಲನು ತೋರ್ಪ ನಾಯಕನರಕಮಧ್ಯದಲಿ
ಹೊ*ರಳ್ವ ಹದನನು ನೋಡು ಯೆನಲುರ
ವಣಿಸಿ ಪುಷ್ಪಕವಲ್ಲಿಗೆಯು ನೆರೆ
ಬರಲು ಸುರಪತಿ ತೋರಿದನು ಯಮಸುತಗೆ ಕೌರವನ ೩೪

ಅಕಟ ಕುರುಪತಿ ನೀನು ಮಾಡಿದ
ಸುಕೃತವೆಳ್ಳನಿತಿಲ್ಲಲಾ ಹುಳು
ನಿಕರ ಕೀವಿನ ಕುಂಡದಲಿ ಮುಳುಗಿಹರೆ ನೀನೀಗ

---

1 ಪ...ರ 2 ವಾಡಿ 3 ದ (+ ವ) 4 ಕಾಯಿ 5 ನೋಡುವೊಡಗೆವ್ಯವು 6–7 (ಸಂ.ಸೇ.) 8 ಸುವುದೆ 9 ನಿರುತ

ಸಕಲಧಾತ್ರೀರಮಣ ಶಶಿಕುಲ
ನಿಕರ ಕಲ್ಪಕುಜಾತ ನಿನಗಿದು
ಸುಖವೆ ಹೇಳೈ ನಿನಗೆ 1ಕೇಳೈ1 ರಾಯ ಕೌಂತೇಯ ೩೫

ಎನೆ ಸುಯೋಧನನೆಂದ ನೀನಾ
ರೆನಲು ನಾನು ಯುಧಿಷ್ಠಿರನು ಕೇಳ್
ಜನಪ ನೀನಿಹರೇ 2ಮಹಾ2ರೌರವದ ನರಕದಲಿ
ಇನಿತು ದಿನ ಶಶಿಕುಲದಿ ರಾಯರು
ಜನಿಸಿ ಯೊಳ್ದವರಿಂಗೆ ಕಂಡೈ
ಘನ ನರಕ 3ದುಷ್ಕೀರ್ತಿಯವ3 ನೀನೆಂದನವನೀಶ ೩೬

ಕೇಳು ಧರ್ಮಜ ಅಂದು ಭಾಳದ
ಮೇಲೆ ವಿಧಿ ಬರೆ4ವುದನುಘ4ಟ್ಟಿಸಿ
5ನೀಳ5 ಬರೆಯಲು ನಮ್ಮ ವಶವೇ ಪೂರ್ವಭಾಷಿತ6ವು6
ಮೂಲ ಫಲವಿದ ನಾವು ಮಾಡಿದ
ಕಾಲದಲಿ ಭುಂಜಿಸದೆ ಉಳುಹಲು
ಮೇಲೆ ಭುಂಜಿಪರಾರು ಕೇಳೆಂದನು ಸುಯೋಧನನು ೩೭

ನೀನು ನರಕದಲಿಹರೆ ಬಾಯೆ
ನ್ನಾನೆ ಬಾರೈ ಶಶಿಕುಲಾಂಬುಜ
ಭಾನು ಬಾರೈ ತಂದೆ ಒಂದಾಗಿಹೆವು ಸ್ವರ್ಗದಲಿ
ಮಾನನಿಧಿ ಬಾರೆನಲು ಕೌರವ
ತಾನು ನುಡಿದನು ಭೀಮ7ನೊಡನಿಹ7
ಮಾನ ಸೌಖ್ಯದ ಸ್ವರ್ಗದಿಂದೀ ನ8[ರ]8ಕ ಸಾಕೆಂದ ೩೮

ನೀನು ಸಹಿತವೆ ನಡೆವೆನಲ್ಲದ
ಡಾನು ಸ್ವರ್ಗದ ಸುಖವನೊಲ್ಲೆನು
ಮಾನನಿಧಿ ನಿನ್ನನುಜರೆಲ್ಲರು ಸಹಿತ ಬಾರೆನಲು
ನಾನು ಬಾರೆನು ನವಗೆ ನಿವಗಿ
ನ್ನೇನು ಸಖತನ ನೀನೆ ಹೋಗೆನೆ
ದಾನವಾಂತಕ ಮೆಚ್ಚಿದನು ಕೌರವನ9ಛಲಪದಕೆ9 ೩೯

1 (ಸೂ.ಸಾ.) ಹೇಳಿನೆ 2 ಮಂಹಾ 3 ದುಃಕೀರ್ತಿಯನು 4 ದುದನು 5 ನೀಳ
6 ವಾ 7 (ಸೂ.ಪಾ.) ನೊಡನೆ ಸ 8 (ಸಂ.ಸೇ.) 9 ದಲಪದಕೆ.

ಕೇಳು ಭೂಪತಿ ಮುನ್ನ ರಾಜ್ಯವ
ನಾಳದವರ* ತ್ರಿಶಂಕುವಿನ ಮಗ
ನಾಳ1ದ1 ಹರಿಶ್ಚಂದ್ರನೆಂಬವ ಸತ್ಯವಂತನಾಗಿ
ಬಾಳಿದನು ಪಾಂಡವರೊಳೊಬ್ಬನೆ
ಮೇಳವಿಸಿ ಧರ್ಮದಲಿ ನಡೆದನು
ಕೇಳು ನೃಪ ನೀನೆನ್ನ ಮಾತನು ಯೆಂದನಮರೇಂದ್ರ ೪೦

ನೀನು ಮಾಡಿದ ಸತ್ಯಸುಕೃತವ
ನೂನವಾಗಿಯೆ ನಡೆ2ಯೆ2 ನಿನಗಿ
ನ್ನೇನು ಸಂಶಯ ಬೇಡ ಪಡೆವುದು ಮುಕುತಿ ರಾಜ್ಯವನು
ನೀನೆನುತ ಪುಷ್ಪಕವ ತಿರುಹಿದ
ನೀನು ಗಮಿಸುವುದೆನಲು ಸ್ವರ್ಗ
ಕ್ಕಾನರೇಂದ್ರನ ಇದಿರು ಬಂದನು ವೀರ ನಾರಯಣ ೪೧

ಅರಸ ಕೇಳ್ಳೈ ಮುನ್ನ ಕೃತಯುಗ
ದೊಳಗೆ ಕಾಶ್ಯಪ ರುಷಿಯ ಮಕ್ಕಳು
ಪರಿಭವಿಸಿ ರಾಜ್ಯವನು ಧರಣಿಯ ಕದ್ದು ಕೊಂಡೊ3ಯ್ಯೆ3
ಧರಿಸಿ ನಾರಾಯಣನು ಧರಣಿಯ
ವರಹ ರೂಪವ ತಾಳಿ ಖಳನನು
4ವಧಿಸಿ4 ಭೂಮಿಯ ತಂ5ದ5 ಸ್ವರ್ಗವ ಕಾಣರವರೆಂದ ೪೨

ಹತ್ತನೆಯ ಸಂಧಿ ಸಮಾಪ್ತ

1 ದ(+ ನು) 2 ಪೆ 3 ಯ್ದು 4 ವರಿಸಿ 5 ದು
* ಈ ಪದ್ಯ ಈ ಸಂಧಿಯ ಕೊನೆಯ ಪದ್ಯವಾಗಿರಬಹುದು.

ಸಂಧಿ - ೧೧

ಕಾಯುವಿಡಿ1ದು ಯಮತನುಜ ಬರೆ1
2ಆಯ್ತು ಸಾಯುಜ್ಯಪದ2 ಪಾಂಡವ
ರಾಯರುಳಿದರು ಮುಕ್ತರಾದರು ಹರಿಯ ಕರುಣದಲಿ ಪಪ

ಕೇಳು ಜನಮೇಜಯ ಧರಿತ್ರೀ
ಪಾಲ ಧರ್ಮಜನೊಡನೆ ಕುರುಭೂ
ಪಾಲನಾಡಿದ 3ಛಲಪದವ3 ಕೇಳುತ್ತ ಮುರವೈರಿ
ಪಾಲಿಸುವೆನೈ ಧರ್ಮ4ಜ4 ಕ್ಷಿತಿ
ಪಾಲನನು ಧರ್ಮಜಗೆ ಕೊಡುವೆನು
ಮೇಲೆನಿಪ ಸಾಯುಜ್ಯ ಪದವಿಯನೆನುತ ನಡೆತಂದ ೧

ತೋರಿದನು ಹರಿ ನಿಜವನುತ್ಪಲ
5ಹಾ5ರದಲಿ ಕೌಸ್ತುಭ ರುಚಿಯ ವರ
ಸಾರತನುರುಚಿ 6[ಉರದ ಕಸ್ತುರಿ ತಿರವ]6 ಮಣಿಮುಕುಟ
ನೀರ7ಜದ7 ದಳನಯನ 8ಧಾರಿತ8
ಪೂರವಿಸಿದಾ ಯಕ್ಷಕರ್ದಮ
ಧೀರ ದನುಜರ ಗಾಹೆ 9ಹೊಂ9 ದೊಡರಿಸಿವ ಚರಣಯುಗ ೨

ಸಿರಿಯ ಕುಚ ಕುಂಕುಮ ಪರಾಗದಿ
10ಹೊರೆ10ದ ಪೇಶುರ ತೊಳಸಿ ದಂಡೆಯು
ಕೊರಳೊಳಿದ್ದುದು ವಿವಿಧ ಪರಿಮಳ ಕುಸುಮ ವನಮಾಲೆ
ಮೆರೆವ ಪೀತಾಂಬರದ ಮೊನೆ ಮುಂ
ಜೆರಗಿನುಡಿಗೆಯ ಕನಕ ಮಣಿಯಾ
ಭರಣಪೂಪ್ಪಿಹ ನಿಜದ ನಿರುಗೆಯ ರೂಪ ತೋರಿದನು ೩

ಕಂಡನರಸನು ಯಿದಿರಿನಲಿ 11ಅರ
ವಿಂದ11ನಾಭನ ಮೂರುತಿಯ ಮಿಗೆ
ದಿಂಡುಗೆಡೆದನು ಚರಣದಲಿ ಹರಹಿದನು ನಿಜತನುವ

---

1 ಜಿಮತನುಜಬರಲಾ 2 ಸಾಯುಜ್ಯ ಪದವಾಯ್ತು 3 ದಲ 4 ಜ(+ ನ) 5 ಸಾ
6 ಶಿರದ ಕಸ್ತುರ ಮೌಳಿ 7 ಜಾ 8 ಧಾರಿತ (ಶ್ರೀವತ್ಸ ಕೌಸ್ತುಭ ಶಂಖಚಕ್ರಗದೆ ಶಾರ್ಙ್ಗ
ಧರಚತುರ್ಭುಜ ತನೂರುಹ) 11 ಕರಕಂಡ 9 ಪೇ 10 ಪೊಳೆದ

ಪುಂಡರೀಕಾಸನನೆ ರಕ್ಷಿಸು
1ಪೌಂಡ್ರ1ಕಾಂತಕ ರಕ್ಷಿಸೈ ಉ
ದ್ದಂಡ ದನುಜಘರಟ್ಟ ರಕ್ಷಿಸು ಯೆನುತ ಹೊಗಳಿದನು

ಜಯ ಜನಾರ್ದನ ವಿಮಳ ಮುಕ್ತಾ
ಶ್ರಯ ಮುರಾರಿ ಮುಕುಂದ ರಕ್ಷಿಸು
ಭಯರಹಿತ ಕಮಳಾಕ್ಷ ಕಂಸಾರಾತಿ ರಕ್ಷಿಪುದು
ಲಯವಿಹೀನ ಕೃಪಾಂಬುನಿಧಿ ಯ
ದ್ವಯನೆ ಉಪಮಾತೀತ ರಕ್ಷಿಸು
ಜಯ ಜಗತ್ಪತಿ ರಕ್ಷಿಸೆಂದನು ಧರ್ಮನಂದನನು

ದೇವ ಗಂಗಾಜನಕ ರಕ್ಷಿಸು
ದೇವ ಮನ್ಮಥತಾತ ರಕ್ಷಿಸು
ದೇವ ಚತುರಾನನ2[ನ]2ಪಿತ ವನಮಾಲಿ ಕರುಣಿಪುದು
ದೇವ ಮಂಗಳಮೂರ್ತಿ ಕರುಣಿಸು
ದೇವಕೀಸುತ ಕೃಷ್ಣ ಕರುಣಿಸು
ದೇವ ಕರುಣಾಸಿಂಧು ಕರುಣಿಸು ಕರುಣಿಸೆನಗೆಂದ

ಸಕಲ ಜಗದಾಧಾರ ಭಕ್ತ
ಪ್ರಕರ 3ರಕ್ಷಕ3 ದೇವ ರಕ್ಷಿಸು
ಭಕ್ತರಿಚ್ಛೆಯನೀವ ಸುರತರು ಭಕ್ತಸಂಸಾರಿ
ನಿಖಿಳನಿಗಮಾತೀತ ವಿಶ್ವಾ
ಧಿಕನೆ ವಿಶ್ವದ್ರೂಪನಬುಜಾಂ
ಬಕನೆ ಕರುಣಿಸು ಕರುಣಿಸೆಂದನು ಧರ್ಮನಂದನನು

ನಾಥ ನೀನು ಅನಾಥ ನಾ ನಿ
ರ್ಭೀತ ನೀನತಿಭೀತ ನಾನ್ನೈ
4ದೇವ ನೀನಂಗಜನಪಿತ4 ವಿಖ್ಯಾತ ಜಗಚ್ಚರಿತ
ಮೈಥಿಲೀವಲ್ಲಭನೆ ಕರುಣಿಸ
ನಾಥನನು ಕೃಪೆಮಾಡು ದೇವ
ವ್ರಾತವಂದ್ಯನೆ ಸಲಹು ಸಲಹೆಂದನು ಯುಧಿಷ್ಠಿರನು

ಪಲುಡ್ರ 2 (ಸಂ.ಸೇ.) 3 ರಕ್ಷಿತ 4 ಭಾವನೀನಂಜಗಚ್ಚರಿತ

ದೇವ ದೈತ್ಯಪ್ರಳಯಪಾವಕ
ದೇವ ದನುಜಕುಠಾರ ಭೀಷಣ
ದೇವಪಾಲಕ ರಾವಣಶಿರಶ್ಛೇದನಾ ವೀರ
ದೇವ ಕಾರ್ತ್ಯವೀರ್ಯಾರ್ಜುನನ* ಸಾವಿರ
ಬಾಹು ತರಿದಾ ಪರಶುರಾಮನೆ
ದೇವ ಗೋಮುನಿಯರಸ ರಕ್ಷಿಸು ರಕ್ಷಿಸೆನುತಿರ್ದ ೯

ತೊಟ್ಟಿಲೊಳು ಪುಟ್ಟಿದ್ದು ಶಕಟನ
ಮೆಟ್ಟಿಕೊಂದತಿಬಳನೆ ಬಾಯೊಳ
ಗಿಟ್ಟು ಪೂತನಿಯಸುವ ಹೀರಿದ ವೀರಬಾಲಕನೆ
ಕಟ್ಟೊರಳನೆಳೆದಮರ1[ನಿಕರವ]1
ಹೊಟ್ಟುಗುಟ್ಟಿದ 2ವಿ2ಕಟದೈತ್ಯಘ
ರಟ್ಟ ಸಲಹುವುದೆನ್ನನೆಂದನು ಧರ್ಮನಂದನನು ೧೦

ಹೋದ ವೇದಂಗಳನು ಬುಧರಿಂ
ಗಾಧರಿಸಿ ತಂದವನೆ 3[ವರ]3 ವಾ
ರಾಹನಾಗಿಯೆ ಮೇದಿನಿಯ ತಂದವನೆ ನರಹರಿಯೇ
ಮೇದಿನಿಯ ಮೂರಡಿಯ ಮಾಡ
ಲ್ಕಾದ ತ್ರೈವಿಕ್ರಮನೆ ಪರಶುವ
ನಾಧರಿಸಿ ಪಾರ್ಥಿವರ ಮಡುಹಿದ 4ದೇವ4 ಶರಣೆಂದ ೧೧

ಜನಕಜೆಯ ಪರಿಭವವ ಕಾಯ್ದನೆ
ವನದೊಳಗೆ ಕಾಳಿಂಗ 5[ನ]5ಡೆತುಳಿ
ದನುವಿ6ನಿಂ6ಜಿನ 7ಬೌದ್ಧ ಸಾಧನೆ7 ಕಲ್ಕಿಯಾದವನೆ
ಎನಗೆ ಕರುಣಿಸು ಕರುಣಿ ಮಧುಸೂ
ದನನೆ ಮಂಗಳಮೂರ್ತಿ ಕರುಣಿಸು
ಮುನಿಹೃದಯದಾ ಜ್ಯೋತಿ ಕರುಣಿಸು ಕರುಣಿಸೆನಗೆಂದ ೧೨

ಪಾತಕಿಯಜಾಮಿಳನ ಕಾಯ್ದನೆ
ಪ್ರೀತಿಯಿಂ ಸಾಂದೀಪಪುತ್ರನ
ನೋತು ತಂದಿತ್ತವನೆ ಬಲು ಗೋವರ್ಧನದ ಗಿರಿಯ

---

1 ಕರನಾ 2 ಶ 3 ತಮ 4 ದೇವ(ದೇವ) 5 ನೊ 6 ನಂ 7 ಬೌದ್ಧನೆಸಾಧನೆ

ಆತು ಮಂದರಗಿರಿಯ ತಾಳ್ದನೆ
ಸೇತುವನು ಜಲಧಿಯಲಿ ಕಟ್ಟಿ
ದಾತನೇ ಸಲಹೆನ್ನ ನೆಂದೊದರಿದನು ಯಮಸೂನು ೧೩

1ಚಾಣುರನ1 ಮಲ್ಲರನು ಮುರಿದನೆ
ಕ್ಷೋಣಿಯರಿಯಲು ತಾಯ ಸೆರೆಯನು
ಮಾಣಿಸಿದೆಯ್ಕೆ ಕೃಷ್ಣ ಕರುಣಾಸಿಧುವೆ ರಕ್ಷಿಪುದು
ಕೇಣದಿಂ ಮಡಿವರ್ಗದವನ
ಕ್ಷೀಣ ರಜಕನ ಮಡುಹಿ ವಸ್ತ್ರವ
ರಾಣಿಯರಿ1a[ಗಿತ್ತ]1aವನೆ ಸಲಹುವುದೆಂದೆನುತ್ತಿರ್ದ ೧೪

ನೀರಜಡ ದಳನಯನ ಕೌಸ್ತುಭ
2ಧಾರಿ2*ಶ್ರೀವತ್ಸಾಂಕ ಶಂಖಗ
ದಾಧರಾಚ್ಯುತ ಕೃಷ್ಣ ಕೇಶವ ವಿಷ್ಣು ಜಗಧಾರ
ಮೂರು ಜಗದಾಧಾರ ಮಂಗಳ
ಕಾರ ನಿಗಮವಿದೂರ ಗೋಪೀ
ಜಾರ ಮುರಹರ ಕರುಣಿಸೆಂದನು ರಾಯ ಕೌಂತೇಯ ೧೫

ಅರಸ ಕೇಳೈ ತಂದೆ ನಿನ್ನಯ
ವರ ಪಿತಾಮಹ ಧರ್ಮಪುತ್ರನ
ಪರಮ ಪುಣ್ಯೋದಯದ ಶೌರ್ಯದ ಕರುಣದಳತೆಯನು
ಕರೆವ ಪಶು ಹರಿತಂದು ತಾ ಹೊಂ
ಕರಿಸುವಂತಿರೆ ಕೃಷ್ಣರಾಯನು
ಕರುಣದಲಿ ನೋಡಿದನು ಹೊರಳುವ ಧರಣಿಪಾಲಕನ ೧೬

ಕುಸಿದು ಹಿಡಿದೆತ್ತಿದನು ರಾಯನ
ನೊಸಲ ಚೈಮುಂಡಾಡಿ ತಮ್ಮಯ
ಬೆಸುಗೆ ಸಡಿಲದೆ ತೆಗೆದು ಚೈಮುಂಡಾಡಿ ಧರ್ಮಜನ
3ಶಶಿಯ3 ವಂಶಾಂಬುಧಿನಿಶಾಕರ
ಹುಸಿವಚನ ಹೊದ್ದದ ಮಹಾನ್ನೃಪ
ಋಷಿಯೆನುತ ತೆಗೆದಪ್ಪಿ ಮುಂಡಾಡಿದನು ಮುರವೈರಿ ೧೭

---
1 ಚಾಣೂರ 1a ಗುಟ್ಟ 2 ವಾರಿಜಾ 3 ಶಶಿ

ಧಾರಿಣೀಪತಿ ಕೇಳು ಧರ್ಮಕು
ಮಾರಕನ ಮನ್ನಿಸಿದನಾತಗೆ
ಶೌರಿ ನಿಜಪದವಿಯನು ಬಹಳ ಕೃಪಾವಲೋಕವಲಿ
ತೋರಿದನು ಸಹದೇವ ನಕುಲರ
ಮೂರುತಿಯನರ್ಜುನನ ಮತ್ತಾ
ನೀರೆ ಪಾಂಚಾಲೆಯನು ಕುಂತಿಯ ಕಂಡ ಯಮಸೂನು ೧೮

ಅರಸ ನಿನ್ನವರೆಲ್ಲ ಇದ್ದರೆ
ವರಿಸಿದೈ ಲೇಸಾಗಿ ನೀ ಮನ
ಮರುಗಲಾಗದು ನಿನ್ನಪೋಲಾರಿನ್ನು ಸುಕೃತಿಗಳು
ನರಕ1[ಪ]1ರವಾದ್ಯಂತವೆಂಬುದು
ಧರಣಿಪತಿಗದು ವಿಹಿತವೈ ನೀ
ನೆರೆ ಕೃತಾರ್ಥನು ಯೆಂದು ನುಡಿದನು ದಾನವಧ್ವಂಸಿ ೧೯

ಎನ್ನ 2ಜೀವನೆ ನೀವಯಿವರುಗ2
ಳೆನ್ನ ಕರಣಂಗಳು ನೃಪಾಲಕ
ನಿನ್ನ ಪೊಡಹುಟ್ಟಿದರು ಯೆಂದನು ಶೌರಿ ನಸುನಗುತ
ನಿನ್ನ ನುಡಿಯದು ವೇದಸಮ್ಮತ
ನಿನ್ನ ಚರಿತವೆ ಶಾಸ್ತ್ರಸಂಪದ
3ನನ್ನಿ3ಯುಳ್ಳರ ಭೂಪ ಕೇಳೈ ಧರ್ಮಸಂಭವನೇ ೨೦

ನೀನು ನಾನೆಂಬೆರಡು ಭೇದವು
ತಾನು ಬೇರಿಲ್ಲೆನುತ ಬೊಬ್ಬಿರಿ
ದಾನವಾಂತಕ ದಿವ್ಯದೇಹವನಿತ್ತನನಿಬರಿಗೆ
ಭಾನುರಶ್ಮಿಯ ಮೆರೆವ ತೇಜನಿ
ಧಾನ ಕಾಯಗಳಾದವರಿಗೆ
ನೀನು ಕೇಳೈ 4[ಮುಂದೆ]4 ಜನಮೇಜಯ ಮಹೀಪಾಲ ೨೧

ಅಗಳಮೃತಶರೀರರಾದರು
ನೀಗಿದರು ಜಡದೇಹವನು ಭವ
ಸಾಗರವ ದಾಂಟಿದರು ಗೆಲಿದರು ಜನನವಲ್ಲರಿಯ

---

1 (ಸಂ.ಸೇ.) 2 ಜೀವನವೆ ನೀವೈವರುಗ 3 ನಿನ್ನ 4 (ಸಂ.ಸೇ.)

ನಾಗತಲ್ಪನ ಕೂಡೆ ನಡೆದರು
ಆ ಗರುವರೊಂದಾಗಿ ಬಹಳ ಮ
ಮೋನುರಾಗದಿ ಹೊಕ್ಕರೈ ವೈಕುಂಠಭವನವನು ೨೨

ಬಳಿಕ ನಾರಾಯಣನು ಭೂಪತಿ
ತಿಲಕರಿಗೆ ಸಾಯುಜ್ಯ ಪದವನು
1ತನ್ನನುಜ್ಞೆಯಲಿವ*ರ್ಗೆ1 ಕೊಡಿಸುವೆನೆಂದು ಮನದೊಳಗೆ
ನಲವು ಮಿಗೆ ಪಾಂಡವರ ನಂಬಿಸಿ
ನಳಿನನಾಭನ ವಿಮಳ ಮಂಗಳ
ನಿಳಯದೊಳಗೆಸದಿದ್ದರೈ ಜನಮೇಜಯ ಕ್ಷಿತಿಪ ೨೩

ಹನ್ನೊಂದನೆಯ ಸಂಧಿ ಸಮಾಪ್ತ

1 ತನ್ನಲಿಯನುಜ್ಞೆಯ ನಿವರ್ಗೆ

ಸಂಧಿ - ೧೨

ನಳಿನನಾಭನು ಪಾಂಡುತನಯರ
ನಲವು ಮಿಗೆ ಸಾಯುಜ್ಯಪದವಿಯ
ನ1ಲಿದು1ಮೆಯಪತಿ ಕೊಡಿಸೆ ಪಡೆದರು ಶಿವನ ಕರುಣದಲಿ ಪದ

ತಂದೆ ಕೇಳು ಪರೀಕ್ಷಿತನಯನೆ
ಇಂದಿರಾಪತಿ ಪಾಂಡವರು ನಲ
ವಿಂದ ಕೈಲಾಸಾದ್ರಿಯನು ಹೊಕ್ಕವರನೊಡಗೂಡಿ
ಬಂದನೈ ಪಶುಪತಿಯ ವೋಲಗ
ಕಂದು ದೇವರದೇವ ಮುಗು*ಳ್ನಗೆ
ಯಿಂದ ದೇವರದೇವ ಮನ್ನಿಸಿದನು ಮುರಾಂತಕನ ೧

ಮೃಡನ ಹಾಸದ ಬೆಳಗು2ತಾನದು2
ಕಡುಬೆಳಗು ಕರ್ಪೂರಗೌರದ
ಲಿಡಿದ ತನುವೆಳಗಂಬಿಕೆಯ ವದನಾಂಶುರುಚಿಬೆಳಗು
ಜಡೆಯ ನಡುವಿಹ ನದಿ3ಯ ತೆರೆ3ಗಳ
ಕಡಲ ಬೆಳಗಿನ ಮಕುಟದಗ್ರದ
ಉಡುಪತಿ4ಯ ಬೆಳಗಿನಲಿ ರಂಜಿಸೆ4ಯೆಸೆದ ಮದನಾರಿ ೨

ಶಿವನ ಶುಭ್ರತೆವೆಳಗಿನೊಳು ಮಾ
ಧವನ ಕೃಷ್ಣತೆವೆಳಗು ಹೊಳೆಯಲು
ನವರತುನ ರುಚಿಯಾಯ್ತು ಲೋಕಾನೀಕದೊಳಗೈದೆ
ಶಿವನ ಹೃದಯದ ನಿವಹದೋವ5[ರಿ]5
ಯೊಳಗೆ ತಾನಿಹ ಕೇಳು ಭವವನು
ಗೆಲಿದುಪಾಯಾಂತರವ ನೀ ಕೇಳೆಂದನಾ ಮುಸಿಪ ೩

6ಎಲ್ಲಿ6 ಶಿವುಯ7ವ7ಲ್ಲಿವಿಷ್ಣುವೆ
8ಯೆ8ಲ್ಲಿ ಹರಿಮಯ9ವಲ್ಲಿ9ಶಿವನಿಹ
ನಲ್ಲಿಯೂ ಹರಿಮಯ10ವ10ದ11ಲ್ಲದೆ11 ಬೇರೆ ತಾವಿಲ್ಲ

---
1 ನಲ್ಲು 2 ತನದಾ 3 ತರಂ 4 ಯಂನು ಬೆಳಗಿರಜಿಸೆ 5 (ಸಂ.ಸೇ.) 6, 7 ಅ
8 ಯ 9 ನ 10 ಮ 11 ಲ್ಲಿಯೆ

ಬಲ್ಲ ಶಾಸ್ತ್ರ ಸ್ಮೃತಿ ನಿಕರ ತಾ
ವೆಲ್ಲ ಸಾರುತ್ತಿಹವು ಭೇದವ
ನಲ್ಲಿ ಕಾಂಬರ್ಗಹುದು ದುರ್ಗತಿ ಯೆಂದನಾ ಮುನಿಪ ೪

ಹರಿಯ ವಚನವ ಕೇಳು ಭೂಪತಿ
ಹರ1[ನ]1 ಭಕ್ತರು ತನ್ನನೊಲ್ಲದೆ
ಯಿರಲು ತನ್ನಯ ಭಕ್ತರಾ ಪುರಹರನ ನಿಂದಿಸಲು
ನರಕ ಭೂಚಂದ್ರಾರ್ಕತಾರಂ
ಬರವಿಹನ್ನಕಯೆಂದು ಸಾರು
ತ್ತಿಹವೆ ಆಗಮ 2[ಶಾಸ್ತ್ರ]2 ನಿಚಯುಗಳೆಂದನಾ ಮುನಿಪ ೫

ಅದು ನಿಮಿತ್ತವು ಹರಿಯು ಶಂಭುವ
ಸದನಕೊಯ್ದನು ಪಾಂಡವರನಂ
ದುದಿತವಹ ಸಾಯುಜ್ಯ ಪದವನು ಕೊಡಿಸುವಾ ಭರದಿ
ಮದವಡಗಿ 3ಭಜಕರ್ಗೆ3 ತೋರಿದ
ಪದುಮದಳಲೋಚನನು ಶಿವತ
ತ್ಪದ ಮಹಾದರುಶನವನೆಂದನು ಮುನಿ ನೃಪಾಲಂಗೆ ೬

ಶಿವನ ಓಲಗದೊಳಗೆ ರುದ್ರನ
ನಿವಹ ಮಧುಸೂದನನು 4[ಅಂ]4ಬುಜ
ಭವರು ನೆ[5ರೆ]5ದಿಹರೊಂದು ಕೋಟಿ ಪ್ರ6[ತತಿ]6ದಿವಿಜಪತಿ
ಅವರು ಶತಕೋಟಿಗಳು ಧರಣೀ
ಧರನ ಸಭೆಯೊಳಗೆಲ್ಲ ಚಿನುಮಯ
ವಿವಿಧ ಕೋಟಿಗಳಲ್ಲಿ ತುಂಬಿಹರಗಣಿವು ತಯೆಂದ ೭

ಅಲ್ಲಿ ವೇದಾನೀಕದುಗ್ಗಡ
ವಲ್ಲಿ ವಿಮಳ ಜ್ಞಾನದೀಪ್ತಿಗ
ಳಲ್ಲಿ ಉಪನಿಷದೊತ್ತುಗಳ ತರತ7[ರ]7ಗಳಗಲದಲಿ
ಅಲ್ಲಿ ಸಪ್ತಮ ಕೋಟಿಯೊಪ್ಪಿಹ
ಕೊಲ್ಲಣಿಕೆ ಪುರುಷಾರ್ಥ ನಾಲುಕ
ಕಲ್ಲಿ ಒಳಹೊಗುತಿಪ್ಪ ಪುಣ್ಯಗಳೆಂದನಾ ಮುನಿಪ ೮

1, 2 (ಸಂ. ಸೇ.) 3 ಭಂಜರ್ಗೆ 4 ಅಬುಜ 5 (ಸಂ. ಸೇ.) 6 ತ್ರೇತ 7 (ಸಂ. ಸೇ.)

ಅಗಣಿತದ ಗಣನಿಕರ ಶಿವನೋ
ಲಗದೊಳಗೆ ಶೀವಿರಲು ರಂಭಾ
ದಿಗಳು ಮೊದಲಾದಂಗನೆಯರಲ್ಲಿಹರಸಂಖ್ಯಾತ
ಗಗನಮಣಿ ಶಶಿ ತಾರೆ ಗ್ರಹರಾ
ಶಿಗಳು ಸುತ್ತಲು ಶೆತ್ತಿಸಿದರಂ
ತಗಣಿತಾಸ್ಥಾನವನು ಕಂಡರು ಪಾಂಡುನಂದನರು ೯

ವೀರಭದ್ರನು ವಿಕಟ ಭೈರವ
ದಾರುಕ ಮಹೋದರನು ಧೇನುಕ
ವೀರ ಭೃಂಗೀನಾಥನಿದ್ದನು ಸಭೆಯನೊಳಗೊಂಡು
ಮಾರಹರನಿದಿರಿನಲಿ ಮೆರೆ[1]ದ ಸು
ಧಾರ[1]ನಂದೀಶ್ವರನು ಪ್ರಮಥರು
ಸಾರೆ ಕುಳ್ಳಿರ್ದರು ಮಹಾಸ್ಥಾನದಲಿ ಮುರಹರನಾ ೧೦

ಆರು ಕೇಳಾ ಸಕಲ ರುಷಿಗಳು
ಮಾರಹರನೋಲಗದಿ ಮೆರೆದಿರೆ
ಪರಮ ಮುನಿ ನಾರದನು ಯಿದ್ದನು ಸಭೆಯ ಮಧ್ಯದಲಿ
ಇರಲು ದೂರ್ವಾಸನು ಮಹಾಮುನಿ
ವರನು ಹರುಷದೊಳಂದು ಗಂಗಾ
ಧರನ ಬಹಳಾಸ್ಥಾನವನು ವರ್ಣಿಸುವರಾರೆಂದ ೧೧

ಮೇಳದಲಿ ಗಂಧರ್ವ ತುಂಬುರ
ರಾಳಪಿಸುವರ್ ಗಾನರಸವದ
ಕೇಳುತಾಗ ಹೊಗಳ್ವ ಮಾಗಧ ಸೂತರೋಜೆಗಳ
ಮೇಲೆ ಭೃಂಗೀನಾಟ್ಯವನು ತಾ
ನಾಲಿಸುತ ನಸುನಗುತಲಾ ಶಶಿ
ಮೌಳಿ ಮೆರೆದಿರೆ ಲಲಿತ ಸಿಂಹಾಸನದಮೇಲಿದ್ದ ೧೨

ಶ್ರೀಲತಾಂಗೀವರನ ಗಿರಿಜಾ
ಲೋಲ ಹತ್ತಿರ ಕರೆದು ಮನ್ನಿಸಿ
ಲೋಲುಪುತಿ ಮಿಗೆ ತನ್ನ ಸಿಂಹಾಸನದ ಮಧ್ಯದೊಳು

---

1 (ಸೂ.ಪಾ.) ಜನು ಧೀರ

ಲೀಲೆಯಿಂದಾಸನವನಿತ್ತು ಸ
ಮ್ಮೇಳವಲಿ ಕುಳ್ಳಿರ್ದು ನುಡಿಸಿದ
ಹೇಳು ಮುರಹರ ಯಿಂದು ಬೆಸನೇನೆನುತ ಬೆಸಗೊಂಡ

ನಸುನಗುತ ಮುರವೈರಿ ಯೆಂದನು
ವಿಷಮಲೋಚನ ನಿನ್ನ ಶ್ರೀಪದ
ವಿಸರುಹದ ದರುಶನಕೆ ಬಂದರು ಪಾಂಡುನಂದನರು
1[ಎಸೆವ]1 ಸತ್ಯ ಜ್ಞಾನ ಧರ್ಮದ
ಬೆಸುಗೆ ಬಿಡದಿವರಿಂಗೆ ನೀ ಕರು
ಣಿ2[ಸುವುದಾ]2 ಸಾಯುಜ್ಯ ಪದವಿಯ3[ನೆ]3ಂದ ಮುರವೈರಿ

ಮುರಹರನ ಕಣುಸನ್ನೆಯಿಂದವೆ
ದರುಶನ ಪ್ರತಿಗಾಗ ನೇಮಿಸ
ಲರಸ ಮೊದಲಾಗೆಲ್ಲ ಹರ ಹರ ಯೆನಲು ಹರುಷದಲಿ
ಹರಹಿದರು ತನ್ಮೊಡಲ ಹರಪದ
ಸರಸಿಜಾಗ್ರದ ಮೇಲೆ ಗಂಗಾ
ಧರನೆ ರಕ್ಷಿಸು ರಕ್ಷಿಸೆಮ್ಮನೆನುತ್ತ ಹೊರಳಿದರು

ಶಶಿವಿಭೂಷಣ ದೇವ ರಕ್ಷಿಸು
ವಿಷಮಲೋಚನ ರಕ್ಷಿಸಮರ
ಪ್ರಸರ ಪಂಚಮುಖಾಬ್ಜ ರಕ್ಷಿಸು ಲೀಲೆಯಲಿ ಸಲಹು
ವಶಭುಜನೆ ಕೈಗಾವು4 ದೆಮ್ಮನು4
ಭಸಿತಭೂಷಣ ರಕ್ಷಿಸೈ ದಿ
ಗ್ವಸನ ರಕ್ಷಿಸು ನಮ್ಮ ಶ್ರೀಪದಚರಣದೊಲುಮೆಯ5ಲಿ5

ಕೇಳು ಜನಮೇಜಯ ಧರಿತ್ರೀ
ಪಾಲ ಪಾಂಡವ ನೃಪರ ಭಾಗ್ಯದ
ಹಾಲುಗಡಲಿದಿರಾದುದೆಂಬುದನಲ್ಲಿ ಶಶಿಮೌಳಿ
ಮೇಲುನಗೆ ಮೊನೆ ಮುಸುಗೆ ಕರುಣದ
ಜಾಳಿಗೆಯ ಸುರಿವುತ್ತ 6[ನಿವಿ
ನ್ನೇಳಿರೆಂ]6 ದೆನುತತ್ತ ಬರಹೇಳಿದನು ಪಾಂಡವರ

---

1 ಎಸಲು 2 ಚಸ್ಯೆ 3 ಯೆ 4 ದ್ಯೆ ನಮ್ಮನು 5 ನು 6 ನೀನಿನ್ನೇಳಯೆಂ

ಬಂದು ಧರ್ಮಜ ಶಿವನ ಕರುಣದೊ
ಳಂದು ತಮ್ಮ[1ಂದಿ]1ರು ಸಹಿತ ಮನ
ಸಂದು ಕೈಗಳ ಮುಗಿದು ನಿಂದರು ಹರಗೆ ತಲೆವಾಗಿ
ಅಂದು ಅನಿಬರ ಮೈದಡವಿ ನಲ
ವಿಂದ ಭಕ್ತರ ನೋಡಿದಾಕ್ಷಣ
ಇಂದುಧರ ವರವಿತ್ತ2ನ2ಮರರೊಳಾಗಿ ನೀವೆಂದ ೧೮

ಹರನು ವರವನು ಕೊಟ್ಟನನಿಬರಿ
ಗಿರದೆ ಪಾಂಡವರೆಲ್ಲರಿಗೆ ಕರೆ
ಕರೆದು ಅಮೃತ ಶರೀ3ರಿಗಳ್ ನೀವಾಗಿರೆಂದೆನುತ3
ವರವ ಬೇಡೆನಲರ್ಜುನನು ತಾ
ನಿರದೆ ಸುಖವನು ಬಯಸಿ ಬೇಡಲು
ಕರೆದು ಕೊಟ್ಟನು ಕುಂತಿಸುತ ನೀ ಭೋಜನಾಗೆಂದು ೧೯

ಹರಸಿದನು ಅರ್ಜುನನ 4[ನಸುನಗೆ]4
ಬೆರಸಿ ವ್ಯಮೋಹದಲಿ ಮುರರಿಪು
ಹರುಷದಲಿ ನೋಡಿದನು ಕರುಣಾಮೃತದ ಕಡುಗಡಲಾ
ಭರದಲೋಲಾಡಿದರು ಪಾಂಡವ
ರರಸ ಕೈಮುಗಿದೆರಗಿ ಹರಗಂ
5[ದಿರದೆ]5 ಬಿನ್ನಹ ಮಾಡಿದನು ಭೂಪಾಲ ಕೇಳೆಂದ ೨೦

ಪರಹಿತನು ನರನಾಥನಾ ಪುರ
ಹರ ಮುರಾರಿಗೆ ಬಿನ್ನವಿಸಿದನು
ನರಕದೊಳಗೋಲಾಡುತಿಹ ತನ್ನನುಜರೊಡಗೂಡಿ
ಕುರುನೃಪಾಲಗೆ ಕರುಣವನು ನೀವ್
ಹಿರಿದು ಮಾಡುವುದೆನಲು ಮೆಚ್ಚಿದು
ಹರುಷದಲಿ ನರಹರಿಯು ಮುಖವನು ನೋಡಿದನು ಬಳಿಕ ೨೧

ಕರೆದು ಯಮನನು ಚಿತ್ರಗುಪ್ತರ
ಕರೆಸಿ ಬೆಸಗೊಳಲಂದು ಅತಂ
ಗಿರಲು ಸ್ವರ್ಗದೆ ಭೋಗ ಮೂರೇ ದಿವಸ ಯೆನಲಾಗ

1 (ಹಂ.ಸೇ.) 2 ಅ 3 ಗಳಾಗಿನೀವೆನುತ 4 x x x x 5 ದೆರಗಿ

ಕರೆಸಿದನು ರೌರವದೊಳಾಳುವ
ದುರುಳ ದುರ್ಯೋಧನನನಾಗಳು
ಬರಿಸಿದನು ಅವನನುಜರೆಲ್ಲರು ಸಹಿತ ಶಿವನೆಡೆಗೆ ೨೨

ಇರದೆ ಕೌರವ ತನ್ನನುಜರೆ
ಲ್ಲರು ಸಹಿತ ಶಿವನೋಲಗಕೆ ಬಂ
ದಿರಲು ಕಂಡನು ಚರಣಕಮಲದಲೆರಗಿದನು ಹರನ
ಹರುಷದಲಿ ಹಿಡಿದೆತ್ತಿ ಅವರಿಂಗೆ
ವರವ ಕೊಟ್ಟನು ಮೂರುದಿವಸ ಅ
ಮರ[ರ][1]ಲೋಕದೊ[ಳಿರುವುದೆನ್ನುತ ಹರಸಿ][2] ನೇಮಿಸಿದ ೨೩

ಸುರರ ಪದದಲಿ *ಸ್ವರ್ಗಭೋಗವ
ನಿರದೆ ಕೊಟ್ಟನು ಮೂರು ದಿನ ಮು
ತ್ತರಸ ಬಿನ್ನೈಸಿದರೆ ಕೇಳಾ ಕರೆಸಿದನು ಕೃಷ್ಣ
ಕರೆತರಲು ಕಳುಹಿದನು ಹೇಮದ
ಗಿರಿಯಲಿದ್ದಾತನನು ಪರಿದಾ
ಹರಿಯ ದೂತರು ಕೊಂಡು ಬಂದರು ಶಿವನ ಹೊರೆಗಾಗಿ ೨೪

ಬರುತ ಕಂಡನು ಶಿವನ ಭವನವ
ನರಮನೆಯ ಹೊಕ್ಕನು ಮಹೋತ್ಸಹ
ದುರವಣೆಯೊಳಾ ಕರ್ಣ ಕಂಡನು ಶಿವನ ಮೂರ್ತಿಯನು
ಮೆರೆವ ಶಶಿಧರ ಭಸಿತವದನಾಂ
ಬುರುಹ ನಿಟಿಲಾಕ್ಷನ ಜಟಾ [3][ತತಿ][3]
[4]ಲುಳಿತ ವರ ಗಂಗಾತರಂಗಿತ[4] ತೇಜಪ್ರಜ್ವಲಿಸೆ ೨೫

ದೇವ ದೇವವಧಾರೆನುತ ಮನ
ಭಾವನೆಯ ಹೊಗಳುತ್ತ ಹೊಗಳುತ
ದೇವ ಭವನಿರ್ವಾಣ ಜಯ ಜಯ ಯೆನುತ ರವಿಸೂನು
ಓವಿ ಶಿವನನು ನೆನೆದು ಮೆಲ್ಲನೆ
ಭಾವಶುದಿ ಯೊಳೆರಗಿ ಚರಣಕೆ
ಕಾವುದೆನ್ನ ಕರುಣಾಳು ದೇವರ ದೇವ ನೀನೆನುತ ೨೬

---

1 (ಸಂ.ಸೇ.) 2 ಳಿರುವೆನ್ನುತಸಿ 3 ಪತಿ 4 ಉಳಿತ ಗಂಗಾತರವರಾಂಗಿತ

ಹಿಡಿದು ಕರ್ಣನ ನೆಗಹಿ ಶಿವನಡಿ
ಗಡಿಗೆ ಕರುಣದಿ ನ್ಯೈದಪಿ ನೀ
ನುಡಿ ವರವ ನಾ ಕೊಟ್ಟೆ ಬೇಡಿತ ಬೇಗ ಜೆ ನೆನಲು
ಆಡಸಿಕೊಂಡಿಹೆ ಕಲ್ಲುಗಳ ನಿ
ಮ್ಮಡಿಗಳಲಿ ನಾನೇನ ಬೇಡಲಿ
ಕೊಡಲು ಬಲ್ಲರೆ ಅನ್ನದಾನವ ಕರುಣಿಸುವುದೆಂದ ೧೭

ಕೊಟ್ಟೆ ನಿನಗಾನೊಂದು ಪಟ್ಟಣ
ಕಟ್ಟಕಡೆಯು 1ಸಮುದ್ರ1 ತೀರದಿ
ಕಟ್ಟಿಕೊಂಡಿಹ 2ಲುಬ್ಧನೊಬ್ಬನೆ ಸೆಟ್ಟಿ ಸಂತ್ಯಧನ2
ಬೆಟ್ಟವಾಗಿಹುದವನ ಮನೆಯಲಿ
ಸೆಟ್ಟಿಯುತ್ತಮ ಲೋಭಿಯಾಗಿಹ
ನೆಟ್ಟನವನಾ ಸತಿಯ ಬಸುರಲಿ ಹುಟ್ಟು ನೀನೆಂದ ೧೮

ಹರುಷದಲಿ ವರವಿತ್ತು ಕರ್ಣಗೆ
ಪರಮ ಶಿವನೊಲಿದಾಗ ಕರುಣದಿ
ಹರನ ಭಕ್ತರು ಸಿರಿಯನಾಳುವರೆನಿಸಿಕೊಂಡಿಹರು
ಬರಿಸುವುದು ನಮ್ಮೆಲ್ಲರನು ನೀ
ಪುರದಲುಪ್ಪರ ಗುಡಿಯ ಕಟ್ಟಿಸು
ಇರದೆ ನೀ ಹೋಗೆಂದು ಕರ್ಣನ ಕಳುಹಿದನು ಶಿವನು ೧೯

ಇತ್ತ ಭೀಷ್ಮ ದ್ರೋಣರಿಂಗೊಲಿ
ದಿತ್ತನಾಗುತ್ತಮದ ಪದವಿಯ
ನಿತ್ತ ಭೂರಿಶ್ರವಗೆ ವರವನು ಅಮೃತಸಿದ್ಧಿಯನು
ಮತ್ತೆ ಸೈಂಧವನಾತನಯ್ಯಗೆ
ಉತ್ತಮದ ಮಣಿಮಾಡವಿತ್ತನು
ಹತ್ತೆ ಸಾವಿರ ವಿದುರ ಧೃತರಾಷ್ಟ್ರರಿಗೆ ಕರುಣಿಸಿದ ೨೦

ಧರ್ಮಜಗೆ ಮಣಿಮಯದ ಮಾಡವು
ತಮ್ಮ ಭೀಮಗೆ ಹೇಮಮಾಡವು
3ಹೆಮ್ಮೆ ಮಿಗ3 ಅರ್ಜುನಗೆ ನೀನೇ ಪೂಜನಾಗೆಂದು

1 ಸಮುದ್ರ 2 (ಪೂ.ಪಾ) ಸೆಟ್ಟಿಯೊಬ್ಬ ನಸಂತ್ಯಧನಲುಬ್ಧ 3 ಹೆಮ್ಮೆವಿಗಿ

ತಮ್ಮದಿರು ಸಹದೇವ ನಕುಲಗೆ
ಧರ್ಮಪದ ಸಿದ್ಧಿಯನು ಕೊಟ್ಟನು
ಹೆಮ್ಮೆ ಯಿಗೆ ಸುಖಪದವನಿತ್ತನು ಕುಂತಿ ದ್ರೌಪದಿಗೆ ೩೧

2ದುರುಳ2ನಭಿಮನ್ಯುವಿಗೆ ಕೊಟ್ಟನು
ಪರಮುಪದವನು ಶಂಭು ಬಳಿಕಾ
ಹರಿಸಹಿತ ಕಳುಹಿದನು ಪ್ರೇಲಗದಿಂದ ಹರುಷದಲಿ
ನಿರತಿಶಯ ಸಾಯುಜ್ಯಪದವಿಯ
ನಿರದೆ ಮಾಡಿದನಿವ*ರ್ಗೆ ಒಲವಿಂ
ಪರಮ ಗದುಗಿನ ವೀರನಾರಾಯಣನು ಕರುಣದಲಿ ೩೨

ಹನ್ನೆರಡನೆಯ ಸಂಧಿ ಸಮಾಪ್ತ

1 (ಹು. ಪ್ರ.) ತಗಳ

ಸಂಧಿ - ೧೩

ಇಂದಿರಾಪತಿಯಳಿಯನಲ್ಲಿಗೆ
ನಂದನೆಯನೊಡಗೊಂಡು ಬರುತಿರೆ
ಅಂದು ಕೃಷ್ಣನ ಹಿತದಿ ಸಲೆ ರ್ಝುಕ್ಕಿಯರು ಜನಿಸಿ1[ದ]1ರು ಪದ

ಕೇಳು ಜನಮೇಜಯ ಧರಿತ್ರೀ
ಪಾಲ ಅಭಿಮನ್ಯುವಿಗೆ ಪದವಿಯ
ಭಾಳಲೋಚನನಿಂದ ಕೊಡಿಸಿದ ಕೃಷ್ಣ ತಾನೊಲಿದು
ಪಾಲಿಸಿದನೈ ಪಾಂಡವ2[ಕ್ಷಿ]2ತಿ
ಪಾಲಕರ ಇಹಪರಕೆ ತಾನೇ
ಮೇಳವಾದನು ಮತ್ತೆ ಕೇಳಾ ಕಥೆಯ ಕೇಳೆಂದ ೧

ಮುರಮಥನ ತನ್ನಳಿಯನಲ್ಲಿಗೆ
ವರಸುತೆಯ ಕರೆತಂದು ತೋರಲು
ವರ ಸುಲೋಚನೆ ನೋಡಿದಳು ಅಭಿಮನ್ಯುವಿನ ಮುಖವ
ಪರಮ ಸುಖಸಂಗದಲಿ ಯಿಬ್ಬರ
ದರುಶನದಲಾ ದೃಷ್ಟಿಗರ್ಭವ
ಧರಿಸಿ ತಿರುಗಿದಳಬಳೆ ತಂದೆಯ ಹೊರೆಗೆ ಬೇಗದಲಿ ೨

ತಿರುಗಿ ಬರುತಿಹ ಮಗಳ ಕಂಡನು
ಮುರವಿರೋಧಿಯು ಪುತ್ರಿಯಿರವನು
ವರ ಕುಚದ್ವಯ ಕಪ್ಪು3ಪಸಿರಿಸಿ ವಳಿ3ಗಳಡಗಿರ್ದು
ಇರಲು ಸಂ4[ಕ]4ಟಗೊಳುತಲಾಕೆಯ
ಹೊರೆದ ಗರ್ಭದ ಮಕ್ಕ5ಳೀ ಎನ5
ಗರಿಗಳಹರಿಡಕೇನುಪಾಯವೆನುತ್ತ ಚಿಂತಿಸಿದ ೩

ಬಲಿದರಾದರೆ ತನ್ನ ದೇಹ
ಕ್ಕರಿಗಳಹ6ರೇ6 ಅದರ ಮುನ್ನವೆ
ಕಳೆಯ ಬೇಹುದಂ ಗರ್ಭವೆಂದು ಮುರಾರಿ ತಾ ನೆನೆದು
ತಿಳಿದು ನೋಡಿದನಾಗ ಜಲದಲಿ
7ಕಳೆವು7ಪಾಯವ ನೆನೆದನವನಿಪ
ತಿಲಕ ಕೇಳು ಮುಕುಂದನಂದು ಸರೋವರಕೆ ಬಂದ ೪

1-2 (ಸಂ.ಸೇ.) 3 ಪಸರಿಯಂಳ 4 (ಸಂ.ಸೇ.) 5 ಳಿನ 6 ರಾ 7 ಕಳಲು

ತನ್ನ ಸುತೆಯನು ಕರೆದು ಕೃಷ್ಣನು
ಮುನ್ನ ಕೊಣನಲಿ ಮುಳುಗಿ ದೇವರಿ
ಗಿನ್ನು ವಂದಿಸಿ ಬಾ ಯೆನಲು ನಡೆತಂದು ಕೊಣಕಾಗಿ
ತನ್ನ ತಂದೆಯ ಮಾತ ಮೀರದೆ
ಎನ್ನ ಕಾಯವ ನೀರೊಳಿಕ್ಕುವೆ
ಮುನ್ನ ತಾನೆಂದೆನುತ ಹೊಕ್ಕಳು ಕೊಣನ ಒಳಗಂದು ೫

ಗರ್ಭವಾ ಕೊಣನೊಳಗೆ [1]ಪ್ರವಿಸಿತು[1]
ಉಬ್ಬು ಮಾದುದು ಸತಿಯ ಹೊಟ್ಟೆಯ
ತಬ್ಬಿ ತನು ಮಾವಲ್ಲಿ[2]ಹತ್ತಿತು ಬಸುರು[2]ಬೆನ್ನಲ್ಲಿ
ಗರ್ಭ[3][ವ][3]ಳಿದಾಕೆಯನು ಮರಳಿದು
ನಿಬ್ಬರದ ತನುವಿನಲಿ ಬರುತಿಹ
ಸರ್ಬ ತನುಮಯ ರೂಪ ಕಂಡನು ತನ್ನ ನಂದನೆಯಾ ೬

ಮನೆಗೆ ಕಳುಹಿವನಾಕೆಯನು ತಾ
ಮನದ ಪರಿಣಾಮದಲಿ ಹರಿಯಾ
ಕೊಣಕೆ ಬರಲಿವ ಮನುಜನೆಂದೇ ಸುತ್ತ ಮುತ್ತಿದರು
ಕನಲಿ ಕೃಷ್ಣನ ಜರೆದು ಫಡಫಡ
ಮನುಜ ಹೋಗದಿರೆನಲು ಹರಿಯಿರೆ
ಮನುಜ[4]ನೆಂದೇ[4]ಬಗೆದಿಹಿರೆ ಯೆಂದನು ಮುರಧ್ವಂಸಿ ೭

ಆರ ಮಕ್ಕಳು ನೀವು ಇಲ್ಲಿರ
ಲಾರು ನಿಮ್ಮಯ ತಂದೆ ತಾಯಿಗ
ಳಾರು ನೀವ್ ನೀರೊಳಗೆ ಯಿಹುದಕ್ಕೇನು ಕಾರಣವು
[5]ಕಾರಣಿಕರೀ ಭೂಮಿಯೊಳು ನಾ
ವಾರ[5]ಕಂಡರು ಹಿಡಿದುಕೊಂಬೆವು
ವೀರ ನಿನ್ನನು ಕಾಯ್ದುಕೊಟ್ಟೆವು ಯೆಂದರವರಂದು ೮

ತಂದೆ ತಾನಭಿಮನ್ಯು ತಾಯಿ ಮು
ಕುಂದ ದೇವನ ಮಗಳು ಇದಿರಲಿ
ಬಂದು ಆಕೆಯ ನೋಡೆ ದೃಷ್ಟಿಯ ಗರ್ಭವಾಯ್ತಾಗ

---

1 ಶ್ರವಿಸಿತು 2 ಹತ್ತಿದು ಬಸುರ 3 (ಸಂ.ಸೇ.) 4 ರೆಂದೇ 5 ಕಾರುಣಿಕರೂ ನಾವು ಭೂಮಿಯೊಳಾರ

ಅಂದು ಆಕೆಯ ಕೋಣನೊಳಗೆ ಮುಳು
ಗೆಂದು ಹೇಳಲು ಕೃಷ್ಣ ತಾನೇ
ಬಂದು ಮುಳುಗಿಸಲಂದು ಹುಟ್ಟಿದೆವೆಂದರವರಂದು ೯

ಮೆಚ್ಚಿದೆನು ನೀವೆನ್ನಲೊಂದನು
ಇಚ್ಛೆಗಳನರಿದೆನ್ನ ಬೇಡುವು
ದಚ್ಚರಿಯತನವೇನ ನುಡಿದುದ ಸಲಿಸುವೆನು ಯೆನುತ
ಒಚ್ಚತವು ಭೂಮಿಯೊಳು ನಿವಗೆನೆ
ನಿಚ್ಛವಿಲ್ಲಾರುಗಳ ನೇಮನ
[1]ವಿಚ್ಚೆ[1]ಯಲಿ ನೀವಿಬ್ಬರುಂಬುದು ಯೆಂದನಸುರಾರಿ ೧೦

ಪಾಂಡವರ ಚರಿತವನು ಕೇಳ್ದರೆ
ಕಂತು ಬಿಡುವುದು ಯೆನ್ನ ನೆನೆದರೆ
ಹಿಂಡಿ ಹಿಳಿಯದೆ ಮಿಕ್ಕ ನಾರಿಯರಾದರೆಲ್ಲರನು
ಮಂಡಲದೊಳುಂಡಿಹುದು ನಿಮ್ಮನು
ಕಂಡು ಜಲದವರೆಂದು ಮನ್ನಿಸಿ
ಕೊಂಡು ಉಂಡಿಹುದೆಂದು ನೇಮವ ಕೊಟ್ಟನಸುರಾರಿ ೧೧

ಎಂದಡಾ ಕೃಷ್ಣನನು ಹರಸುತ
ಬಂದು ಭೂಮಿಯ ಮೇಲೆ ಯೆಲ್ಲರ
ನಂದು ಕಾಡುತ ಉಂಡು ಝುಕ್ಕಿಯರಾಗಿ ಜನಿಸಿದರು
ತಂದರಾ ಜಲದೊಳಗೆ ತಮ್ಮೊಳ
ಗಂದು ಅನಿಬರು ಸೇರಿ ನಡೆವುತ
ಅಂದು ಮುರವೈರಿಯನು ಹರಸುತ ಯಿದ್ದರವರಂದು ೧೨

ಹರಿಯ ಲೀಲಾಮಾತ್ರವೆಲ್ಲವು
ಹರಿಸುತಿಹ ಜಗದೊಳಗೆ ಯಾ
ಹರಿಯೊಳಗೆ ಜಗ[2]ವಿಹುದು ಸರ್ವಂ[2] ವಿಷ್ಣುಮಯ ಜಗವು
ಹರಿಯ ನಾಮದ ಬಲುಮೆಯುಳ್ಳರಿ
ಗರಿದೆನಿಸುವಡೆ ಸ್ವರ್ಗಸಂಪದ
ಅರಸ [3]ನಿನ್ನವ[3]ಗೆಂದು ಜನಮೇಜಯಗೆ ಮುನಿ ನುಡಿದ ೧೩

---

1 ದಿದ್ದೆ 2 ವಿರುತಿಹುದು ಸರ್ವ 3 ನಿನಿಂನವ

ಅತ್ತಲಾ ಪಾಂಡವರು ದಿನದಿನ
ಕುತ್ತರೋತ್ತರ ಪದವ ಪಡೆದರು
ಹತ್ತಿರೋಽಿಸಿದರು ಶಿವನನು ಹರಿಯನೊಲವಿನಲಿ
ನಿತ್ಯವಾದರು ತಮ್ಮ ನೇಹದ
ಮಿತ್ರರೆಲ್ಲರಿಗಮರ ಪದವಿಯ
ನಿತ್ತ ಕೊಡಿಸಲು ಸ್ವರ್ಗವಾಸಿಕರಾದರವರೆಲ್ಲ ೧೪

ಧರೆಯಲಷ್ಟೈಶ್ವರ್ಯ ಸುಖಪದ
ವಧಿಕ[1] [ವಃ][1] ಸುಖಪದವೊಳಗೆ [2]ಕೋ
ಟ್ಯಧಿಕವಾ[2] ಸ್ವರ್ಗದ ಪದವು ಕೋಟಿಸುಖ[3] [ಯಾಗಿಹುದು][3]
ಸುರರ ಪದ ನೂರ್ಕೋಟಿಗಧಿಕವು
ಸರಸಿಜಾಸನ ಪದವು ಹಿಂದಣ
ಪರಿಯಲದರಿಂದಧಿಕ ಸುಖಪದ ಪಾಂಡವರಿಗೆಂದ ೧೫

ಆ ಸುಖದೊಳೋಲಾಡುತನುದಿನ
ವಾಸುದೇವನು ಪತಿಕರಿಸಿಕೊಂ
ಡಾ [4]ಸಮಸ್ತದ[4] ಕಿರಣತೇಜಂಗಧಿಕ ತೇಜದಲಿ
ಭೂಸತೀವಲ್ಲಭನು ಪಾಂಡವ
*ಗೇಸು ಸುಖಸಂಪದವ ಕರುಣಿಸಿ
[5]ಶ್ರೀ ಸತೀ[5]ವಲ್ಲಭನು ಗದುಗಿನ ವೀರನಾರಾಯಣ ೧೬

ಗುರುವರೇಣ್ಯನೆ ಪಾಂಡುಪುತ್ರರ
ಕರೆದು[6]ಕೊಂಡೊಯಿದಾ[6] ಮುಕುಂದನ
ಚರಣಕಮಲವ ನೆನೆದು ಭಜಿಸುವೆನನುದಿನಂ ಬಳಿಕೆ
ವರ ಮಹಾಭಾರತವ ರಚಿಸಿದ
ಸಿರಿ ಕುಮಾರವ್ಯಾಸ ದೇವರ
ಚರಣವನು ನೆನೆವುತ್ತ ಸ್ವರ್ಗಾರೋಹಣದ ಕಥೆಯ ೧೭

ವಿರಚಿಸಿದೆನೀ ಕೃತಿಯನೆಲ್ಲರು
ಕರೆಕರೆದು ಕೇಳ್ದಲ್ಲಿ ತಪ್ಪಿದ
ಡಿರದೆ ತಿದ್ದುವುದಾಗ ಕೇಳ್ದರಿಗಹುದು ಪುಣ್ಯಫಲ

1–3 (ಸಂ.ಸೇ.) 2 ಶತಕೋಟ್ಯಧಿಕವು 4 (ಸೂ.ಪಾ) ಸಹಸ್ರದ 5 ಶ್ರೀಪತಿ
6 ಕೊಂಡೈದಾ

ವರ ಮಹಾದಿವ್ಯಾಸ 1ದೇ[ವೋ
ತ್ತಮನ]1 ಪದವಿಡಿದನುಪಮದ ಕೃತಿ
ಯಿದನು ಕೇಳ್ದರೆ 2[ನಿರುತ ದೊರೆವುದು]2 ಸಕಲ ಸಿದ್ಧಿಯದು ೧೮

ಈ ಮಹಾಭಾರತದ ಕಥೆಯನು
ಭೂಮಿಯೊಳಗಾರಾದರೆಯು ಮಿಗೆ
ನೇಮದಲಿ ಕೇಳಿದರೆ ಪುಣ್ಯದ ಫಲವದನವರತ
ಕಾಮಹರ ಕರುಣಿಸುವನವರಿಗೆ
ಪ್ರೇಮದಿಂ ಮುಕ್ತಿಯನು ಕೊಡುವನು
3[ಅನುದಿನಂ]3 ಪೇಳುವುದೂ ಕೇಳ್ವುದು ಪಾಂಡವರ ಕಥೆಯ ೧೯

ಒಂದು ಪದವನು ಕೇಳಿದರೆ ಸಾ
ಕೊಂದರೊಳಗರ್ಥವನು ಸಾಕಾ
ವೊಂದು ಅರ್ಥದೊಳೆರಡು ಚರಣವ ಕೇಳಿದರೆ ಸಾಕು
ಒಂದು ವಾಕ್ಯವ ಕೇಳಿದವರಿಗೆ
ಒಂದು ಅಕ್ಷರ ಕೇಳಿದವರಿಗೆ
ಕುಂದದಿಹ ಪರಪದವನೀವನು ವೀರನಾ4[ರ]4ಯಣ ೨೦

ಹದಿಮೂರನೆಯ ಸಂಧಿ ಸಮಾಪ್ತ

ಸ್ವರ್ಗಾರೋಹಣ ಸಮಾಪ್ತ

---

1 ಶೇಷನ ಉತ್ತ x x 2 (ಸಂ.ಸೇ.) 3 (ಸೂ.ಪಾ.) ನೇಹದಿಂ 4 ರಾ

ಸಂಧಿ - ೧೪

ಕೇಳಿಸಿದ ಜನಮೇಜಯಗೆ ಮುನಿ
ಪಾಲ ವೇದವ್ಯಾಸ ದೇವರು
ತಾಳಿಸಿದರವತಾರ ಪಾಂಡವ ಕೌರವರ ಜನಿತ
ಶ್ರೀಲತಾಂಗಿಯ ರಮಣ ಕೃಷ್ಣನು
ಪಾಲಿಸಿದನರಗಿನಲಿ ಐವರ
ಮೇಲೆ ಮದುವೆಯ ಮಾಡಿ ಕಾಯ್ದ[1]ನು ಆದಿಪರ್ವದಲಿ ೧

ರಾಜಸೂಯವ ಮಾಡೆ ಪಾಂಡವ
ರಾಜತನವನು ಪಾಂಡುಪುತ್ರರ
ಜೂಜಿನಲಿ ಸೋಲಿಸಿದ ಪಾಂಚಾಲಿಯನು ಸಭೆಯೊಳಗೆ
ರಾಜವದನೆಯ ಭಂಗಪಡಿಸಲು
ಮೂಜಗತ್ಪತಿ ಲಕ್ಷ್ಮಿಯರಸನು
ಆ ಜನಾರ್ದನ [2]ಕಾಯ್ದು[2]ಕೊಂಡನು [3]ಸ[ಭೆಯು][3] ಪರ್ವದಲಿ ೨

ದೇಶವನು ಬಿಟ್ಟಡವಿಯಲಿ ವನ
ವಾಸದಲಿ ಪಾಂಡವರು ಇರೆ ದೂ
ರ್ವಾಸ ಮುನಿಪತಿ ಬಂದು *ಗ್ರಾಸವ ಬೇಡೆ ಧರ್ಮಜನ
ಆ ಸಮಯದಲಿ ಕೃಷ್ಣ ಭುಕ್ತಾ
ಶೇಷ ಭೋಜನದಿಂದ [4]ತುಷ್ಟ[4]ನು
ಹೇಶ ಪಾರ್ಥಂಗಿತ್ತ ಶರ[4a][ವ ಅ][4a]ರಣ್ಯಪರ್ವದಲಿ ೩

ಬಂದು [5]ವಿರಾಟನಲ್ಲಿ[5] ಪಾಂಡವ
ರಂದಿರಲು ಕೀಚಕನು ವರ [6]ಸೈ
ರಂಧ್ರಿ[6]ಗಳುಪಿಯೆ ಪೋದ [7]ಸುದ್ದಿ[7]ಯ ಕೇಳಿ ಕುರುರಾಯ
ಬಂದು [8]ಗೋಗ್ರಹಣ[8]ದಲಿ ತುರುಗಳ
ವೃಂದವನು ಮರಳಿಸಲು ನರನೈ
ತಂದು ತುರುಗಳ [9]ತಿರುಹಿತಂದ ವಿರಾಟಪರ್ವದಲಿ ೪

---

1 ಕಾಯಿದ 2 ಕಾಯಿದು 3 ಭಾ 4, ತೃಪ್ತಿ 4a ಪಾ 5 (ಸೂ.ಪಾ.) ವೈರಾಟನಲಿ
ಸೈರಂಧ್ರಿ 7 ಶುದ್ಧಿ 8 ಗೋಗ್ರಾಹ 9 (ಸೂ.ಪಾ.) ತಿರುಗಿಸಿದನು

ದೇವ ನಾರಾಯಣನು ಕಪಟದ
ಭಾವದಲಿ ಉದ್ಯೋಗ ಸಂಧಿಯ
ಠೀವಿ ಮಾಡಿದ ವಿದುರನರಮನೆಯಲ್ಲಿ ಪಾಲುಂಡು
ಭೂವರನು ಕೌರವನ ಸಭೆಯಲಿ
ಭಾವದಿಂದ್ವೈದೂರ 1ಬೇಡಲು1
ಈವುದಿಲ್ಲೆನೆ ಕಣಕೆ ನಡೆದರು*ದ್ಯೋಗ ಪರ್ವದಲಿ ೫

ಅರಸ ಭೀಷ್ಮಗೆ ಪಟ್ಟಗಟ್ಟಲು
ಧರೆಯ ರಾಯರ ಕೂಡೆ ಯುದ್ಧದ
ನೆರವಣಿಗೆ ರಣಭೂಮಿ ನಾಲ್ವತ್ತೆಂಟು ಯೋಜನವ
ಕರೆಸಿದನು ಪಾಂಡುವಿನ ಪುತ್ರರ
ಎರಡು ಪಕ್ಷವು ಬೆರಸಿ ಕಾದಲು
ಸರಳ ಮಂಚದ ಮೇಲೆ ಮಲಗಿದ ಭೀಷ್ಮಪರ್ವದಲಿ ೬

ಗುರುಗಳಿಗೆ ಪಟ್ಟಾಭಿಷೇಕವ
ದೊರೆಯು ಮಾಡಲು ಚಕ್ರ*ವ್ಯೂಹವ
ನಿರದೆ ಪಾರ್ಥನ ನಂದನನು ಹೋಗಲ್ಕೆ ಯುದ್ಧದಲಿ
ದುರುಳತನದಲಿ ಹೊಕ್ಕು ಮಡಿದನು
ನರನು ಸೈಂಧವಶಿರವನುರೆ ಕ
ತ್ತರಿಸಲೆಚ್ಚನು ದ್ರೋಣನಳಿದನು ತನ್ನ ಪರ್ವದಲಿ ೭

ವೀರ ಕರ್ಣಗೆ ಪಟ್ಟಗಟ್ಟಿದ
ಕೌರವನು ಷಣ್ಮುಖನು ಹುಟ್ಟಿದ
ಮೂರು ಪುರಗಳ ಸುಟ್ಟ ಕಥೆಯನು ಹೇಳಿ ಬೋಳೈಸಿ
ಸಾರಥಿಯ ಮಾಡಿದನು ಶಲ್ಯನ
ವೀರನರ್ಜುನನೊಡನೆ ಕಾದಲು
ಧಾರುಣಿಗೆ ರವಿತನಯ ಮಡಿದನು ಕರ್ಣಪರ್ವದಲಿ ೮

ಸೂತಜನು ಮಡಿದಲ್ಲಿ ಯುದ್ಧ
ವ್ರಾತ ನೆರೆ1ಹೋಯ್ತೆಂದು1ಶಲ್ಯನು
ಪ್ರೀತಿಯಿಂ ಕುರುಪತಿಗೆ ನುಡಿದನು ಅರಿಬಲಕೆ ತಾನು

1 ಬೇಡಿಸಲು 2 ಹೋಯಿತೆಂದು

ಆತು ಕಾದುವೆನೆಂದು ನಡೆದನು
ಖ್ಯಾತದೊ1ಳುಮಾದ್ರೀ1ಶ ಯುದ್ಧದೊ
ಳಾಂತು ಮಡಿದನು ಅರ್ಧದಿನವಾ ಶಲ್ಯಪರ್ವದಲಿ ೯

ಪಡುರ2ಥ2ರ ಬಲವೆಲ್ಲ 3[ಮು]3ಗ್ಗಿತು
ಒಡೆಯ ಕುರುಪತಿ ನಡೆಯೆ ಸಮರದಿ
ಕಡುಗಿ ಕಾದಲು ಭೀಮಸೇನನು ಬಾಹುಸತ್ವದಲಿ
ಹೊಡೆದ ಗದೆಯಲಿ ರಾಯ ಜೀವವ
ಬಿಡದೆ ಶಿಶುಗಳ ತಲೆಯ ತರಿಸಿದ
ಕಡೆಯ ಕಾಳಗವಾಯ್ತು ಭಾರತ ಗ4[ದೆಯೆ]4ಪರ್ವದಲಿ ೧೦

ರಣದೊಳಗೆ ಬಿದ್ದವರ ಹೆಂಡಿರು
ಹೆಣನ ಕಾಣುತ ಬೆದರಿ ಅಳುತವೆ
ಮಣಿಮಣಿದು ಬೀಳುತ್ತ ತಮ್ಮಯ ಪುರುಷರನು ಕಂಡು
ಹಣೆಗೆ ಹಣೆಯನು ಚಾಚಿ ಕಣ್ಣಿನ
ಕುಣಿಕೆಯಲಿ ಜಲಸುರಿಯೆ ರಾಯರ
ವನಿತೆಯರು ಸೊಸೆಸಹಿತ ಮಡಿದರು ಸ್ತ್ರೀಯಪರ್ವದಲಿ ೧೧

ಮುಂದೆ ಕರ್ಮವು ಜರಿಯೆ ಧರ್ಮಜ
ಬಂದು ವೇದವ್ಯಾಸ ಧೌಮ್ಯರಿ
ಗೆಂದೆನಲು ಪೌರೋಹಿತರು ಮೇಲಾದವರು 5[ಬಂದು]5
ಆಂದು ಅಸ್ಥಿಯ ದಹನಪೂರ್ವಕ
ದಿಂದ 6ಏಕಾದಶಿಯ ದಿನ6*ವ್ರತ
ದಿಂವ ಭೂರಿ ಶ್ರಾದ್ಧ 7ಮಾಡ್ದರು7 ಸೂಕ್ತಪರ್ವದಲಿ ೧೨

ಅರಸ ಧರ್ಮ8[ಜ]8 ಬಂದು ಭೀಷ್ಮಂ
ಗೆರಗಿ ಕಂಬನಿದುಂಬಿ ನುಡಿದನು
ಪರಮ ಮಿತ್ರ ಜ್ಞಾತಿ ಬಾಂಧವರೆಲ್ಲರನು ಕೊಂದು
ಧರೆಯ 9ಸಾಳ್ವ9ದಿಂದ ದೇಶಾಂ
ತರವ ಹೋಗುವೆನೆನಲು ಸತ್ಕಥೆ
ಯರುಹಿ *ಪ್ರಾಣವ ಬಿಟ್ಟ ಭೀಷ್ಮನು ಶಾಂತಿಪರ್ವದಲಿ ೧೩

---

1 ಳ್ಮಾದ್ರಿ 2 ತ 3 ಮು 4 ದಾ 5 ನಡೆತಂದು 6 ದಿನ ಏಕಾದಶಿಯ 7 (ಸೂ.ಪಾ.) ಗೈದರು 8 (ಸಂ.ಸೇ.) 9 ನಾಳಂದ

ಅಂಧಕನು ತಾ ಕೇಳಿ ಮನದಲಿ
1ನೊಂದು1 ರಾಯನ 2ಕರೆಯೆ2 ಪೋಗಲು
ಕಂದ ಬಾರೈ ರಾಯ ಧರ್ಮಜ ತನ್ನ ಕೌರವನ
ಕೊಂದ ಭೀಮನನಪ್ಪಿಕೊಂಬೆನು
ಯೆಂದೆನಲು 3ಲೋಹದ3 ಪ್ರತಿಮೆಯ
ತಂದು ಮುಂದಿಡೆ ಅಪ್ಪಿಕೊಂಡನು ಐಕ್ಯಪರ್ವದಲಿ ೧೪

ತುರಗವನು ಶೃಂಗರಿಸಿ ಬಿಟ್ಟರು
ಧರೆಯ ರಾಯರ ಮೇಲೆ ಕಪ್ಪವ
ತರುತ ನಡೆವರು ಪಾರ್ಥನೊಡನಾ ಬಾಹುವಿಕ್ರಮರು
ಪರಿಪರಿಯ ರತ್ನಗಳ ಹೇರಿಸಿ
ತರಿಸಿ ಗಜಪುರದೊಳಗೆ ನೆರಹಿಯೆ
ಕರೆಸಿ ಭೂಸುರ4*ರ್ಗಿತ್ತು4 ಮಾಡಿದರಶ್ವಮೇಧದಲಿ ೧೫

ಕಲಿಯುಗ5[ವು]5 ಬರೆ ಮುಂದೆ ವಿಪ್ರರು
ನೆಲೆಯನರಿಯರು ಯೆಂದು ಕೃಷ್ಣ6ನು6
ತಿಳಿದು ಯಾದವರೆಲ್ಲರಾ ಮುನಿವರನ ಶಾಪದಲಿ
ಬೆಳೆದ ಶಾಡ್ವಲದಿಂದ ತಮ್ಮೊಳು
ಕಲಹವಿಕ್ಕಿ *ಪ್ರಭಾಸಕ್ಷೇತ್ರದಿ
ಬಲಭುಜರು ತಾವೆಲ್ಲ ಮಡಿದರು ಮುಸಲಪರ್ವದಲಿ ೧೬

ವರುಷ ಮೂವತ್ತಾರು ರಾಜ್ಯವ
ಸ್ಥಿರದಿ ಬಾಳಲು ಕಲಿಯ ಕಾಣುತ
ಧರೆಯನೆಲ್ಲವ ನೆರೆ ಪರೀಕ್ಷಿ7ತಗಿತ್ತು ತಾವ್7 ಬಳಿಕ
ತೆರಳಿದರು ಬಹು ಪಥವಿಡಿದು ಪರಿ
ಪರಿಯ ಪರವಶರಾಗುತವೆ ಹಿಮ
ಗಿರಿಯ ಪಥದೊಳು ನಡೆದರಾ8[ಗ]8 *ಪ್ರಹಸ್ತಪರ್ವದಲಿ ೧೭

ನಡೆದರ್ಕೈ ಪಾಂಡವರು ಯೆಲ್ಲರು
ಗಡಣದಲಿ ಹಿಮಗಿರಿಯ ಹೊಯಿಲಲಿ
ನಡುಗಿ ಬಸವಳಿದಲ್ಲಿ ಕೈಕಾಲ್ಮುರುಟಿ ನೆರೆ ಬಿದ್ದು

1 ನೊಂದ 2 ಕರೆಯು 3 ಲೋಹದಲಿ 4 ಗಿತ್ತು 5 ವಿಯಯು 6 ರನು 7 ತಂಗಿತ್ತು ತಾವು 8 (ಸಂ.ಸೇ.)

ಮಡಿದರೆಲ್ಲರು ಧರ್ಮರಾಯಗೆ
ಕಡೆಯ1ಲರಿ1ವಾಯ್ತಾಗ ಹರಿಹರ
ಬಿಡದೆ ಮುಕ್ತಿಯನಿತ್ತ 2*ಸ್ವರ್ಗಾರೋಹ2ಪರ್ವದಲಿ ೧೮

ಹದಿನಾಲ್ಕನೆಯ ಸಂಧಿ ಸಮಾಪ್ತ

ಸೂತಭಾರತ ಸಮಾಪ್ತ

---

1 ಲರು 2 ಸ್ವರ್ಗಾರೋಹಣದ

ಅನುಬಂಧ—೧

ಅಪೂರ್ಣ ಪದ್ಯಗಳು
(ಅಪರಿಷ್ಕೃತ)

ಸಂಧಿ ೧—ಪದ್ಯ ೪೯ರ ಬಳಿಕ :

ಹೊರಿಗೆಯಲಿ ಸಿರಿವಂತರಾದರು
ಕರಸಿ ಭಟರಿಂಗಂದು ಭೂಪತಿ
ವರ ರತುನ ವಾಹನವನಿತ್ತನು ಉಚಿತ ದಾನದಲಿ

ಸಂಧಿ ೨—ಪದ್ಯ ೭ರ ಬಳಿಕ :

ಈ ಲಲಿತ ಚತುರಾಬ್ಧಿ ಮಧ್ಯದ
ಪಾಲಕರ ಮಣಿಮಸ್ತಕಂಗಳ
ಮೇಲಿಡುವ ನಿರ್ಮಲದ ಪದಮಳದ ಯುಗವೆಂದೊದರುತಿರೆಭೂಪ

ಸಂಧಿ ೩—ಪದ್ಯ ೧೯ರ ಬಳಿಕ :

ವರ ಪುರೋಹಿತರನ್ನು ಚಿಕಿತ್ಸ
ಕರನು ಸುಧಾರರ ಬೋನದವರ
ನು ನಿಲಿಸಿದನು ಮುಗಾವುದ ಬಟ್ಟೆಯಲಿ ತಾನಂದು
ಉರವಣಿಸಿ ನಡೆನಡೆದು ನಾಲುಕು
ವರೆಯಗಾವುದ ಬಟ್ಟೆಯಲಿ ಕಳು
ಹಿದರು ಹಡಪದ ಪಾಣಿಕಾರಕರ

ಸಂಧಿ ೩—ಪದ್ಯ ೩೦ರ ಬಳಿಕ :

ತಂದೆ ಮಜ್ಜನ ದೇವಪೂಜೆಗ
ಳಿಂದ ಭೋಜನದಿಂದ ನೀ ಖಗ
ದಿಂದ ಬಾಣಸಿನ ಮನೆಯುಲ್ಲಾ ಗೃಹಂಗಳಲಿ
ಸಂದ ವೈದ್ಯರ ಹಡಪ ಕುಡಿನೀ
ರಿಂದ ಶೋಧಿಸಿ ನಡೆವುದೈ ನೀ
ನೆಂದು ಧರ್ಮಜನಪ್ಪಿ ಬೋಳೈಸಿ

ಸಂಧಿ ೪—ಪದ್ಯ ೧೨ರ ಬಳಿಕ :

ರಾಯ ಸತಿಯರ ವದನವೆಂಬಾ
ಛಾಯಮಂಡಲ ವನಿತುವನು ನೆರೆ
ಭಾಧಿಸುವ ಕೋಳಾಹಳದ ವೊತ್ತವಿದೂ
ಪೂಜಿಸುತ್ತಿಹ ಕಬರಿಭರದಲಿ
ರಾಯರಾವೆಡೆಯೆನುವದರಿತು ಪುರದ ನಾರಿಯರೂ

ಸಂಧಿ ೬—ಪದ್ಯ ೩ರ ಬಳಿಕ :

ಡೆಯಲಿ ಅರುಣಕಿರಣಂ ತೋರಿ ಶಶಿ ಜಾರೆ
ವಿರಹ ಬೀತುದು ಚಕ್ಕವಕ್ಕಿಗೆ
ಹರುಷವಡಗಿತು ಉತ್ಪಲಾಳಿಗೆ
ಸರಸಿರುಹನಾಗಲುವಯಾ ಗಿರಿಗೈತಂದನಾ ದಿನಪ

ಸಂಧಿ ೬—ಪದ್ಯ ೧೦ರ ಬಳಿಕ :

ಮತ್ತೆ ಕೇಳವನೀಶ ಸಾಲ್ದಿಸೆ
ಯ ಬೇಗೆಯ ಕಿಚ್ಚಿನುಬ್ಬರ
ಸುತ್ತ ಮುತ್ತಿತು ಪಾಂಡುಸುತರನುಯೆನಾ ಮುನಿಪ

ಅನುಬಂಧ—೨

ಶಬ್ದಕೋಶ

		ಸಂಧಿ	ಪದ್ಯ
ಅ			
ಅಂಜಳಿ	ಬೊಗಸೆ	೭	೪
ಅಂಜಲೆ	ಪೀಡಿಸು ; ತೊಂದರೆಕೊಡು	೩	೧೦
ಅಂಧಕ	ಕುರುಡ (ಧೃತರಾಷ್ಟ್ರ)	೧೪	೧೪
ಅಂನಕ	ವರೆಗೆ ; ತನಕ	೧೭	೫
ಅಕ್ಕೆ (<ಅಳ್ಕೆ)	ಅಳುವಿಕೆ ; ವಿಲಾಪ	೪	೧೬
		೮	೨೯
ಅಗಸ್ತ್ಯ	ಬುದ್ಧಿಗೆಟುಕದ	೧೦	೩೧
ಅಗ್ರ	ಶ್ರೇಷ್ಠ, ಹೆಚ್ಚಿನ	೧	೪೩
ಅಟ್ಟಿತು	ಅಡುಗೆಯಾಯಿತು	೮	೨೪
ಅಟ್ಟುಳಿ	ಹಿಂಸೆ	೮	೨೪
ಅಡಾಯುಧ	ಒಂದು ಬಗೆಯ ಕತ್ತಿ	೧	೩೫
ಅದ್ವಯ	ಎರಡಿಲ್ಲದ ; ಅದ್ವಿತೀಯ	೧೧	೫
ಅಧಿಧಾತ್ರಿಕ ಜನ	ದೇವತೆಗಳು	೨	೯
ಅನಲಾತ್ಮಜೆ	ದ್ರೌಪದಿ	೬	೩
ಅನೃತ	ಸುಳ್ಳು	೨	೩
ಅಪರ	ಪಶ್ಚಿಮ ದಿಕ್ಕು; ಹಿಂದುಗಡೆ	೬	೧೩
ಅಬುಜ ಭವಾಂಡ	ಬ್ರಹ್ಮಾಂಡ	೧	೨೬
ಅಬುಜಾಂಬಕ	ವಿಷ್ಣು	೧೧	೭
ಅಬುಜಾಸನ	ಬ್ರಹ್ಮ	೬	೧೮
ಅಭ್ರ	ಆಕಾಶ	೬	೨೨
ಅರೆವರಿಸು	ತಿರಸ್ಕರಿಸು, ಕೈಬಿಡು	೧೦	೨೨
ಅವಗಡ	ತೊಂದರೆ	೧	೧೬
ಅವಚು	ಇರಿಸು, ತೊಡಿಸು	೧	೪೫

		ಸಂಧಿ	ಪದ್ಯ
ಅವಧಾರು	ಮನಸ್ಸಿಟ್ಟು ಕೇಳು	೧	೪೪
ಅಳುಪು	ಅತಿ ಆಸೆಪಡು	೩	೨೯
		೧೪	೪
ಆ			
ಆಕೆವಾಳ	ವೀರ, ಯೋಧ	೪	೧೨
ಆಖಂಡಲ	ದೇವೇಂದ್ರ	೧೦	೧೦
ಆಗು	ಭವಿಷ್ಯ	೨	೧೩
ಆಚಮನ	ಆತ್ಮಶುದ್ಧಿಗೋಸ್ಕರ ಅಂಗೈಗುಳಿಯಲ್ಲಿ ಶುದ್ಧೋದಕವನ್ನು ಮಂತ್ರಪೂರ್ವಕ ಕುಡಿಯುವುದು	೬	೩೬
ಆತ್ಮಜಾತ	ಮಗ	೨	೨೫
ಆನೀಕ	ಸಮೂಹ	೨	೪
ಆಯತಿಕೆ	ಘನತೆ	೩	೮
ಆರಡಿ	ದೂರು, ಅಪವಾದ	೧	೪
ಆರಣ್ಯ	ಕಾಡು	೫	೬
ಆರದೆ	ಶಕ್ತನಾಗದೆ, ಸಮರ್ಥನಾಗದೆ, ಸೈರಿಸಲಾರದೆ	೮	೨೫
ಆರು	ಗರ್ಜಿಸು	೬	೨೮
ಆರುಗುಣ	ಷಡ್ಗುಣ (ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯ)	೩	೩೦
ಆಲಿಸು	ನೋಡು	೧೨	೧೨
ಆವರಿ	ಊಗ	೩	೩೭
ಆಶಿಷ	ಬಯಕೆ	೨	೧೪
ಆಶೆ	ಆಶ್ರಯ, ಆಸರೆ	೬	೧
ಆಸುರ	ಭೀಕರ, ಅತಿಶಯ	೩	೩೧
ಆಹುದು	ಆಗುವುದು	೯	೩೩
ಆಳಿ	ಸಮೂಹ	೧	೨೯
ಆಳಿ	ವಂಚನೆ	೩	೩೨
ಆಳಿಗೊಳ್ಳು	ಮೋಸಹೋಗು	೩	೨೪

		ಸಂಧಿ	ಪದ್ಯ
ಇ			
ಇಷು	ಅಣಿಗೊಳಿಸು	೧	೨೫
ಇಭಪುರ	ಹಸ್ತಿನಾವತಿ	೪	೩೦
ಉ			
ಉಗು	ಹೊರಹೊಮ್ಮು, ಚೆಲ್ಲು	೪	೫
ಉಗ್ಗಡಿಸು	ಘಂಟಾಕು ಹೇಳು	೩	೧೦
ಉತ್ಕರ	ರಾಶಿ, ಸಮೂಹ	೧	೪೩
ಉತ್ತರಿಸು	ದಾಟು	೫	೧
ಉದಧಿ	ಸಮುದ್ರ	೩	೩೭
ಉದ್ದಳಿಸು	ಸೀಳು, ಭೇದಿಸು	೯	೯
ಉದ್ದಾಮ	ಶ್ರೇಷ್ಠ	೩	೧೭
ಉನ್ನಲ	ಒಂದು ದೇಶ	೧	೨೪
ಉಪ್ಪರ	ಎತ್ತರ	೧೨	೨೯
ಉಪ್ಪಾರತಿ	ಉಪ್ಪಿನ ಆರತಿ (ದೃಷ್ಟಿ ತೆಗೆವುದಕ್ಕಾಗಿ)	೧	೪೭
ಉಬ್ಬಟೆ	ಅತಿಶಯ, ಹೆಚ್ಚಳ, ಕಾಟ	೮	೧
ಉಬ್ಬಣ	ಲಾಳವಿಂಡಿಗೆ, ಒಂದು ಬಗೆಯ ಯುದ್ಧ ಸಾಧನ	೧	೩೫
ಉರುತರ	ಹೆಚ್ಚಾದ	೧	೫೧
ಉರುಬು	ಸಮೂಹ	೮	೩
		೨೮	೨೯
ಉರುವ	ಶ್ರೇಷ್ಠ, ಅತಿಶಯವಾದ	೨	೧೯
ಉಱುವಣಿಸು	ಆತುರಪಡು, ತವಕಿಸು	೫	೩೧
ಊ			
ಊರು	ತೊಡೆ	೬	೩೧
ಊಳಿಗೆ	ಆಳು	೫	೨೪
ಎ			
ಎರಳೆ	ಜಿಂಕೆ	೫	೨೧
ಎಳಗಂದಿ	ಹೊಸದಾಗಿ ಕರು ಹಾಕಿರುವ ಹಸು, ಎಳಗರುವಿನ ತಾಯಿ	೯	೨೦

		ಸಂಧಿ	ಪದ್ಯ
ಏ			
ಏಳಿಲ	ತಿರಸ್ಕಾರ, ಅವಮಾನ	೩	೩೭
ಐ			
ಐದನೆ	ಇದ್ದಾನೆ	೧೦	೭೬
ಒ			
ಒಕ್ಕಲಿಕ್ಕು	ಹೊಡೆ, ನಾಶಮಾಡು	೫	೮
ಒಗು	ಹೊರಸೂಸು	೧	೧೫
ಒಗ್ಗು	ಸಮೂಹ	೬	೬
ಒರ್ಗಡಿಸು	ಒಂದು ಕಡೆಗೆ ಹೊರಳು, ಓಲು	೯	೭೩, ೪೫
ಒಚ್ಚತ	ಸಮತೆ	೧೩	೧೦
ಒತ್ತು	ಸಮೂಹ, ಗುಂಪು	೧೭	೮
ಒರೆ	ಸ್ರವಿಸು	೬	೩
ಓ			
ಓ	ಪ್ರೀತಿಸು	೧೭	೭೬
ಓಘ	ಸಮೂಹ, ಪ್ರವಾಹ	೩	೧೬
ಓಳಿ	ಸಾಲು, ಶ್ರೇಣಿ	೧೭	೧೭
ಓವರಿ	ಒಳಮನೆ, ಕೋಣೆ	೧೭	೩
ಓವಿ	ಪ್ರೀತಿಸಿ, ಸಂತೋಷಿಸಿ, ಧ್ಯಾನಿಸಿ	೩	೪೧
ಔ			
ಔಕುಳ	ಅಮುಕುವಿಕೆ, ನೆಟ್ಟುವಿಕೆ ; ಹಿಂಸೆ	೫	೧೩
ಕ			
ಕಂಚೀಳೆ	ಒಂದು ಜಾತಿಯ ಮರ ಮತ್ತು ಅದರ ಹಣ್ಣು	೬	೫
ಕಂತು	ಮನ್ಮಥ	೭	೪
ಕಂತುಪಿತ	ಕೃಷ್ಣ	೭	೪
ಕಂದ	(<ಸ್ಕಂಧ) ಹೆಗಲು	೮	೪೪
ಕಂದು	ಕಳಂಕ	೪	೩೩
ಕಕ್ಕೆ	ಹಳದಿ ಹೂವು ಬಿಡುವ ಮರ	೬	೫

		ಸಂಧಿ	ಪದ್ಯ
ಕಟ್ಟೆ	ಮೀಸಲಾಗಿ, ಮುಡಿಪಾಗಿ (?)	೮	೨೪
ಕಠಾಹಿರಿ	ಕಠಾರಿ, ಕತ್ತಿ	೧	೩೫
ಕಡಿಯಾಣ	ಕಡಿವಾಣ	೧	೩೬
ಕಡುಗಿ	ಬಯಸಿ, ಗರ್ವದಿಂದ ; ಹುರುಪಿನಿಂದ	೮	೪
ಕಡುಗು	ಸಿಟ್ಟುಗೊಳ್ಳು	೧೪	೧೦
ಕಡುಹು	ಸಾಮರ್ಥ್ಯ	೬	೩೦
ಕಣ	ಯುದ್ಧರಂಗ	೧೪	೫
ಕಬ್ಬಿ	ಕಡಿವಾಣ	೧	೩೬
ಕಮ್ರರ	ಕಂಚಿನಿಂಬೆಯ ಮರ	೬	೬
ಕರಕ	ಲಾಳ	೧	೩೬
ಕರ್ಹರ	ಒಂದು ದೇಶ	೧	೨೪
ಕಲಕಲ	ತಳಮಳ, ಸಂಕಟ	೭	೫
ಕಲಿಕಿ	ಕಲ್ಕಿ	೧	೪
ಕಲ್ಪ	ಸಹಸ್ರ ಯುಗ ; ವೇದದ ಅಂಗ	೪	೩೧
ಕವಿ	ಕುದುರೆಯ ಕಣ್ಣಿನ ಮರೆ ; ಕಣ್ಣುಪಟ್ಟಿ	೧	೩೬
ಕಾಂಚನ	ಚಿನ್ನ	೧	೪೯
ಕಾಷಾಂಬರ	ಕಾವಿಬಟ್ಟೆ	೫	೪
ಕಾಹು	ಉಷ್ಣತೆ, ಕಾವು	೬	೩
ಕಾಹುರ	ಉದ್ವೇಗ, ರಭಸ	೪	೯
ಕಾಳು	ಕೆಟ್ಟದ್ದು, ಕೀಳು	೨	೨೭
ಕಿಲ್ಬಿಷ	ಪಾಪ, ಕಳಂಕ	೫	೧
ಕೀನಸ	ಕೀನಾಶ, ಯಮ	೧೦	೧೬
ಕೀವು	ರಸಿಕೆ	೧೦	೩೪
ಕುಕ್ಕುರ	ಕುರ್ಕುರ, ನಾಯಿ	೯	೩೪
ಕುಠಾರ	ಕೊಡಲಿ	೧	೨
ಕುಚಿಕೆ	ಕೊನೆ, ತುದಿ	೧೪	೧೧
ಕುರಂಗಿ	ಹೆಣ್ಣು ಜಿಂಕೆ	೬	೮
ಕುಲಿಶಧರ	ದೇವೇಂದ್ರ	೧೦	೧೭
ಕುಳ	ಕಬ್ಬಿಣದ ಸಲಾಕೆ	೧	೩೬
ಕೃಷ್ಣೆ	ದ್ರೌಪದಿ	೩	೩೫
ಕೆಂದ	ಕೆಂಪಾದ (ಧಾ. ಕೆಂದು)	೪	೫

		ಸಂಧಿ	ಪದ್ಯ
ಕೇಣ	ಸಿಟ್ಟು	೧೧	೧೪
ಕೇಸರಿಯ ಪೀಠ	ಸಿಂಹಾಸನ	೧	೪೭
ಕೈ ಎಡೆಗೊಡು	ಒಪ್ಪಿಸಿಕೊಡು ; ಅಧೀನಕ್ಕೊಪ್ಪಿಸು	೨	೧
ಕೈವಾರಿಸು	ಹೊಗಳು	೮	೩೫
ಕೊಣ	ಕೊಳ, ಪುಷ್ಕರಿಣಿ	೧೩	೫
ಕೊನತುದು	ಚಿಗುರಿದುದು	೧	೧೨
ಕೊಲ್ಲಣಿಕೆ	ಸಂದಣಿ, ದಟ್ಟಣೆ	೧೨	೮
ಕೋಳುಗುಳ	ಕಾಳಗ, ಯುದ್ಧರಂಗ	೯	೧೭
ಕ್ಷೋಣಿ	ಭೂಮಿ	೧೧	೧೪
ಖ			
ಖಂಡಪರಶು	ಶಿವ	೯	೩೭
ಖಂಡೆಯ	ಕತ್ತಿ	೪	೩೯
ಖೋಡಿ	ಸಂಶಯ, ಮೋಸ	೩	೬೨
ಗ			
ಗಂಡಕ	ಖಡ್ಗಮೃಗ	೬	೯
ಗಂಹರ (= ಗಹ್ವರ–ಗವ್ಹರ)	ಗುಹೆ ; ಕಾಡು	೫	೧೯
ಗರ	ಗ್ರಹ	೧	೩೮
ಗರಳ	ವಿಷ	೬	೬೭
ಗರುವ	ಶ್ರೇಷ್ಠ, ಉತ್ತಮ	೪	೭
ಗರಿಟು	ಹೂವಿನ ಎಸಳು, ಒಂದು ಲೋಹದ ಮೇಲೆ ಹಾಕುವ ಮತ್ತೊಂದು ಲೋಹದ ಹೊದಿಕೆ	೧	೩೩
ಗುಗ್ಗುಳ	ಒಂದು ಜಾತಿಯ ಮರ. ಇದರಿಂದ ದೊರಕುವ ಅಂಟನ್ನು ಧೂಪಕ್ಕೆ ಉಪಯೋಗಿಸಲಾಗುತ್ತದೆ	೬	೭
ಗೃಹಿ	ಗೃಹಿಣಿ ; ಗರತಿ, ಹೆಂಡತಿ (?)	೬	೧೭
ಗಲ್ಲಿಸು	ಪೀಡಿಸು, ಅಲ್ಲಾಡಿಸು	೮	೬೩
ಗಾಢಿಕೆ	ಉರವಣೆ, ಹೆಚ್ಚಳ	೮	೧

		ಸಂಧಿ	ಪದ್ಯ
ಗಾಂಧೆ	ಗಾಂಧಾರೀ (?)	೪	೯
ಗಾಹು	ಪ್ರಭಾವ, ಹಿಡಿದ	೧	೧೦
ಗ್ರಾಸ	ಆಹಾರ	೧೪	೩
ಗೂಢಣಿಕೆ	?	೬	೧೦
ಗೋಟು	ಗೊಂಟು, ದಿಕ್ಕು, ಮೂಲೆ	೧	೩೨
ಗೋನಾಳಿ	ಗಂಟಲು, ಕೊರಳು	೮	೪೧
ಗೋಮಿನಿ	ಗೋಪಿ, ಗೋಪಾಲಿಕೆ	೫	೨೨
ಗೌಳ	ಗೌಡ, ಒಂದು ದೇಶ	೧	೨೪
ಘ			
ಘಾಡಿ	ಗಾಢಿ, ಅತಿಶಯ	೬	೧೧
ಘೋರ	ದುರುಳ, ಭಯಂಕರನಾದವನು	೫	೧೫
ಚ			
ಚುಕ್ಕಿಗ	ನೀಚ, ದುಷ್ಟ	೩	೨೩
ಚೂಣಿ	ಮುಂದಳ, ಯುದ್ಧದಲ್ಲಿ ಮುಂದೆ ನಿಲ್ಲುವ ಸೈನ್ಯ	೧	೪
ಚರ್ಮಾಂಬು	ಬೆವರು	೭	೩
ಚೆಚ್ಚರು	ತೀವ್ರತೆ, ವೇಗ	೬	೧೦
ಚೈಮುಂಡಾಡು	ಮುದ್ದಾಡು	೩	೪೦
ಚೊಕ್ಕೆಯ	ಉಪಾಯ, ಸಾಮರ್ಥ್ಯ ; ಪಟ್ಟು, ವರಿಸೆ	೮	೪೪
ಜ			
ಜಕ್ಕುಲಿಸು	ಸೋಲಿಸು, ಆವರಿಸು	೮	೪೪
ಜಗಜ್ಜನಿ	ಹೆಣ್ಣು ; ಸ್ತ್ರೀ	೫	೨೯
ಜನಜಾಳ	ಜನಸಮೂಹ	೨	೧
ಜರಿ	ಹಿಂಜರಿ, ಹಿಂದೆಗೆ	೧	೨೯
ಜವಾದಿ	ಒಂದು ಬಗೆಯ ಸುಗಂಧ ದ್ರವ್ಯ, ಪುನುಗು	೧	೩೩
ಜಾನತನ	ಚಿಂತೆ, ಯೋಚನೆ	೧	೫೨
ಜಾನು	ಮೊಳಕಾಲು, ಮಂಡಿ	೬	೩೧
ಜಾಳಿಗೆ	ಬಲೆ	೧೨	೧೭
ಜೀವನ	ನೀರು	೬	೨

		ಸಂಧಿ	ಪದ್ಯ
ಜೊಕ್ಕೆಯ	ಒಂದು ಬಗೆಯ ಹಿಡಿತ, ಪಟ್ಟು (?)	೮	೪೪
ಜೋಡು	ಕವಚ	೨	೧೫
ಜ್ಞಾತಿ	ತಂದೆಯ ಕಡೆಯ ಬಂಧು, ದಾಯಾದಿ	೧೪	೧೩
ಝ			
ಝಕ್ಕಿ	ಯಕ್ಷಿ(ಣಿ) (ಯಕ್ಷಿ > ಜಕ್ಕಿ, ಝಕ್ಕಿ)	೧೩	೫೮
ಠ			
ಠಾವು	ಸ್ಥಳ	೨	೮
ಡ			
ಡಗೆ	ಉರಿ, ಬೇಗೆ	೬	೨
ಡೆಂಡಣಿಸು	ಕ್ಷೀಣಿಸು, ಕೊರಗು	೬	೩೫
ಥ			
ಥಾಕಿಸು	ಡಾಕಿಸು, ಪ್ರತಿಭಟಿಸು, ಆಕ್ರಮಿಸು	೫	೯
ಥಾವರ	ಡಾವರ, ತೊಂದರೆ, ದಾಹ	೫	೧೯
ಥಾವರಿಸು	ಡಾವರಿಸು, ಹೆಚ್ಚಾಗು, ಹಬ್ಬು	೬	೩೪
ಥಾಳ	ಡಾಳ, ವೈಭವ, ಥಳುಕು	೪	೪೦
ಥೊಕ್ಕರಿಸು	ಡೊಕ್ಕರಿಸು, ಮುರುಟು, ಒತ್ತಿಹಿಡಿ	೮	೬
ತ			
ತಡ	ತಟ, ದಡ	೮	೪೦
ತತಿ	ಸಮೂಹ	೧	೩೩
ತರಣಿ	ಸೂರ್ಯ	೧	೪೬
ತರವಾರ	ಖಡ್ಗ, ತಲವಾರ	೮	೨೧
ತರವಾರ ತೀರ್ಥ	ರಕ್ತ	೮	೨೧
ತಳಿಗೆ	ಹರಿವಾಣ, ತಟ್ಟೆ	೧	೪೭
ತಳಿದ	ಚಿಮುಕಿಸಿದ	೧	೩೪
ತಳುವು	ಸಾವಕಾಶ, ನಿಧಾನ	೩	೪೦
ತಾಣುಗೆ	ತಾಲುಗೆ	೮	೩೧
ತಾಮರಸ	ತಾವರೆ, ಕಮಲ	೬	೧೯

		ಸಂಧಿ	ಪದ್ಯ
ತಾಮಸ	ವಿಳಂಬ, ಸಾವಕಾಶ	೮	೩೧
ತಾರು	ಓಡು, ಶಕ್ತಿಗುಂದು	೬	೩೧
ತಾಲುಗೆ	ಕಿರುನಾಲಿಗೆ, ಗಂಟಲು	೮	೭
ತಿಗಳ	ತಮಿಳುನಾಡು	೧	೨೪
ತೀವು	ತುಂಬು, ತುಂಬಿಸು	೧	೩೦
ತುಂಗ	ಶ್ರೇಷ್ಠ	೩	೪
ತುಡುಕು	ತಾಗು, ಮುಟ್ಟು	೩	೧೧
ತುಷಾರ	ತುಂತುರು, ಹನಿ	೮	೨
ತೆಗೆಬಗೆ	ಪ್ರಾಣಹೋಗುವ ಸ್ಥಿತಿ, ಕಸಿವಿಸಿ	೮	೧೫
ತೆತ್ತವು	ಮುಚ್ಚಿಕೊಂಡುವು	೪	೧೪
ತೆತ್ತಿಸು	ನಾಟಿಸು	೮	೨೫
ತೆಲುಂಗ	ತೆಲುಗು ದೇಶ	೧	೨೪
ತೊಳಸೆ	ಮಲ್ಲಯುದ್ಧ, ಕಾದಾಟ	೪	೧೪
ತೋಟಿ	ಜಗಳ, ಕಾದಾಟ	೩	೨೧
ತೋರ	ದೊಡ್ಡ	೬	೩೫
ತ್ರಿದಶ	ದೇವತೆ	೪	೨೯
ದ			
ದಂದುಗ	ತೊಂದರೆ	೧	೧೯
ದಲ್ಲಕೆಡಹು	ದಮನಮಾಡು, ನಾಶಮಾಡು	೫	೩
ದಳದು	ದಳೆದು (ಧಾ.ದಳೆ, ಒತ್ತಾಗು, ಹರಡು)	೪	೩
ದಾನವಧ್ವಂಸಿ	ಕೃಷ್ಣ	೧೧	೧೯
ದಾಯ	ಸಂದರ್ಭ, ಸಮಯ	೭	ಪದ
ದಾರಿಡು	ಮುಂದಕ್ಕೆ ಹೋಗು, ಮುಂದಕ್ಕೆ ಹರಿಯು	೭	೭
ದಿಂಡುಗೆಡೆ	ಉದ್ದಂಡ ನಮಸ್ಕರಿಸು	೧೧	೪
ದಿಗ್ವಸನ	ದಿಗಂಬರ, ಶಿವ	೧೨	೧೬
ದುಮ್ಮಾನ	ದುಃಖ	೩	೩೭
ದೂರ್ವೆ	ಗರಿಕೆ ಹುಲ್ಲು	೧	೪೦
ದೊರೆದು	(ಧಾ. ತೊರೆ) ಹಾಲುತುಂಬಿಕೊಡು	೯	೨೦
ದೃಗು	ಕಣ್ಣು	೪	೧೨

		ಸಂಧಿ	ಪದ್ಯ
ದೃಗುಜಲ	ಕಣ್ಣೀರು	೪	೩
ದೃಶ	ಸ್ಪೃಷ್ಟ, ಸೋಂಟ	೧೦	೧೦
ಧ			
ಧರಧುರ	ಆಧಿಕ್ಯ, ಹೆಚ್ಚಳ, ಅತಿಶಯತೆ	೯	೩೫
ಧಾತು	ಶಕ್ತಿ, ಸಾಮರ್ಥ್ಯ	೨	೨
ನ			
ನಗ	ಬೆಟ್ಟ	೭	೨೨
ನನ್ನಿ	ಸತ್ಯ	೩	೨೨
ನಭನಿನದ	ಆಕಾಶವಾಣಿ, ಅಶರೀರವಾಣಿ	೯	೨೩
ನರೆದೆಗೆದು	ಶಕ್ತಿಗುಂದಿ	೮	೧೯, ೨೩
ನಾಕ	ಸ್ವರ್ಗ	೨	೪
ನಾಗ	ಆನೆ	೧	೨೨
ನಾಗತಲ್ಪ	ಶೇಷಶಾಯಿ, ವಿಷ್ಣು	೧೧	೨೨
ನಾಗಯುತ ಸತ್ರಾಣ	ಆನೆಯಷ್ಟು ಬಲವುಳ್ಳವ, ಭೀಮ	೧	೨೨
ನಾಮೆ	ಕೀರ್ತಿ, ಯಶಸ್ಸು	೭	೨೭
ನಾಲ್ಕುಬುದ್ಧಿ	ಘೃತಬುದ್ಧಿ, ತೈಲಬುದ್ಧಿ, ರಸಬುದ್ಧಿ, ಜಲಬುದ್ಧಿ	೩	೩೦
ನಿಕರ	ಸಮೂಹ	೩	೧೭
ನಿಚಯ	ಸಮೂಹ	೧	೨೭
ನಿಚ್ಚ	ನಿತ್ಯ, ನಿರಂತರ	೧೩	೧೦
ನಿತಂಬಿನಿ	ಸ್ತ್ರೀ	೮	೧೩
ನಿದಾನ	ಶುದ್ಧಿ, ಅಂತ್ಯ	೧೧	೨೧
		೧೩	೭
ನಿಬ್ಬರ	ನಿರ್ಭರ ; ವೇಗ, ಅತಿಶಯ, ಆಧಿಕ್ಯ, ಹೆಚ್ಚಳ	೧೩	೭
ನಿರತಿಶಯ	ಶ್ರೇಷ್ಠ, ಅತ್ಯುತ್ತಮ	೧೨	೩೨
ನಿರುಗೆ	ಪ್ರದರ್ಶನ, ತೋರಿಕೆ	೧೧	೩
ನಿರುತ	ಸತ್ಯ	೪	೨೮
ನಿವಹ	ಸಮೂಹ	೧	೪೭

		ಸಂಧಿ	ಪದ್ಯ
ನಿಸ್ಪೃಹ	ಸ್ವಾರ್ಥವಿಲ್ಲದ, ನಿಸ್ವಾರ್ಥ	೧೦	೨೪
ನಿಸ್ಸಾಳ	ಒಂದು ಬಗೆಯ ಚರ್ಮವಾದ್ಯ	೧	೨೬
ನೀವಾಳಿ	'ದೃಷ್ಟಿ' ಪರಿಹಾರ	೧	೪೭
ನುಲಿ	ತಿರಿಚು	೧೦	೧೮
ನೆಗಹು	ಮೇಲಕ್ಕೇರು	೧	೩೫
ನೆಗಹು	ಎತ್ತು	೪	೧೬
ನೆಗಳು	ಆಳು, ಪ್ರಸಿದ್ಧಿಪಡಿಸು	೧	೨೦
ನೆಗಳು	ಉಂಟುಮಾಡು	೩	೨೨
ನೆಗ್ಗು	ಕುಗ್ಗು, ಕುಸಿ	೪	೧
ನೆರವಣಿಗೆ	ಗುಂಪು, ಸೇರುವಿಕೆ	೧೪	೬
ನೆರಹು	ಒಟ್ಟುಗೂಡಿಸು	೩	೧೪

ಪ

ಪಂಕರುಹಸಖ	ಕಮಲಮಿತ್ರ, ಸೂರ್ಯ	೫	೩೧
ಪಂಚಕಯಜ್ಞ	ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ, ಭೂತಯಜ್ಞ–ಎಂಬ ಐದು ಪಂಚಮಹಾಯಜ್ಞಗಳು	೨	೨೧
ಪದಹತ	ಪದಾಘಾತ	೧	೨೫
ಪರುಟವ	ವಿಸ್ತಾರ	೧೦	೩೧
ಪಹರೆ	ಜಾವ	೧	೪೪
ಪಾಠಕ	ಹೊಗಳುಭಟ್ಟ	೩	೧೦
ಪಾಯಕ	ಪಾದಾತಿದಳದ ಸೈನಿಕ	೪	೨
ಪಾಯದಳ	ಪದಾತಿ ಸೈನ್ಯ, ಕಾಲುಬಲ	೧	೨೫
ಪಾರುಖಾಣೆ	ಮರಣ, ಅವಸಾನ ; ನಾಶ	೫	೧೩
ಪಾವಕ	ಅಗ್ನಿ, ಬೆಂಕಿ	೨	೨೮
ಪಾಳಿ	ಸಮೂಹ, ಮೊತ್ತ; ಸರತಿ	೮	೨೩
ಪಿಂಡಿವಾಳ	ಒಂದು ಬಗೆಯ ಆಯುಧ (= ಭಿಂಡಿವಾಲ)	೧	೩೫
ಪಿತೃಪತಿ	ಯಮ	೨	೩೨
ಪುಂಗವ	ಶ್ರೇಷ್ಠ	೩	೪
ಪುರುಹೂತ	ದೇವೇಂದ್ರ	೪	೨೨
ಪುಳಿಂದ	ಬೇಡ	೬	೧೨

		ಸಂಧಿ	ಪದ್ಯ
ಪೂಗೀ	ಅಡಕೆ	೧	೩೦
ಪೂರ್ವಭಾಷಿತ	ಹಣೆಬರಹ, ವಿಧಿಲಿಖಿತ	೧೦	೩೬
ಪೆರೆ	ಅನುಭವ, ಸಮೂಹ	೨	೩
ಪೊಡವಟ್ಟು	(ಧಾ. ಪೊಡವಡು) ನಮಸ್ಕಾರ ಮಾಡಿ	೩	೫
ಪೌಂಡ್ರಕ	ವಸುದೇವನೆಂಬ ರಾಜನ ಮಗ ; ಈತ ಕೃಷ್ಣನಿಂದ ಹತನಾದನು	೧೧	೪
ಪ್ರವರ	ಶ್ರೇಷ್ಠ, ವಂಶಾವಳಿ, ಸಂತತಿ	೧	೪೯
ಪ್ರಸರ	ಸಮೂಹ	೧೨	೧೬
ಬ			
ಬಂಧಿಗಾರ	ಕೈದಿ	೨	೨೩
ಬಟ್ಟರು	ಭಟರು	೩	೧೧
ಬನ್ನ	ಕಷ್ಟ	೧	೨೧
ಬರತುದು	ಒಣಗಿದುದು, ಇಂಗಿದುದು	೮	೯
ಬರೆತ	ಆರಿಹೋದ, ಒಣಗಿದ	೭	೩
ಬರ್ಬರ	ಒಂದು ದೇಶ	೧	೨೪
ಬಳೆಬಳೆ	ಗಂಟಲಿನ ಮೂಳೆ, ಎಲುಬು	೬	೩೧
ಬಾಣಸ	ಅಡುಗೆ	೮	೨೪, ೨೬
ಬಾದರಾಯಣ	ವೇದವ್ಯಾಸ	೧	೨೩
ಬಾಹತ್ತರ	ಎಪ್ಪತ್ತೆರಡು	೩	೧೯
ಬಿಕ್ಕುಳು	ಉಗ್ಗುವಿಕೆ, ಬಿಕ್ಕಳಿಸು	೮	೩೧
ಬಿರುವ	ಬಿರುಸಾದ	೪	೯
ಬಿರುವಡಸು	ದಿಗ್ಭ್ರಮೆಗೊಳ್ಳು, ಭಯಗೊಳ್ಳು	೮	೫
ಬಿರುವೊಯ್ಲು	ಕಠೋರವಾದ ಹೊಡೆತ, ಗಜಬಿಜಿ	೪	೯
ಬೀಯ(=ವ್ಯಯ)	ನಾಶ, ಅಳಿವು	೩	೮
ಬೀಳುಗೊಳ್ಳು	ಬಿಟ್ಟುಬಿಡು	೩	೬
ಬೆಗಡುಗೊಳಿಸು	ಭಯಪಡಿಸು	೩	೨೯
ಬೆದವಡು	ವ್ಯಥೆಪಡು	೯	೨೪
ಬೆಸನ	ಆಜ್ಞೆ	೬	೧೬
ಬೆಸಸಿದು	ಅಪ್ಪಣೆಮಾಡಿ	೩	೪
ಬೇಗುದಿ	ಸಂಕಟ	೪	೧೮

		ಸಂಧಿ	ಪದ್ಯ
ಭ			
ಭರ	ಆಧಿಕ್ಯ, ಹೆಚ್ಚಳ, ಭಾರ	೩	೩೫
ಭಲ್ಲೂಕ	ಕರಡಿ	೬	೯
ಭವ	ಶಿವ	೪	೨೦
ಭಾಂಡ	ಪಾತ್ರೆ	೧	೮
ಭಾವೆ(=ಭಾಮೆ)	ಸ್ತ್ರೀ ; ಹೆಂಗಸು ; ಹೆಂಡತಿ	೫	೨೮
ಭೂರಿಶ್ರವ	ಕೌರವ ಪಕ್ಷದಿಂದ ಕಾದಾಡಿ ಸಾತ್ಯಕಿಯಿಂದ ಹತನಾದ ಒಬ್ಬ ಮಹಾರಥಿ	೧೨	೩೦
ಭೃಂಗಿ	ಶಿವನ ಪರಿವಾರದಲ್ಲಿ ಒಬ್ಬ	೧೨	೧೦
ಮ			
ಮಕರ	ಕುಬೇರನ ನವನಿಧಿಗಳಲ್ಲೊಂದು	೧	೩೩
ಮತ್ತಿ	ಒಂದು ಜಾತಿಯ ಮರ	೬	೫
ಮನ್ನೆಯ	ನಾಯಕ, ಮುಖಂಡ	೪	೧೪
ಮರಕತ	ಪಚ್ಚೆ, ನವರತ್ನಗಳಲ್ಲೊಂದು	೧	೩೨
ಮರ್ದಿಸು	ಅಡಗಿಸು, ನಾಶಗೊಳಿಸು	೮	೨೯
ಮಾಗಿ	ಚಳಿಗಾಲ	೧	೨೨
ಮಾಡ	ಸೌಧ, ಉಪ್ಪರಿಗೆ	೧೦	೨೧
ಮಾದುದು	ಇಲ್ಲವಾಯಿತು	೧೩	೬
ಮಿರುಪ	ಹೊಳೆಯುವ, ಮಿರುಗುವ	೧	೩೩
ಮುಗಿ	ಮುಚ್ಚು	೪	೩
ಮುಗ್ಗು	ನಾಶವಾಗು	೧೪	೧೦
ಮುಡುಗು	ಕುಗ್ಗು, ಮುದುಡಿಕೊಳ್ಳು, ಬಾಗು, ವಕ್ರವಾಗು	೮	೨೩
ಮುದ್ದಾಡು	ಮುದ್ದಿಸು, ಪ್ರೀತಿಸು	೩	೩೮
ಮುದ್ಗರ	ಗದೆ	೧	೩೫
ಮುಸಲ	ಒನಕೆ	೧೪	೧೬
ಮೂರು ವರ್ಗ	(ತ್ರಿವರ್ಗ) ಧರ್ಮ, ಅರ್ಥ, ಕಾಮ	೩	೩೦
ಮೂರು ಶಕ್ತಿ	ಶಕ್ತಿತ್ರಯ (ಜ್ಞಾನ, ಇಚ್ಛಾ, ಕ್ರಿಯಾ ಅಥವಾ ಉತ್ಸಾಹಶಕ್ತಿ, ಪ್ರಭುಶಕ್ತಿ ಮತ್ತು ಮಂತ್ರಶಕ್ತಿ)	೩	೩೦

		ಸಂಧಿ	ಪದ್ಯ
ಮೂರ್ತ	ಮುಹೂರ್ತ	೧	೩೬
ಮೃಗಮದ	ಕಸ್ತೂರಿ	೧	೩೩
ಮೇದಿನಿ	ಭೂಮಿ	೩	೯
ಮೇಲಬರಿ	ಪಕ್ಕೆಯ ಮೇಲುಭಾಗ	೮	೧೫
ಮೇಲೆ	ಮೇರೆ, ಗಡಿ, ವೇಳೆ	೧	೨೯
ಮೊಗರಂಬ	ಮುಖವಾಡ	೧	೩೬
ಮೊಚ್ಚೆ	ಪಾದರಕ್ಷೆ	೧	೩೪
ಮೊಟ್ಟೆ	ಹೊರೆ, ಗಂಟುಮೂಟೆ	೧	೬
ಯ			
ಯಕ್ಷಕರ್ದಮ	ಕಸ್ತೂರಿ ಮುಂತಾದ ಸುಗಂಧಗಳಿಂದ ಮಾಡಿದ ಒಂದು ಬಗೆಯ ದ್ರವ್ಯ	೧೧	೨
ರ			
ರಕ್ಕೆ	ಎಚ್ಚರಿಕೆ, ರಕ್ಷೆ	೮	೨೨
ರಕ್ತೌದನ (ರಕ್ತ+ಓದನ)	ರಕ್ತದಲ್ಲಿ ಕಲಸಿದ ಅನ್ನ: ರಕ್ತಾನ್ನ	೧	೪೨
ರಜ	ಧೂಳು	೧	೨೫
ರಜನಿ	ರಾತ್ರಿ	೫	೩೧
ರವ	ಶಬ್ದ	೩	೧೧
ರಾಜವದನೆ	ಚಂದ್ರವದನೆ	೧೪	೨
ರಾಯಸ	ರಾಜ, ಗುರುಹಿರಿಯರಿಂದ ತರುವ ಪತ್ರ ನಿರೂಪ	೪	೩೧
ರಿಂಚೆ	ಆನೆಕುದುರೆಗಳ ಹಕ್ಕರಿಕೆ, ಗುಳ	೧	೩೬
ರೌಕುಳ	ಆಧಿಕ್ಯ, ಹೆಚ್ಚಳ	೪	೧೨
ರೌರವ	ಒಂದು ಬಗೆಯ ಭೀಕರ ನರಕ; ನರಕ ಯಾತನೆ (?)	೫	೧೫
ಲ			
ಲತೆ	ತೆಳ್ಳನೆಯ ಹೆಂಗಸು	೪	೩
ಲಹರಿ	ಪ್ರವಾಹ, ತೆರೆ	೬	೩೫

		ಸಂಧಿ	ಪದ್ಯ
ಲಳಿ	ಆವೇಶ, ರಭಸ, ಆವೇಗ	೩	೧೬
ಲಾವಣಿಗೆ	ಮೊತ್ತ, ರಾಶಿ, ವೇಗ	೧೦	೧೬
ಲುಳಿ	ವೇಗ, ಹೊಳಪು	೧೦	೧೬
ಲೋವೆ	ಇಳಿಜಾರಾದ ಸೂರು, ಗೋಡೆಯಿಂದ ಮುಂಚಾಚಿದ ಭಾಗ	೧	೩೨

ವ

ವಂಗಡ	ಸಮೂಹ, ಗುಂಪು ; ಪಂಗಡ	೬	೯
ವಂದಿ	ಬಂದಿ, ಸೆರೆಯಾಳು	೧	೨೭
ವಜ್ರಿ	ದೇವೇಂದ್ರ	೧೦	೧೨
ವಟಕುಜ	ವಟವೃಕ್ಷ, ಆಲದಮರ	೬	೧
ವನ	ನೀರು	೧೧	೧೨
ವರೂಥ	ರಥ	೧	೨೪
ವಲ್ಲರಿ	ಲತೆ, ಬಳ್ಳಿ	೧೧	೨೨
ವಹಿಲ	ವೇಗ	೫	೨೬
ವೃಂದಾರಕ	ದೇವತೆ	೨	೨೩
ವೃಕೋದರ	ಭೀಮ	೩	೩೪
ವಾಯ	ನಾಶ (?) ; ಹುಸಿ, ನೆಪ ; ಮೋಸ	೩	೮
		೯	೧೪
ವಾರಣ	ಆನೆ	೪	೬
ವಾಸವ	ಇಂದ್ರ	೧	೧
ವಾಸಿ	ವಚನ, ಭಾಷೆ	೫	೧೧
ವ್ರಾತ	ಸಮೂಹ	೨	೨
ವಿಕಳ	ನ್ಯೂನತೆ	೪	೧೫
ವಿಗಡತನ	ಕ್ರೌರ್ಯ, ಉದ್ಧಟತನ	೧	೫
ವಿಡಾಯಿ	ಹೆಚ್ಚಳ	೧	೨೫
ವಿನತೆಯನಯೇರುವನ	ಕೃಷ್ಣನನ್ನು (ವಿನತೆಯನ= ವಿನತಾಪುತ್ರನನ್ನು, ಗರುಡನನ್ನು)	೧	೫೨
ವಿಬುಧ	ಪಂಡಿತ, ದೇವತೆ	೩	೧೫
ವಿಭಾಡಿಸು	ನಾಶಮಾಡು	೪	೭
ವಿರಿಂಚಿ	ಬ್ರಹ್ಮ	೧	೩

		ಸಂಧಿ	ಪದ್ಯ
ವಿರುದನ	ವಿಶೇಷವಾದ ರೋದನ, ಹೆಚ್ಚಾದ ಅಳುವಿಕೆ	೮	೨೯
ವಿಸರುಹ	ಕಮಲ	೧೨	೧೪
ವಿಹ್ವಲ	ವ್ಯಾಕುಲ	೨	೨೨
ವೈನತೇಯ	ಗರುಡ	೧	೫೨
ವೈಮನಸ್ಯ	ಅಪಾರ ದುಃಖ	೩	೧೬
ವೈವಸ್ವತ	ಯಮ	೬	೧೮
ಶ			
ಶಾದ್ವಲ	ಹಸುರು ಹುಲ್ಲಿನಿಂದ ತುಂಬಿದ ಸ್ಥಳ	೧೪	೧೬
ಶುದ್ಧಿ	ಸುದ್ದಿ, ಸಮಾಚಾರ, ವಾರ್ತೆ	೧೪	೪
ಷ			
ಷಟ್ಕರ್ಮ	ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತಿಗ್ರಹ	೨	೨೧
ಸ			
ಸಂಕ್ರಂದನ	ಇಂದ್ರ	೧	೪೫
ಸಂಗಾತ	ಒಟ್ಟಿಗೆ	೨	೯
ಸತ್ರಾಣ	ಶಕ್ತಿಯುತ	೧	೨೨
ಸನ್ನಿಭ	ಸದೃಶ	೩	೧೭
ಸಪ್ತಜಿಹ್ವ	ಅಗ್ನಿ	೮	೩೪
ಸಪ್ತಾಂಗ	ಸ್ವಾಮಿ, ಅಮಾತ್ಯ, ಜನಪದ, ದುರ್ಗ, ಕೋಶ, ಸೈನ್ಯ ಮತ್ತು ಮಿತ್ರ–ಎಂಬ ರಾಜ್ಯಾಡಳಿತದ ಏಳು ಅಂಗಗಳು	೩	೩೦
ಸಬಳ	ಈಟಿ	೮	೨೫
ಸರ್ಬ	ಸರ್ಪ	೧೩	೬
ಸಮೀರ	ಗಾಳಿ	೬	೨೮
ಸಮೀರಣ	ಗಾಳಿ	೨	೨೮
ಸರಳು	ಬಾಣ	೧	೩೪
ಸರುಸಪ (ಸರ್ಷಪ, ಸಂ.)	ಸಾಸಿವೆ	೧	೪೦

		ಸಂಧಿ	ಪದ್ಯ
ಸವಗ	ಕವಚ (ಕವಚ > ಚವಗ > ಸವಗ ?)	೧	೩೪
ಸಾವು	ತಾಳ್ಮೆ, ಸಹನೆ	೬	೩೧
ಸಾರೆಬರು	ಹತ್ತಿರಕ್ಕೆ ಬರು, ಸಮೀಪಿಸು	೧	೪೪
ಸೆಲ್ಲಹ	ಶಲ್ಯ, ಈಟಿ	೧	೩೫
ಸಹಭವ	ಸಹೋದರ, ಒಡಹುಟ್ಟಿದವ	೧	೬
ಸಾಧು	ಶುದ್ಧವಾದ	೧	೩೩
ಸಾಯುಜ್ಯ	ಒಂದು ವಿಧದ ಮುಕ್ತಿ	೧೧	೫೯
ಸಾರಿ	ಬಳಿ ಸೇರಿ, ಹತ್ತಿರಹೋಗಿ	೬	೩೧
ಸಿಂಧು	ಪ್ರವಾಹ, ನದಿ	೫	೩೨
ಸಿತಗ	ನೀಚ, ದುಷ್ಟ	೪	೨೩
ಸಿತಗಳ	ಶಿವ	೪	೨೧
ಸಿತರಾಜೀವ	ಬೆಳ್ದಾವರೆ	೬	೧೧
ಸೀಸಕ	ಶಿರಸ್ತ್ರಾಣ	೧	೩೪
ಸುತ್ರಾಮ	ಇಂದ್ರ	೩	೧೬
ಸುಧಾಸೂತಿ	ಚಂದ್ರ	೫	೩೨
ಸುರಗಿ	ಕತ್ತಿ	೧	೩೫
ಸುರಪ	ದೇವೇಂದ್ರ	೨	೩೨
ಸುರಭೂರುಹ	ಕಲ್ಪವೃಕ್ಷ	೮	೩೫
ಸೂಳವಿಸು	ಗಟ್ಟಿಯಾಗಿ ಧ್ವನಿಮಾಡು, ಮೊಳಗು	೧	೨೬
ಸೆಳಸು	ಸೆಣಸು, ಕಾದಾಡು	೪	೧೮
ಸೇಸೆ	ಮಂತ್ರಾಕ್ಷತೆ	೧	೪೬
ಸೊರೆದು	ಸುರಿದು	೭	೨೦
ಸೋಹೆ	ರಕ್ಷಿಸು (?)	೫	೨೪
ಹ			
ಹಕ್ಕರಿಕೆ (= ಸಂ. ಪಕ್ಷರಕ್ಷೆ)	ರಕ್ಷಣೆಕೊಡುವ ಪಕ್ಕದ ಹೊದಿಕೆ	೧	೩೬
ಹಕ್ಕಲು	ನಿಷ್ಪ್ರಯೋಜಕ	೮	೨೦
ಹತ್ತೆ	ಸಮೀಪ	೧೨	೩೦
ಹದನ	ವಾರ್ತೆ	೩	೩೫
ಹದುಗು	ಅಮುಕು	೪	೨೫

		ಸಂಧಿ	ಪದ್ಯ
ಹದುಳ	ಸಮಾಧಾನ, ನೆಮ್ಮದಿ	೩	೨
ಹರಗೆಡಿಸು	ಅತಿಯಾಗಿ ನೋಯಿಸು, ಹೊಡೆದೋಡಿಸು	೧	೧೨
ಹರಿವಿಷ್ಟರ	ಸಿಂಹಾಸನ	೧	೪೦
ಹರಿಹಯ	ಇಂದ್ರ	೮	೩೪
ಹರೆ	(ಹ.ಗ.ಹಜೆ[3]) ತಮಟೆ	೧	೪೪
ಹಲ್ಲಣ	ಕುದುರೆಗೆ ಹಾಕುವ ಜೀನು	೧	೩೬
ಹವಣಿಸು	ಒದಗು	೧	೧೧
ಹಳಚು	ರಭಸದಿಂದ ತಾಗು	೭	೭
ಹಳೆಯರು	ಹಿರಿಯರು, ಪೂರ್ವಜರು	೩	೩೯
ಹಾಲೆ	ಸಪ್ತಪರ್ಣಿ ಎಂಬ ಗಿಡ	೬	೫
ಹಾಸ	ನಗು, ಸಂತೋಷ	೧೨	೨
ಹಾಹೆ	ಗೊಂಬೆ	೧೧	೨
ಹಿಂದುಗಳೆ	ಅಲಕ್ಷಿಸು	೩	೭
ಹುಯ್ಯಲು	ಗೋಳು	೫	೨೪
ಹೆಂಟೆ	ಮಣ್ಣಿನ ಗಟ್ಟಿ	೧	೫
ಹೇದೈಸು	ಹೆದರು	೮	೩೫
ಹೇಷಾರವ	ಕುದುರೆಯ ಕೆನೆತ	೧೦	೧೭
ಹೊಟ್ಟುಗುಟ್ಟು	ಪುಡಿಪುಡಿ ಮಾಡು	೧೧	೧೦
ಹೊದಸಿ	ತುಂಬಿ, ಆವರಿಸಿ	೧	೨೫
ಹೊದರು	ಸಮೂಹ	೧	೨೫
ಹೊರಿಗೆ	ಹೊಣೆಗಾರಿಕೆ, ಜವಾಬ್ದಾರಿ	೧	೩೭
ಹೊರೆ	ಸೇರು, ಕೂಡು, ಹೊದಿಕೆ	೧೧	೩
ಹೊರೆಗೆ	ಬಳಿಗೆ	೧೨	೨೪
ಹೊರೆದ	ಬಳಿದ, ಲೇಪಿಸಿದ	೧	೩೩
ಹೊಲ್ಲಹ	ಕೆಟ್ಟತನ	೮	೨೭
ಹೊಲಬುದಪ್ಪು	ದಾರಿತಪ್ಪು, ಕಂಗೆಡು	೯	೧೨
ಹೋರು	ಹೋರಾಡು, ಕಾದಾಡು	೮	೨೫

— ೦ —

ಅನುಬಂಧ—೩

ಪದ್ಯಗಳ ಅಕಾರಾದಿ ಸೂಚಿ

ಆ

'ಸೂತಭಾರತ'ದ ಕವಿ ಯಾರೆಂಬುದು ತಿಳಿದುಬಂದಿಲ್ಲ. ಈತ ಕುಮಾರವ್ಯಾಸನಿಂದ ಪ್ರಭಾವಿತನಾಗಿರುವುದನ್ನು ಸಂಪಾದಕರು ಪೀಠಿಕೆಯಲ್ಲಿ ಸೋದಾಹರಣವಾಗಿ ಸ್ಪಷ್ಟಪಡಿಸಿದ್ದಾರೆ. ಹಾಗೂ ಅನೇಕಾಂಶಗಳಲ್ಲಿ ಸಂಸ್ಕೃತ ಮೂಲ ವ್ಯಾಸಭಾರತದಿಂದ ಭಿನ್ನವಾಗಿರುವುದನ್ನು ಸವಿವರವಾಗಿ ತೋರಿಸಿಕೊಟ್ಟಿರುತ್ತಾರೆ. ಕಾವ್ಯದ ಸೋಪಜ್ಞತೆಯನ್ನು ಮನವರಿಕೆ ಮಾಡಿಕೊಳ್ಳಲು ಸಂಪಾದಕರ ಶ್ಲಾಘ್ಯವಾದ ಈ ತೋಲನ ವಿಮರ್ಶೆ ಸಾರ್ಥಕವಾಗಿದೆ. ಅಂತೆಯೇ ಅವರು ಬರೆದಿರುವ, ಕಾವ್ಯ ವಿಮರ್ಶೆಯನ್ನು ಒಳಗೊಂಡ ವಿಸ್ತಾರವಾದ ಪೀಠಿಕೆ ಕಾವ್ಯಸ್ವರೂಪವನ್ನು ಗ್ರಹಿಸಲು ಸಹಕಾರಿಯಾಗಿದೆ. ಅನುಬಂಧಗಳನ್ನು ಕೂಡ ಬಹು ಶ್ರಮವಹಿಸಿ ತಯಾರಿಸಿದ್ದಾರೆ. ಈ ವಿದ್ವಾಂಸರಿಂದ ಇದೇ ರೀತಿಯ ಉತ್ತಮ ಮಟ್ಟದ ಗ್ರಂಥಸಂಪಾದನ ಕಾರ್ಯ ಮುಂದುವರಿದು, ಈ ಕ್ಷೇತ್ರದಲ್ಲಿ ಕಂಡುಬರುತ್ತಿರುವ ವಿದ್ವದಭಾವದ ಕೊರತೆ ಇಲ್ಲವಾಗಲು ನೆರವಾಗಲಿ ಎಂದು ಹಾರೈಸುತ್ತೇನೆ.